ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

47

ಜುಲೈ 1 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 76 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ನಿಮ್ಮ ಮತದಾನದ ಹಕ್ಕು ಉಳಿಸಿಕೊಳ್ಳಿ...

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ತಮ್ಮದೆ ಗಣತಿ ನಮೂನೆ ಭರ್ತಿಯೊಂದಿಗೆ ಸಿಎಂ ಡಿ.ಕೆ. ಶಿವಕುಮಾರ್ ಚಾಲನೆ


ಬೆಂಗಳೂರು, ಜೂ.30(ಕೆಎಂಶಿ)– ತಮ್ಮ ಎನ್ಯೂಮರೇಷನ್ ಫಾರಂ (ಗಣತಿ ನಮೂನೆ) ಭರ್ತಿ ಮಾಡುವ ಮೂಲಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರಾಜ್ಯದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೆ ಇಂದಿಲ್ಲಿ ಚಾಲನೆ ನೀಡಿದರು.

ತಮ್ಮ ನಿವಾಸದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಇತರೆ ಅಧಿಕಾರಿಗಳ ಸಮ್ಮುಖದಲ್ಲಿ ಶಿವಕುಮಾರ್ ಹಾಗೂ ಅವರ ಪತ್ನಿ ಉಷಾ ಗಣತಿ ನಮೂನೆ ತುಂಬಿದರು.

ಚುನಾವಣಾ ಆಯೋಗದ ಪೋರ್ಟಲ್‌ನಿಂದ ಎನ್ಯೂಮರೇಷನ್ ಫಾರಂ ಡೌನ್‌ಲೋಡ್‌ಗೆ
https://voters.eci.gov.in/

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ನನ್ನ ಮನೆ ಯಿಂದಲೇ ಚಾಲನೆ ನೀಡಲಾಗಿದೆ. ಎನ್ಯೂಮರೇಷನ್ ಅರ್ಜಿ ಭರ್ತಿ ಮಾಡಿ ಸಹಿ ಜೊತೆಗೆ ಸಲ್ಲಿಸಿರುವೆ ಎಂದರು. ಈ ಹಿಂದೆ ಮತದಾರರ ಪಟ್ಟಿಗೆ ಹೆಸರು ನೋಂದಣಿ ವೇಳೆ ನೀಡಿದ್ದ ದೂರವಾಣಿ ಸಂಖ್ಯೆ ಬದಲಾಗಿದ್ದರೆ ಹೊಸ ಸಂಖ್ಯೆಯನ್ನು ಅಧಿಕಾರಿಗಳಿಗೆ ನೀಡುವ ಮೂಲಕ ಸೇರ್ಪಡೆಗೆ ಅವಕಾಶ ಕಲ್ಪಿಸಲಾಗುತ್ತದೆ. ನೀವು ನೀಡುವ ಸಂಖ್ಯೆಗೆ ಒಟಿಪಿ ಬರಲಿದೆ.


ನಿಮ್ಮ ಹೆಸರಿನಲ್ಲಿ ತಿದ್ದುಪಡಿ ಮಾಡಿಕೊಳ್ಳಲೂ ಅವಕಾಶವಿದೆ. ಕುಟುಂಬದ ಸದಸ್ಯರ ಪೈಕಿ ಒಬ್ಬರು ಸಹಿ ಮಾಡಿದರೂ ನೋಂದಣಿ ಮಾನ್ಯವಾಗಲಿದೆ. ಕುಟುಂಬದ ಪರ ಒಬ್ಬರೇ ಎಲ್ಲರ ಅರ್ಜಿ ತುಂಬಬಹುದಾಗಿದೆ. ಮತದಾರರ ಪಟ್ಟಿಯಲ್ಲಿನ ಭಾವಚಿತ್ರ ಬದಲಿಸಿಕೊಳ್ಳಲು ಹೊಸ ಫೋಟೋ ನೀಡಬಹುದಾಗಿದೆ. ■6ನೇ ಪುಟಕ್ಕೆ



ಪತ್ನಿ ಉಷಾ ಅವರೊಂದಿಗೆ ಗಣತಿ ನಮೂನೆ ಭರ್ತಿ ಮಾಡುತ್ತಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ವೇಳಾಪಟ್ಟಿ

1. **ಜೂ.30–ಜು.29** ಬಿಎಲ್‌ಓಗಳಿಂದ ಮನೆ ಮನೆಗೆ ಭೇಟಿ
2. **ಆಗಸ್ಟ್ 5** ಮತದಾರರ ಕರಡು ಪಟ್ಟಿ ಪ್ರಕಟಣೆ
3. **ಆ.5 – ಸೆ.4** ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ
4. **ಆ.5 – ಅ. 3** ಹಕ್ಕು ಮತ್ತು ಆಕ್ಷೇಪಣೆಗಳ ವಿಲೇವಾರಿ
5. **ಅಕ್ಟೋಬರ್ 7** ಅಂತಿಮ ಮತದಾರರ ಪಟ್ಟಿ ಪ್ರಕಟಣೆ



ಮೈಸೂರು ಜಿಲ್ಲೆಯಲ್ಲಿ ಎಸ್‌ಐಆರ್ ಪ್ರಕ್ರಿಯೆ ಆರಂಭ

- 'ಶುದ್ಧ ಮತದಾರರ ಪಟ್ಟಿ' ತಯಾರಿಕೆಗೆ ಚುನಾವಣಾ ಆಯೋಗದ ದಿಟ್ಟ ಹೆಜ್ಜೆ
- ಬಿಎಲ್‌ಒಗಳಿಂದ ಪ್ರತಿ ಮನೆಗೆ ಭೇಟಿ ನೀಡಿ ಗಣತಿ ನಮೂನೆ ವಿತರಣೆ

ಮೈಸೂರು, ಜೂ. 30(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ ಇಂದು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಆರಂಭಿಸಲಾಯಿತು. ಚುನಾವಣಾ ಆಯೋಗದಿಂದ ನೇಮಕಗೊಂಡಿರುವ ಬಿಎಲ್‌ಒ (ಬೂತ್ ಲೆವೆಲ್ ಆಫೀಸರ್ಸ್) ಗಳು ಮೈಸೂರು ಜಿಲ್ಲೆಯ 2,915 ಮತಗಟ್ಟೆಗಳ ವ್ಯಾಪ್ತಿಯ ಪ್ರತಿಯೊಂದು ಮನೆಗಳಿಗೆ ಭೇಟಿ ನೀಡಿ ಎನ್ಯೂಮರೇಷನ್ ಫಾರಂ (Enumeration form)ಗಳನ್ನು ನೀಡುವ ಪ್ರಕ್ರಿಯೆ ಆರಂಭಿಸಿದ್ದಾರೆ.

ಮತದಾರರ ಪಟ್ಟಿಯಿಂದ ಅನರ್ಹ ಮತದಾರರನ್ನು ಕೈಬಿಟ್ಟು 'ಶುದ್ಧ ಮತದಾರರ ಪಟ್ಟಿ'ಯನ್ನು ತಯಾರಿಸಲು ಕೇಂದ್ರ ಚುನಾವಣಾ ಆಯೋಗ ಇಂದು ಕರ್ನಾಟಕದಲ್ಲಿ ಎಸ್‌ಐಆರ್ ಆರಂಭಿಸಿದೆ.

ಮೈಸೂರು ಜಿಲ್ಲೆಯ 11 ವಿಧಾನ ಸಭಾ ಕ್ಷೇತ್ರಗಳ 2,915 ಮತಗಟ್ಟೆಗಳ ಪ್ರತಿಯೊಂದು ಮನೆಗೂ ಭೇಟಿ ನೀಡಿ ಎನ್ಯೂಮರೇಷನ್ ಫಾರಂ ವಿತರಿಸಲು 2,915 ಬಿಎಲ್‌ಒಗಳನ್ನು ■6ನೇ ಪುಟಕ್ಕೆ



ಮೈಸೂರು ನಗರದಲ್ಲಿ ಮಂಗಳವಾರ ಬಿಎಲ್‌ಒಗಳು ಎಸ್‌ಐಆರ್ ಪ್ರಕ್ರಿಯೆ ಆರಂಭಿಸಿದ್ದು, ಪ್ರತಿ ಮನೆಗೆ ಭೇಟಿ ನೀಡಿ ಎನ್ಯೂಮರೇಷನ್ ಫಾರಂಗಳನ್ನು ವಿತರಿಸಿದರು.

> ಇಂದಿನಿಂದ ಎಸ್‌ಐಆರ್ ಪ್ರಕ್ರಿಯೆ ಆರಂಭವಾಗಿದೆ. ಮೈಸೂರು ಜಿಲ್ಲೆಯ 2,915 ಮತಗಟ್ಟೆಗಳ ವ್ಯಾಪ್ತಿಯ ಪ್ರತಿ ಮನೆಗೆ ಬಿಎಲ್‌ಒಗಳು ಭೇಟಿ ನೀಡಿ ಎನ್ಯೂಮರೇಷನ್ ಫಾರಂಗಳನ್ನು ವಿತರಣೆ ಮಾಡುತ್ತಿದ್ದಾರೆ. ಒಂದು ದಿನಕ್ಕೆ ಇಂತಿಷ್ಟೇ ಫಾರಂ ನೀಡಬೇಕೆಂದು ಸಂಖ್ಯೆ ಹಾಗೂ ಕಾಲಮಿತಿ ಹೇರಿಲ್ಲ. ಪ್ರತಿ ಮನೆಗೆ ತಪ್ಪದೆ ಅರ್ಜಿ ನೀಡುವುದು ಅವರ ಕರ್ತವ್ಯ. ಇದಕ್ಕೆ ಒಂದು ತಿಂಗಳ ಕಾಲಾವಕಾಶ ಇರುವ ಹಿನ್ನೆಲೆಯಲ್ಲಿ ಬಿಎಲ್‌ಒಗಳು ತಮ್ಮ ಕರ್ತವ್ಯವನ್ನು ಈ ಅವಧಿಯಲ್ಲಿ ಪೂರ್ಣಗೊಳಿಸಲಿದ್ದಾರೆ. ಫಾರಂ ವಿತರಣೆ ನಂತರ ಭರ್ತಿ ಮಾಡಿದ ಅರ್ಜಿಗಳನ್ನು ವಾಪಾಸು ಪಡೆಯುವ ಪ್ರಕ್ರಿಯೆ ನಂತರ ನಡೆಯಲಿದೆ.
>
> – ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾಧಿಕಾರಿ, ಮೈಸೂರು.

ಜು.8ಕ್ಕೆ ಸಂಪುಟ ವಿಸ್ತರಣೆ

- ಜು.2ಕ್ಕೆ ದೆಹಲಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್
- ಜು.3ಕ್ಕೆ ರಾಹುಲ್ ಗಾಂಧಿ ಭೇಟಿಯಾಗಿ ಪಟ್ಟಿಗೆ ಅನುಮೋದನೆ
- ಇನ್ನು 50 ವರ್ಷದೊಳಗಿನವರಿಗೆ ಸಂಪುಟದಲ್ಲಿ ಅವಕಾಶ
- ಸಿದ್ದರಾಮಯ್ಯ ಮೂಲಕ ಸಚಿವಾಕಾಂಕ್ಷಿಗಳ ಲಾಬಿ ಶುರು

ಬೆಂಗಳೂರು, ಜೂ.30(ಕೆಎಂಶಿ)– ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಮ್ಮ ಮಂತ್ರಿಮಂಡಲವನ್ನು ಜುಲೈ 8ರಂದು ವಿಸ್ತರಿಸಿ 18 ಮಂದಿಯನ್ನು ಸೇರ್ಪಡೆ ಮಾಡಿಕೊಳ್ಳಲಿದ್ದಾರೆ.

ಸಂಪುಟಕ್ಕೆ ಸೇರ್ಪಡೆ ಆಗುವವರ ಪಟ್ಟಿಗೆ ಅನುಮತಿ ಪಡೆಯಲು ಜುಲೈ 2ರ ರಾತ್ರಿ ದೆಹಲಿಗೆ ತೆರಳಲಿರುವ ಮುಖ್ಯಮಂತ್ರಿ, ಎರಡು–ಮೂರು ದಿನ ಅಲ್ಲೇ ಉಳಿಯಲಿದ್ದಾರೆ. ವಿದೇಶ ಪ್ರವಾಸದಲ್ಲಿರುವ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ, ಗುರುವಾರ ತಡರಾತ್ರಿ ರಾಷ್ಟ್ರಕ್ಕೆ ಹಿಂತಿರುಗಲಿದ್ದು, ಜುಲೈ 3ರಂದು ಅವರನ್ನು ಮುಖ್ಯಮಂತ್ರಿ ಭೇಟಿ ಮಾಡಿ ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ಚರ್ಚಿಸಿ ಪಟ್ಟಿಗೆ ಅನುಮೋದನೆ ಪಡೆಯಲಿದ್ದಾರೆ.

ರಾಹುಲ್ ಗಾಂಧಿ ಸೂಚನೆಯಂತೆ 50 ವರ್ಷದೊಳಗಿನವರಿಗೆ ಮಂತ್ರಿಮಂಡಲದಲ್ಲಿ ಅವಕಾಶ ಮಾಡಿಕೊಡುವ ಉದ್ದೇಶದಿಂದ ಸಂಭವನೀಯರ ಪಟ್ಟಿಯನ್ನು ಸಿದ್ಧಪಡಿಸಿದ್ದು, ಅದಕ್ಕೆ ಅನುಮತಿ ಪಡೆಯಲಿದ್ದಾರೆ. ರಾಹುಲ್ ಗಾಂಧಿ ಅಲ್ಲದೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನೂ ಭೇಟಿ ಮಾಡಿ ಈ ಸಂಬಂಧ ಚರ್ಚೆ ಮಾಡಲಿದ್ದಾರೆ. ಜೂನ್ 3ರಂದು ಅಧಿಕಾರ ವಹಿಸಿಕೊಂಡ ಶಿವಕುಮಾರ್ ಅಂದು ತಮ್ಮ ಮಂತ್ರಿಮಂಡಲಕ್ಕೆ ■6ನೇ ಪುಟಕ್ಕೆ

ವರ್ಷದಲ್ಲಿ ಕರ್ನಾಟಕ ಮಾದಕ ದ್ರವ್ಯ ಮುಕ್ತ

- ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಘೋಷಣೆ
- ಮಾದಕ ವಸ್ತು ಮಾಹಿತಿ ನೀಡುವವರಿಗೆ ಬಹುಮಾನ; ಅವರ ಮಾಹಿತಿ ಗೌಪ್ಯವಾಗಿಡುವ ಭರವಸೆ
- ವ್ಯಸನಯುಕ್ತ ಮಕ್ಕಳ ಪೋಷಕರು ಪೊಲೀಸರಿಗೆ ವಿಷಯ ತಿಳಿಸುವಂತೆ ಸಲಹೆ



ಮಾದಕ ದ್ರವ್ಯ ಮುಕ್ತ ಶಪಥ ಮಾಡುತ್ತಿರುವ ಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು, ಜೂ.30(ಕೆಎಂಶಿ)– ಒಂದು ವರ್ಷದಲ್ಲಿ ಕರ್ನಾಟಕವನ್ನು ಮಾದಕ ದ್ರವ್ಯ ಮುಕ್ತ ರಾಜ್ಯವನ್ನಾಗಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಘೋಷಿಸಿದ್ದಾರೆ.

ಸರ್ಕಾರದೊಂದಿಗೆ ಸಮಾಜ ಕೈ ಜೋಡಿಸಿದರೆ, ಈ ಪಿಡುಗು ತೊಲಗಿಸಲು ಬಹಳಷ್ಟು ದಿನಗಳು ಬೇಕಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೂರು ವರ್ಷಗಳಿಂದ ಮಾದಕದ್ರವ್ಯ ವಿರುದ್ಧ ಸಮರವನ್ನೇ ಸಾರಿದ್ದರೂ ಪೂರ್ಣ ಪ್ರಮಾಣದಲ್ಲಿ ಯಶಸ್ಸು ಸಾಧಿಸಲಾಗಿಲ್ಲ. ■6ನೇ ಪುಟಕ್ಕೆ

ಮೈಸೂರು ಮಿತ್ರ

ವಸತಿ ಹಕ್ಕಿಗಾಗಿ ಮೈಸೂರು ಪಾಲಿಕೆ ಮುಂದೆ ಪ್ರತಿಭಟನೆ



ಮೈಸೂರು ಪಾಲಿಕೆ ಮುಂದೆ ವಸತಿ, ನಿವೇಶನರಹಿತರ ಹೋರಾಟ ಸಮಿತಿ ನೇತೃತ್ವದಲ್ಲಿ ಸೂರಿಗಾಗಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.30(ಬಿಎಲ್‌ಯು)– ವಸತಿ ಹಾಗೂ ನಿವೇಶನದ ಹಕ್ಕಿಗಾಗಿ ಮೈಸೂರು ನಗರಪಾಲಿಕೆ ಮುಂದೆ ನೂರಾರು ಮಂದಿ ಮಂಗಳವಾರ ಪ್ರತಿಭಟನೆ ನಡೆಸಿದರು.

ವಸತಿ ಮತ್ತು ನಿವೇಶನ ರಹಿತರ ಹೋರಾಟ ಸಮಿತಿಯ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ವಸತಿ ಹಾಗೂ ನಿವೇಶನದ ಹಕ್ಕನ್ನು ಪ್ರತಿಪಾದಿಸಿದರು.

ರಾಜೀವ್ ಗಾಂಧಿ ವಸತಿ ನಿಗಮದ ಮಾಹಿತಿಯಂತೆ ಕರ್ನಾಟಕದಲ್ಲಿ 26,35, 820 ಕುಟುಂಬಗಳು ವಸತಿ ರಹಿತವಾಗಿದೆ. ಮೈಸೂರು ಜಿಲ್ಲೆಯಲ್ಲಿ 1,19,008 ಕುಟುಂಬಗಳು ಸೂರಿಲ್ಲದೆ ಬದುಕುತ್ತಿವೆ. ಅರ್ಜಿ ಸಲ್ಲಿಸದೆ ಇರುವ ಕುಟುಂಬಗಳನ್ನು ಪರಿಗಣಿಸಿದರೆ ಸುಮಾರು 2 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಮನೆಯಿಲ್ಲ ಎಂದು ಪ್ರತಿಭಟನಾಕಾರರು ಅಂಕಿಅಂಶಗಳ ಸಹಿತ ಆಕ್ರೋಶ ಹೊರಹಾಕಿದರು.

ಸರ್ಕಾರದ ವರದಿ ಪ್ರಕಾರ ಕೇಂದ್ರ ಸರ್ಕಾರ ವಸತಿಗಾಗಿ ಮೀಸಲಿಟ್ಟಿರುವ ಹಣ ಉಪಯೋಗಿಸದೆ ಹಾಗೆ ಉಳಿದಿದೆ. ನಗರ ಪಾಲಿಕೆ, ನಗರ ಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿಗಳು ವಸತಿರಹಿತರಿಂದ ಪಡೆದ ಅರ್ಜಿಗಳನ್ನು ರಾಜೀವ್ ಗಾಂಧಿ ವಸತಿ ನಿಗಮದ ವೆಬ್‌ಸೈಟ್‌ಗೆ ಅಪ್ ಲೋಡ್ ಮಾಡದೆ ನಿರ್ಲಕ್ಷ್ಯ ತೋರಿರುವುದು ಇದಕ್ಕೆ ಮೂಲ ಕಾರಣ ಎಂದು ಆಪಾದಿಸಿದರು.

ವಸತಿರಹಿತರಿಗೆ ಸೂರು ನೀಡಬೇಕೆಂದು ಆಗ್ರಹಿಸಿ ಈಗಾಗಲೇ ಬಳ್ಳಾರಿಯಿಂದ ಬೆಂಗಳೂರಿನವರಿಗೆ ಸಾವಿರ ಕಿಲೋ ಮೀಟರ್ ಪಾದಯಾತ್ರೆ ಮಾಡಿದ್ದೇವೆ. ಅದೇ ಬೇಡಿಕೆ ಮುಂದಿಟ್ಟು ಇಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ನಮ್ಮ ಬೇಡಿಕೆ ಈಡೇರದಿದ್ದರೆ ತೀವ್ರ ರೀತಿಯ ಹೋರಾಟ ಮಾಡಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಸಮಿತಿ ಅಧ್ಯಕ್ಷ ಹೆಚ್.ಬಿ.ರಾಮಕೃಷ್ಣ, ಕಾರ್ಯಾಧ್ಯಕ್ಷ ಎನ್.ಕೆ.ದೇವದಾಸ್, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸೋಮರಾಜೇ ಅರಸ್, ಉಪಾಧ್ಯಕ್ಷೆ ಲಕ್ಷ್ಮೀ, ಖಜಾಂಚಿ ಶಿವಣ್ಣ ಸೇರಿದಂತೆ ಅಪಾರ ಸಂಖ್ಯೆಯ ಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಹಕಾರ ಸಪ್ತಾಹ; ಗಿಡ ನೆಡುವ ಅಭಿಯಾನ ಆರಂಭ

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಚಾಲನೆ



ಸಹಕಾರ ಸಪ್ತಾಹದ ಅಂಗವಾಗಿ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ವತಿಯಿಂದ ಆಯೋಜಿಸಿರುವ ಗಿಡ ನೆಡುವ ಅಭಿಯಾನಕ್ಕೆ ಲಕ್ಷ್ಮೀಪುರಂ ಸರ್ಕಾರಿ ಶಾಲೆಯಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಚಾಲನೆ ನೀಡಿದರು.

ಮೈಸೂರು, ಜೂ.30(ಬಿಎಲ್‌ಯು)– ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತವು 'ಸಹಕಾರ ಸಪ್ತಾಹ'ದ ಅಂಗವಾಗಿ ಗಿಡ ನೆಡುವ ಅಭಿಯಾನ ಆರಂಭಿಸಿದೆ.

ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಶಾಲೆ ಆವರಣದಲ್ಲಿ ಮಂಗಳವಾರ ಅಭಿಯಾನಕ್ಕೆ ಚಾಲನೆ ನೀಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಶಾಲೆ ಆವರಣಗಳಲ್ಲಿ ಗಿಡ ನೆಡುವುದರಿಂದ ಅವುಗಳ ಪೋಷಣೆಗೆ ಅನುಕೂಲವಾಗುತ್ತದೆ. ಶಿಕ್ಷಕರ ಮಾರ್ಗದರ್ಶನದಲ್ಲಿ ಮಕ್ಕಳು ಗಿಡಗಳಿಗೆ ನೀರೆರದು ಪೋಷಣೆ ಮಾಡುತ್ತಾರೆ. ಇದರಿಂದ ಗಿಡಗಳು ಶೀಘ್ರ ಬೆಳವಣಿಗೆ ಆಗುತ್ತದೆ ಎಂದು ಅಭಿಪ್ರಾಯಪಟ್ಟರು.

ಇಂದು ಅರಣ್ಯ ನಾಶ ಮಾಡಿ ಕಾಂಕ್ರಿಟ್ ಕಾಡು ನಿರ್ಮಿಸಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಇಂದಿನ ಮಕ್ಕಳು ಶಾಲೆಗಳ ಆವರಣದಲ್ಲಿ ಹೆಚ್ಚಾಗಿ ಗಿಡಗಳನ್ನು ನೆಟ್ಟು ಬೆಳೆಸಿದರೆ ಮುಂದಿನ ಪೀಳಿಗೆಗೆ ಅದೇ ಗಿಡಗಳು ಮರವಾಗಿ, ನೆರಳಾಗುತ್ತದೆ. ಜೊತೆಗೆ ಉತ್ತಮ ಪರಿಸರ ವಾತಾವರಣ ನಿರ್ಮಾಣವಾಗುತ್ತದೆ ಎಂದು ಹೇಳಿದರು.

ಶಾಲೆಗಳು ಮಾತ್ರವಲ್ಲದೆ ಪ್ರತಿ ಮನೆಗಳಲ್ಲೂ ಗಿಡ ನೆಡಬೇಕು. ಇದಕ್ಕಾಗಿ ಮನೆ ಮನೆಗೆ ಗಿಡಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ರಾಜೀವ್ ತಿಳಿಸಿದರು.

ಜುಲೈ 6 ರವರೆಗೆ ಸಹಕಾರ ಸಪ್ತಾಹ ನಡೆಯಲಿದ್ದು, ಸಹಕಾರಿ ಸಂಘಗಳ ಕಚೇರಿ ಮಾತ್ರವಲ್ಲದೆ ಸೂಕ್ತ ಸ್ಥಳಗಳಲ್ಲಿ ಗಿಡಗಳನ್ನು ನೆಡುವ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಇಂದಿನ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ವೃತ್ತಿಪರ ನಿರ್ದೇಶಕ ವಿ.ಮಹದೇವ ಸ್ವಾಮಿ, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷ ಎಸ್.ಆರ್. ನಾರಾಯಣರಾವ್, ಸಹಕಾರ ಸಂಘಗಳ ಉಪ ನಿಬಂಧಕ ಮೋಹನ್ ಕುಮಾರ್, ಲಕ್ಷ್ಮೀಪುರಂ ಶಾಲೆಯ ಮುಖ್ಯೋಪಾಧ್ಯಾಯರಾದ ಮೀನಾಕುಮಾರಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವೀಣಾ ವಾದನ ಕಾರ್ಯಕ್ರಮ...



ಬೆಂಗಳೂರಿನ ವೈವಿಧ್ಯ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಶ್ರೀಮತಿ ವೈಷ್ಣವಿ ಸುಬ್ರಹ್ಮಣ್ಯ ಅವರು ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವೀಣಾ ವಾದನ ಕಾರ್ಯಕ್ರಮ ನಡೆಸಿಕೊಟ್ಟರು.

ಮೂತ್ರಜನಕಾಂಗ ಉಚಿತ ತಪಾಸಣೆ ಶಿಬಿರ

ಮೈಸೂರು, ಜೂ. 30– ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಜು.1ರಿಂದ 4ರವರೆವಿಗೆ ಮೂತ್ರಜನಕಾಂಗದ ಉಚಿತ ತಪಾಸಣಾ ಶಿಬಿರವನ್ನು ಬೆಳಗ್ಗೆ 10ರಿಂದ 12ರವರೆಗೆ ಆಯೋಜಿಸಲಾಗಿದೆ. ಶಿಬಿರದಲ್ಲಿ 50 ವರ್ಷ ಮೇಲ್ಪಟ್ಟ ವಯಸ್ಸಿನ, ಮಧು ಮೇಹ ರೋಗಿಗಳು, ಅಧಿಕ ರಕ್ತದೊತ್ತಡ ಇರುವವರು, ಮೂತ್ರಜನಕಾಂಗದಲ್ಲಿ ಕಲ್ಲು ಹಾಗೂ ಮೂತ್ರನಾಳದಲ್ಲಿ ಸೋಂಕು ಹೊಂದಿರುವವರು, ದೀರ್ಘ ಕಾಲದ ಮೂತ್ರಜನಕಾಂಗದ ಕಾಯಿಲೆ ಇರುವವರು ಹಾಗೂ ಕುಟುಂಬದಲ್ಲಿ ಮೂತ್ರಪಿಂಡದ ಸಮಸ್ಯೆ ಇರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗೆ 0821–2533600, 99863 99862 ಸಂಪರ್ಕಿಸಬಹುದು.

ಜು.3ರಿಂದ ಮೈಸೂರಲ್ಲಿ ರಾಜ್ಯಮಟ್ಟದ ಪೆಥಾಲಜಿ ಸಮ್ಮೇಳನ

ಮೈಸೂರು,ಜೂ.30(ಜಿಎ)–ಜೆಎಸ್‌ಎಸ್ ವೈದ್ಯಕೀಯ ಮಹಾ ವಿದ್ಯಾಲಯ ಹಾಗೂ ಕರ್ನಾಟಕ ಚಾಪ್ಟರ್ ಆಫ್ ಇಂಡಿಯನ್ ಅಸೋಸಿಯೇಷನ್ ಆಫ್ ಪೆಥಾಲಜಿಸ್ಟ್ ಅಂಡ್ ಮೈಕ್ರೊಬಯಾಲಜಿ ವತಿಯಿಂದ 52ನೇ ವಾರ್ಷಿಕ ರಾಜ್ಯಮಟ್ಟದ ಪೆಥಾಲಜಿ ಸಮ್ಮೇಳನವನ್ನು ಶಿವರಾತ್ರೀಶ್ವರ ನಗರದ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಲ್ಲಿ ಜು.3ರಿಂದ ಜು.5ರವರೆಗೆ ಆಯೋಜಿಸಲಾಗಿದೆ ಎಂದು ಪ್ರಾಧ್ಯಾಪಕರಾದ ಡಾ.ಶಿಲಾದೇವಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನಕ್ಕೆ 800ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಜು.3ರಂದು ಸಂಜೆ 4.15ಕ್ಕೆ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದ್ದು, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ದಾವಣಗೆರೆಯ ಜೆಜೆಎಂ ಮೆಡಿಕಲ್ ಕಾಲೇಜಿನ ಪ್ರಾಧ್ಯಾಪಕರಾದ ಡಾ.ಸುರೇಶ್ ಹನಗವಾಡಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕುಲಪತಿ ಡಾ.ಹೆಚ್. ಬಸವನಗೌಡಪ್ಪ, ಮೆಡಿಕಲ್ ನಿರ್ದೇಶಕ ಡಾ.ಸಿ.ಪಿ.ಮಧು, ಕರ್ನಾಟಕ ಚಾಪ್ಟರ್ ಆಫ್ ಇಂಡಿಯನ್ ಅಸೋಸಿಯೇಷನ್ ಆಫ್ ಪೆಥಾಲಜಿಸ್ಟ್ ಅಧ್ಯಕ್ಷ ಡಾ.ಕೆ.ವಿ.ಸಂತೋಷ್, ಕಾರ್ಯದರ್ಶಿ ಡಾ.ಆದಿತ್ಯ ಅಗ್ನಿಹೋತ್ರಿ, ಖಜಾಂಚಿ ಡಾ.ತೇಜಸ್ವಿ ಕೃಷ್ಣಮೂರ್ತಿ, ಪ್ರಾಂಶುಪಾಲ ಡಾ.ಡಿ.ನಾರಾಯಣಪ್ಪ, ಅತಿಥಿಗಳಾಗಿರುವರು. ಪ್ರೊಛಾನ್ಸಲರ್ ಡಾ.ಬಿ.ಸುರೇಶ್ ಅಧ್ಯಕ್ಷತೆ ವಹಿಸುವರು. ಸಮ್ಮೇಳನದಲ್ಲಿ ಕೌಶಲ್ಯ ವೃದ್ಧಿ ಕಾರ್ಯಾಗಾರ, ವೈಜ್ಞಾನಿಕ ಸ್ಪರ್ಧಾತ್ಮಕ ವೇದಿಕೆ, ಪ್ರಬಂಧ ಮಂಡನೆಗಳು ಸಹಾ ನಡೆಯಲಿವೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಸುಚಿತ, ಡಾ.ರಾಜಲಕ್ಷ್ಮಿ, ಡಾ.ಆಶಾ ಉಪಸ್ಥಿತರಿದ್ದರು.



ನಿವೃತ್ತಿ ಹೊಂದುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಅವರನ್ನು ಕದಂಬ ರಂಗವೇದಿಕೆ ವತಿಯಿಂದ ಸನ್ಮಾನಿಸಲಾಯಿತು. ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಜಯಪ್ರಕಾಶಗೌಡ, ನಿರ್ಮಲ ಮಠಪತಿ, ಮಂಡ್ಯ ರಮೇಶ್, ಸುರೇಶ್ ಬಾಬು, ಕೃಪಾಫಡ್ಕೆ, ತಿಪ್ಪಣ್ಣ, ಅಶ್ವತ್ಥ ಕದಂಬ, ಸಂಸ ಸುರೇಶ್, ದೀಪಕ್, ನಾಗರಾಜ ಬೈರಿ, ನಾಗಭೂಷಣ್ ಮತ್ತಿತರರು ಹಾಜರಿದ್ದರು.

ವಿವಿಧ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಮೈಸೂರು: ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುವ ಪ.ಜಾತಿ/ಪ.ಪಂಗಡದ ಹಾಗೂ ಇತರೆ ಹಿಂದುಳಿದ ವರ್ಗದವರಿಗೆ ಮತ್ತು ವಿಕಲಚೇತನರಿಗೆ 2026–27ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಹಾಗೂ ಪಟ್ಟಣ ಪಂಚಾಯಿತಿ ಅನುದಾನದಲ್ಲಿ ಶೇ24.10.ಶೇ7.25, ಮತ್ತು ಶೇ5ರ ಯೋಜನೆಗಳಲ್ಲಿ ಅನುದಾನದಲ್ಲಿ ವಿವಿಧ ಸೌಲಭ್ಯಕ್ಕಾಗಿ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಫಲಾನುಭವಿಗಳು ಜು.15ರ ಸಂಜೆ 4 ಗಂಟೆಯೊಳಗೆ ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬೋಗಾದಿ ಮೈಸೂರು ತಾಲೂಕು ಮತ್ತು ಮೈಸೂರು ಕಚೇರಿಯಿಂದ ಅರ್ಜಿ ನಮೂನೆಯನ್ನು ಪಡೆದು ಸಂಬಂಧಿಸಿದ ದುಡೀಕೃತ ದಾಖಲಾತಿಗಳೊಡನೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಯನ್ನು ಬೋಗಾದಿ ಪಪಂ ಕಾರ್ಯಾಲಯ ಕಛೇರಿಯನ್ನು ಸಂಪರ್ಕಿಸಬಹುದು.

ಜು.5, ರಾಷ್ಟ್ರಮಟ್ಟದ ಯೋಗಾಸನ ಸ್ಪರ್ಧೆ

ಮೈಸೂರು,ಜೂ.30(ಜಿಎ)–ಜಿಕೆ ವಿನ್ಯಾಸ ಯೋಗ ಕೇಂದ್ರ ಹಾಗೂ ಶ್ರೀಕೃಷ್ಣ ಯೋಗಾಸ್ ವತಿಯಿಂದ ಜು.5ರಂದು ಮಹಾರಾಜ ಕಾಲೇಜು ಬಳಿಯ ಮೈಸೂರು ವಿವಿ ಯೋಗ ಭವನದಲ್ಲಿ ಶಾಲಾ ಕಾಲೇಜು ಮಟ್ಟದ ಯೋಗಾಸನ ಹಾಗೂ ರಾಷ್ಟ್ರ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಯೋಗ ಕೇಂದ್ರ ಯೋಗ ಪ್ರವೀಣ ಡಾ.ಪಿ.ಎನ್. ಗಣೇಶ್ ಕುಮಾರ್ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 7.30ರಿಂದ ಶಾಲಾ ಕಾಲೇಜು ಮಟ್ಟದ ಯೋಗಾಸನ ಸ್ಪರ್ಧೆ ಹಾಗೂ ರಾಷ್ಟ್ರ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ ಆರಂಭವಾಗಲಿದ್ದು, ಅಸಕ್ತರು ಪಾಲ್ಗೊಳ್ಳಬಹುದಾಗಿದೆ ಎಂದರು.

ಬಾಲಕ, ಬಾಲಕಿಯರಿಗೆ ಪ್ರತ್ಯೇಕ ಸ್ಪರ್ಧೆ ನಡೆಯಲಿದೆ. ಆಕರ್ಷಕ ನಗದು ಬಹುಮಾನಗಳನ್ನು ಸಹಾ ನೀಡಲಾಗುತ್ತಿದೆ. ಆಸಕ್ತರು ಹೆಚ್ಚಿನ ಮಾಹಿತಿಗೆ ಗೀತಾ ಕುಮಾರಿ, ಮೊ. 96200 04686 ನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಶಾಸಕ ಟಿ.ಎಸ್. ಶ್ರೀವತ್ಸ ಉದ್ಘಾಟಿಸಲಿದ್ದಾರೆ. ಅಂದು ಸಂಜೆ 4 ಗಂಟೆಗೆ ಸಮಾರೋಪ ಮತ್ತು ಬಹುಮಾನ ವಿತರಣಾ ಸಮಾರಂಭ ಆಯೋಜಿಸಿದ್ದು, ಮುಖ್ಯ ಅತಿಥಿಗಳಾಗಿ ಶಾಸಕರಾದ ಕೆ.ಹರೀಶ್‌ಗೌಡ, ಜಿ.ಟಿ. ದೇವೇಗೌಡ ಆಗಮಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಿವೃತ್ತ ಡಿಡಿಪಿಐ ಮಂಜುಳಾ, ಗೀತಾ ಕುಮಾರಿ, ಭರತ್‌ಕುಮಾರ್, ರಾಘವೇಂದ್ರ, ಎಂ.ವರ್ಷ ಉಪಸ್ಥಿತರಿದ್ದರು.

ಕಲಿಕಾ ಸಾಮಗ್ರಿ ವಿತರಣೆ...



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಅಪೂರ್ವ ಸ್ನೇಹ ಬಳಗದ ವತಿಯಿಂದ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ನಗರ ಪಾಲಿಕೆ ಮಾಜಿ ಸದಸ್ಯ ಜಗದೀಶ್, ಸಮಾಜ ಸೇವಕರಾದ ದೂರ ರಾಜಣ್ಣ, ಶಿವಲಿಂಗ ಸ್ವಾಮಿ, ಶಿವಪ್ರಸಾದ್, ಹೇಮಂತ್ ಕುಮಾರ್, ಆದರ್ಶ, ಶಿಕ್ಷಕರಾದ ಸಂಧ್ಯಾ ರಾಣಿ, ತಾಹೀರ್ ಬೇಗ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ನಾದಬ್ರಹ್ಮದಲ್ಲಿ ಚಿತ್ರಗೀತೆಗಳ ಕಾರ್ಯಕ್ರಮ

ಮೈಸೂರು,ಜೂ.30(ಜಿಎ)–ಜನ ಚೈತನ್ಯ ಫೌಂಡೇಶನ್ ವತಿಯಿಂದ ಜು.2ರಂದು ಸಂಜೆ 4ಗಂಟೆಗೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಸಂಗೀತ ಲೋಕದ ಗಾನ ಕೋಗಿಲೆಗಳಾದ ಆಶಾ ಬೋಸ್ಲೆ ಹಾಗೂ ಲತಾ ಮಂಗೇಶ್ಕರ್ ನೆನಪಿನಲ್ಲಿ ಜನಪ್ರಿಯ ಹಿಂದಿ ಹಾಗೂ ಇನ್ನಿತರ ಭಾಷೆಗಳ ಚಿತ್ರಗೀತೆ ಕಾರ್ಯಕ್ರಮ ಏರ್ಪಡಿಸಲಾಗಿದೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಫೌಂಡೇಶನ್ ಅಧ್ಯಕ್ಷ ಆರ್.ಲಕ್ಷ್ಮಣ್ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ 45 ಗೀತೆಗಳನ್ನು ಕರೋಕೆ ಮೂಲಕ ಸಾದರ ಪಡಿಸಲಾಗುತ್ತದೆ. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಎಡೆಯೂರು ಸಮೀಉಲ್ಲಾ ಮತ್ತಿತರರು ಆಗಮಿಸಲಿದ್ದಾರೆ. ಈ ವೇಳೆ ಆಶಾ ಬೋಸ್ಲೆ ಹಾಗೂ ಲತಾ ಮಂಗೇಶ್ಕರ್ ನೆನಪಿನಲ್ಲಿ ಗಾಯಕಿಯರಿಗೆ 'ಗಾನ ಚೈತನ್ಯ' ಪ್ರಶಸ್ತಿ ಪ್ರದಾನ ಮಾಡಲಾಗುತ್ತಿದೆ. ಕನ್ನಡ–ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಅಧ್ಯಕ್ಷತೆ ವಹಿಸುವರು ಎಂದರು. ಗೋಷ್ಠಿಯಲ್ಲಿ ಜಾಯ್ಸ್ ವೈಶಾಖ್, ಬಸವರಾಜು, ರವಿ, ಶ್ರೀನಿವಾಸ್ ಉಪಸ್ಥಿತರಿದ್ದರು.

ಬೆಳದಿಂಗಳ ಸಂಗೀತ...



ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆದ 293ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಸಿದ್ಧಾರ್ಥ ಬೆಳ್ಮಣ್ಣು ಗಾಯನ ಪ್ರಸ್ತುತಿಪಡಿಸಿದರು. ಪಕ್ಕ ವಾದ್ಯದಲ್ಲಿ ವಿದ್ವಾನ್ ಅರುಣ್ ಕುಮಾರ್, ವಿದ್ವಾನ್ ಗಿರಿಧರ್ ಉಡುಪ, ವಿದ್ವಾನ್ ಮೈಸೂರು ಎನ್.ಕಾರ್ತಿಕ್ ಹಾಗೂ ವಿದ್ವಾನ್ ವರುಣ್ ಪ್ರದೀಪ್ ಸಹಕಾರ ನೀಡಿದರು.

ಮಹಾವೀರ ವಿದ್ಯಾಮಂದಿರದಲ್ಲಿ ಅಪ್ಪಂದಿರ ದಿನಾಚರಣೆ



ಮೈಸೂರಿನ ಮಹಾವೀರ ವಿದ್ಯಾಮಂದಿರದಲ್ಲಿ ಅಪ್ಪಂದಿರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರು, ಜೂ.30– ನಗರದ ಶ್ರೀ ಜೈನ್ ಎಜುಕೇಶನ್ ಸೊಸೈಟಿಯ ಮಹಾವೀರ ವಿದ್ಯಾ ಮಂದಿರದಲ್ಲಿ ಅಪ್ಪಂದಿರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ತಮ್ಮ ತಂದೆಯರ ಮೇಲಿನ ಪ್ರೀತಿ, ಗೌರವ ಹಾಗೂ ಕೃತಜ್ಞತೆಯನ್ನು ವ್ಯಕ್ತಪಡಿಸುವ ಭಾಷಣ, ಕವನ, ಹಾಡು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ತಂದೆಯರ ಜೀವನದಲ್ಲಿ ಇರುವ ಮಹತ್ವ ಮತ್ತು ಕುಟುಂಬದ ಬೆಳವಣಿಗೆಯಲ್ಲಿ ಅವರ ಪಾತ್ರವನ್ನು ಕುರಿತು ವಿಶೇಷವಾಗಿ ತಿಳಿಸಲಾಯಿತು.

ಶಾಲೆಯ ಮುಖ್ಯೋಪಾಧ್ಯಾಯರು ಮಾತನಾಡಿ, ತಂದೆ ಕುಟುಂಬದ ಆಧಾರಸ್ತಂಭ. ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಅವರ ತ್ಯಾಗ ಮತ್ತು ಪರಿಶ್ರಮ ಸದಾ ಸ್ಮರಣೀಯ. ಪ್ರತಿ ವಿದ್ಯಾರ್ಥಿಯೂ ತಂದೆ–ತಾಯಿಯನ್ನು ಗೌರವಿಸಿ, ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿ ಅಪ್ಪಂದಿರ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಲಾಯಿತು.

ನಾಳೆ ಪದವೀಧರರ ಸ್ವಾಗತ ಸಮಾರಂಭ 'ಸಮಾವರ್ತನ'

ಮೈಸೂರು, ಜೂ.30(ಜಿಎ)– ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಅಂಗ ಸಂಸ್ಥೆ ಎಎಸ್‌ಎಸ್ ಔಷಧ ವಿಜ್ಞಾನ ಮಹಾ ವಿದ್ಯಾಲಯದ ವತಿಯಿಂದ ಜು.2ರ ಮಧ್ಯಾಹ್ನ 3ಗಂಟೆಗೆ ಕಾಲೇಜಿನ ರಾಜೇಂದ್ರ ಸಭಾಂಗಣದಲ್ಲಿ ಪದವೀಧರರ ಸ್ವಾಗತ ಸಮಾರಂಭ 'ಸಮಾವರ್ತನ' ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಟಿ.ಎಂ. ಪ್ರಮೋದ್‌ಕುಮಾರ್ ಈ ವಿಷಯ ತಿಳಿಸಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯ ಮಾಹಿತಿ ಆಯುಕ್ತೆ ಜಿ.ಸತ್ಯವತಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಸಂಸ್ಥೆಯ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟ್ಸೂರ್‌ಮಠ್ ಅಧ್ಯಕ್ಷತೆ ವಹಿಸುವರು. ಪ್ರೋ ಛಾನ್ಸಲರ್ ಡಾ.ಬಿ. ಸುರೇಶ್, ಕುಲಪತಿ ಡಾ.ಹೆಚ್.ಬಸವನಗೌಡಪ್ಪ, ಕುಲಸಚಿವ ಡಾ.ಬಿ.ಮಂಜುನಾಥ್ ವೇದಿಕೆಯಲ್ಲಿರುವರು. ಪದವೀಧರರ ಸಾಧನೆ ಗುರುತಿಸಿ ಅವರ ವೃತ್ತಿ ಜೀವನದ ಹೊಸ ಅಧ್ಯಾಯನವನ್ನು ಸಂಭ್ರಮದಿಂದ ಸ್ವಾಗತಿಸುವ ಕಾರ್ಯಕ್ರಮ ಇದಾಗಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಡಾ.ಕೆ.ಎಲ್. ಕೃಷ್ಣ, ಡಾ.ಬಿ.ಆರ್.ಪ್ರಶಾಂತ್, ಡಾ.ಜಿ.ವಿ.ಪೂಜಾರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

01.07.2026 ಬುಧವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6.30ರಿಂದ.
- **ಭಾನವಿ ಆಸ್ಪತ್ರೆ:** ಪಲ್ಸ್ ಪೋಲಿಯೋ ಕಾರ್ಯಕ್ರಮ, ಸ್ಥಳ: ಭಾನವಿ ಆಸ್ಪತ್ರೆ, ಕುವೆಂಪುನಗರ, ಬೆಳಗ್ಗೆ 8ರಿಂದ.
- **ಮಯೂರ ಕನ್ನಡ ಯುವಕರ ಬಳಗ :** ಪತ್ರಿಕಾ ದಿನಾಚರಣೆ ಅಂಗವಾಗಿ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಉಚಿತ ಕನ್ನಡ ದಿನಪತ್ರಿಕೆ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಹರೀಶ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ರಘುರಾಮ್ ವಾಜಪೇಯಿ, ಕಾಂಗ್ರೆಸ್ ಮುಖಂಡ ಶ್ರೀನಾಥ್ ಬಾಬು, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಸ್ಥಳ: ಹಳೇ ಸಂತೇಪೇಟೆ, ಬೆಳಗ್ಗೆ 10.30ಕ್ಕೆ.
- **ನನ್ನವ್ವ ಸಾಂಸ್ಕೃತಿಕ ಕಲಾತಂಡ :** ಕನ್ನಡ ನಾಡು ಕಟ್ಟಿದ ಮೊದಲ ಕದಂಬ ದೊರೆ ಮಯೂರವರ್ಮ ವಿಚಾರ ಸಂಕಿರಣ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್. ವಿಶ್ವನಾಥ್, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ನಾಲ್ವಡಿ ಕೃಷ್ಣರಾಜ ಒಡೆಯರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ. ನಾಗರಾಜ್ ವಿ. ಭೈರಿ, ವಿಚಾರ ಮಂಡನೆ : ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕದ ಅಧ್ಯಕ್ಷ ಜಯಪ್ಪ ಹೊನ್ನಾಳಿ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕರುನಾಡ ರಕ್ಷಣಾ ವೇದಿಕೆ ರಾಜ್ಯ ಕಾರ್ಯದರ್ಶಿ ಸತೀಶ್ ಹೆಗ್ಗೂರು, ಶ್ರೀಮತಿ ಅನಿತಾ ಸದಾನಂದ, ಡಾ. ನಾ. ಗಂಗಾಧರಪ್ಪ, ಶ್ರೀಮತಿ ಪ್ರಭಾಶಾಸ್ತ್ರಿ ಜೋಶ್ಯುಲ, ಸ್ಥಳ: ನಮನ ಕಲಾ ಮಂಟಪ, ಅಶೋಕ ರಸ್ತೆ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ:** ಪ್ರಗತಿ ಮತ್ತು ಉತ್ಕೃಷ್ಟತೆಗಾಗಿ ಕಾರ್ಯೋನ್ಮುಖ ಅಭಿವೃದ್ಧಿ ಭವಿಷ್ಯತ್ತಿನ ತಂತ್ರಜ್ಞಾನಗಳ ಜಾಗತಿಕ ಸಂಸ್ಥೆ ಆರೋಗ್ಯ ಸೇವೆಯಲ್ಲಿ ಕೃತಕ ಬುದ್ಧಿಮತ್ತೆ ನಿರ್ವಹಣಾ ತರಬೇತಿ ಉದ್ಘಾಟನೆ ಮತ್ತು ರಾಷ್ಟ್ರೀಯ ವೈದ್ಯರ ದಿನಾಚರಣೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಗತಿ ಮತ್ತು ಉತ್ಕೃಷ್ಟತೆಗಾಗಿ ಕಾರ್ಯೋನ್ಮುಖ ಅಭಿವೃದ್ಧಿ ಉದ್ಘಾಟನೆ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಯು.ಟಿ.ಖಾದರ್, ಭವಿಷ್ಯತ್ತಿನ ತಂತ್ರಜ್ಞಾನಗಳ ಜಾಗತಿಕ ಸಂಸ್ಥೆ ಉದ್ಘಾಟನೆ : ನೀತಿ ಆಯೋಗ ಸದಸ್ಯ ಡಾ.ಆರ್.ಬಾಲಸುಬ್ರಮಣ್ಯಂ, ಆರೋಗ್ಯ ಸೇವೆಯಲ್ಲಿ ಕೃತಕ ಬುದ್ಧಿಮತ್ತೆ ನಿರ್ವಹಣಾ ತರಬೇತಿ : ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಗೌರವ ಅತಿಥಿಗಳು : ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಸಮಕುಲಾಧಿಪತಿ ಡಾ. ಬಿ. ಸುರೇಶ್, ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಎಂ.ಜಿ. ರಸ್ತೆ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ವಚನ ಬಾನುಲಿ ಸರಣಿ, ಪ್ರಸ್ತುತಿ–ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ, ತಂತ್ರಜ್ಞಾನ ತರಂಗ–ಅಆಂಅ ಜೊತೆ, ಪ್ರಾಯೋಜಕರು-Center for Development of Advanced Computing, Bengaluru, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 10.00 ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳ, 1.30 ಮತ್ತು ಸಂಜೆ 5.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ ಸಾಧನಾ ಶಿಖರ ರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ ಸುಮಾರು 50 ವರ್ಷಕ್ಕೂ ಹೆಚ್ಚು ವೈದ್ಯಕೀಯ ವೃತ್ತಿಯಲ್ಲಿ ನಿರತರಾಗಿರುವ ಕುಟುಂಬ ವೈದ್ಯೆ ಹಾಗೂ ಸ್ತ್ರೀರೋಗ ತಜ್ಞರಾದ ಡಾ. ಲಕ್ಷ್ಮೀದೇವಿ ಕೆ. ವಿ. ಅವರೊಂದಿಗೆ ಮಾತುಕತೆ. ಪ್ರಸ್ತುತಿ – ಕೀರ್ತನಾ .ವಿ, 4.30 ಹಿಂದಿ ಚಿತ್ರಗೀತೆಗಳು, 4.45 ಭಾಷಾಭಾರತಿ– ವಿಶೇಷ ಹಿಂದಿ ಪಾಠ ಸರಣಿ, 5.00 Clear Medi ಆಸ್ಪತ್ರೆ ಸ್ವಾಸ್ಥ್ಯ ಸಂವಾದ 'ಎಲ್ಲರಿಗೂ ಎಲ್ಲೆಡೆ ಸಮನಾದ ಆರೈಕೆ' ನೇರ ಸಂವಾದ ಕಾರ್ಯಕ್ರಮ. ಪ್ರಾಯೋಜಕರು–Clearmedi ಆಸ್ಪತ್ರೆ, ಮೈಸೂರು, ವಿಷಯ–ಕ್ಯಾನ್ಸರ್ ಕುರಿತ ಮಿಥ್ಯೆಗಳು, ಭಾಗವಹಿಸುತ್ತಾರೆ–ಕನ್ಸಲ್ಟೆಂಟ್ ಸರ್ಜಿಕಲ್ ಆಂಕಾಲಜಿಸ್ಟ್ ಹಾಗೂ ರೊಬೋಟಿಕ್ ಸರ್ಜನ್ ಡಾ. ರಕ್ಷಿತ್ ಶೃಂಗೇರಿ, ಪ್ರಸ್ತುತಿ–ತೇಜಸ್ವಿನಿ ಗಿರೀಶ್ ಹಾಗೂ ಡಾ. ಕುಲ್ ದೀಪ್ .ಎನ್, 6.50 ಕೃಷಿರಂಗ–ರೇಷ್ಮೆರಂಗ–ರೇಷ್ಮೆ ತಂತ್ರಜ್ಞಾನಗಳ ಕುರಿತ ಬಾನುಲಿ ಸರಣಿ ಹಿಪ್ಪುನೇರಳೆ ತೋಟದ ನಿರ್ವಹಣೆ ಈ ಕುರಿತು ನೇರ ಫೋನ್–ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ–ಮೈಸೂರಿನ ಕೇಂದ್ರೀಯ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿಗಳಾದ ಡಾ. ಕೆ. ಸುರೇಶ್ ಮತ್ತು ಡಾ. ಎಂ.ಆರ್. ಭವ್ಯಾ, ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಕರ್ನಾಟಕ ಶಾಸ್ತ್ರೀಯ ಸಂಗೀತ, 8.30 ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

'ಮೈಸೂರು ಮಿತ್ರ'ನ ವರದಿಯಿಂದ ಅಂತೂ ಎಚ್ಚೆತ್ತ ಪಾಲಿಕೆ ಅಧಿಕಾರಿ ವರ್ಗ

ಮೈಸೂರಿನ ಪ್ರತಿಷ್ಠಿತ ವಾಣಿಜ್ಯ ಮಾರ್ಗ ದೇವರಾಜ ಅರಸು ರಸ್ತೆಯ ಭಯಂಕರ ಕಟೌಟ್ ಪಿಲ್ಲರ್‌ಗಳ ತೆರವು!

- ಅಭಯ ತಂಡ ಫೀಲ್ಡ್‌ಗಿಳಿಯುತ್ತಿದ್ದಂತೆ ಅಳವಡಿಸಿದ್ದವರಿಂದಲೇ ತರಾತುರಿ ತೆರವು
- 'ಮಿತ್ರ'ನ ನಗರ ಕಳಕಳಿ, ಕಾಳಜಿಗೆ ವ್ಯಾಪಾರಿಗಳು, ಸಾರ್ವಜನಿಕರಿಂದ ವ್ಯಾಪಕ ಪ್ರಶಂಸೆ



ಮೈಸೂರಿನ ದೇವರಾಜ ಅರಸು ರಸ್ತೆ ಇಕ್ಕೆಲಗಳಲ್ಲಿ ಕಟೌಟ್‌ಗಳಿಗಾಗಿ ಕಬ್ಬಿಣದ ಪೈಪ್‌ಗಳಿಂದ ನಿರ್ಮಿಸಿದ್ದ ಪಿಲ್ಲರ್‌ಗಳನ್ನು ಮೈಸೂರು ಮಹಾನಗರ ಪಾಲಿಕೆ ಅಭಯ ತಂಡದ ಸದಸ್ಯರು ತೆರವು ಮಾಡಿದರು.

ಮೈಸೂರಲ್ಲಿ ಹೇಳುವವರು–ಕೇಳುವವರು ಇಲ್ಲದಂತಾಗಿದೆ. ಜಿಲ್ಲಾಡಳಿತ ಇಂತಹ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಬೇಕು. ಆದರೆ, ಎಲ್ಲರೂ ಪ್ರಭಾವಿಗಳಿಗೆ ಮಣೆ ಹಾಕುತ್ತಿದ್ದಾರೆ. ಹಾಗಾಗಿ ಅವರ ಸ್ವಂತ ಆಸ್ತಿ ಎಂಬಂತೆ ಸಾರ್ವಜನಿಕರ ಸ್ವತ್ತನ್ನು ಸ್ವಾರ್ಥಕ್ಕೆ ಬಳಸಿಕೊಳ್ಳಲಾಗುತ್ತಿದೆ. ಸುಪ್ರೀಂಕೋರ್ಟ್; ಫುಟ್‌ಪಾತ್ ಇರುವುದೇ ಪಾದಚಾರಿಗಳಿಗೆ, ಅದು ಅವರ ಹಕ್ಕು ಎಂದು ಚಾಟಿ ಬೀಸಿದೆ. ಆದರೂ ನಮ್ಮ ಅಧಿಕಾರಿಗಳು ಎಚ್ಚೆತ್ತಿಲ್ಲ. ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡರು ಬೆಂಗಳೂರಿನ ಫುಟ್‌ಪಾತ್ ತೆರವಿನ ವಿಷಯದಲ್ಲಿ ನಿಷ್ಠುರ ಕ್ರಮ ಕೈಗೊಂಡು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಆದರೆ, ನಮ್ಮಲ್ಲಿ ಆ ತಾಕತ್ತಿಲ್ಲವೆ?

- ಅರಸು ರಸ್ತೆಯ ವರ್ತಕರ ಬೇಸರದ ನುಡಿ



ಮೈಸೂರು, ಜೂ.30(ಎಂಟಿವೈ)– ಮೈಸೂರಿನ ಪ್ರತಿಷ್ಠಿತ ವಾಣಿಜ್ಯ ಮಾರ್ಗ ಡಿ.ದೇವರಾಜ ಅರಸು ರಸ್ತೆಯ ಎರಡೂ ಬದಿಯಲ್ಲಿ ರಾಜಕೀಯ ನಾಯಕರು ಸೇರಿದಂತೆ ಕಂಡ ಕಂಡವರ ಬೃಹತ್ ಕಟೌಟ್ ಅಳವಡಿಸಲು ಕಬ್ಬಿಣದ ಪೈಪ್‌ಗಳಿಂದ ನಿರ್ಮಿಸಿದ್ದ ಬೃಹತ್ ಪಿಲ್ಲರ್ ಹಾಗೂ ಫ್ರೇಮ್‌ಗಳನ್ನು ಮೈಸೂರು ಮಹಾನಗರ ಪಾಲಿಕೆ ಮಂಗಳವಾರ ತೆರವುಗೊಳಿಸಿದೆ.

ಮೈಸೂರಿನ ಕೆ.ಆರ್.ವೃತ್ತದ ಜಂಕ್ಷನ್‌ನಿಂದ ಜೆಎಲ್‌ಬಿ ರಸ್ತೆ ಜಂಕ್ಷನ್‌ವರೆಗೂ ದೇವರಾಜ ಅರಸ್ ರಸ್ತೆಯ ಎರಡೂ ಬದಿಯಲ್ಲಿ ರಾಜಕೀಯ ನಾಯಕರು, ಸಾಮಾಜಿಕ ಕಾರ್ಯಕರ್ತರ ಬೃಹತ್ ಕಟೌಟ್ ಅಳವಡಿಸಲಾಗುತ್ತಿತ್ತು. ಇದಕ್ಕಾಗಿ ಕಟ್ಟಡ ನಿರ್ಮಾಣ ವೇಳೆ ಕಾಲಾವಧಿಗೆ ಬಳಸುವ ಕಬ್ಬಿಣದ ಪೈಪ್‌ಗಳಿಂದ ಪಿಲ್ಲರ್ ಹಾಗೂ ಫ್ರೇಮ್ ನಿರ್ಮಿಸಲಾಗಿತ್ತು. ಸುಮಾರು 50 ಅಡಿ ಎತ್ತರ, 6 ಅಡಿ ಅಗಲದ ಫ್ರೇಮ್ ಮಾದರಿಯನ್ನು ರಸ್ತೆಯುದ್ದಕ್ಕೂ ಹತ್ತು ಕಡೆ ಭಾರೀ ಜನ ಹಾಗೂ ವಾಹನ ದಟ್ಟಣೆ ನಡುವೆ ಅಳವಡಿಸಲಾಗಿತ್ತು. ಬಿರುಗಾಳಿಗೆ ಅವು ನೆಲಕ್ಕುರುಳಿ ಭಾರೀ ಸಾವು–ನೋವು ಸಂಭವಿಸುವ ಆತಂಕ ಕಾಡುತ್ತಿತ್ತು. ಇದು ಗೊತ್ತಿದ್ದರೂ ಅರಸು ರಸ್ತೆ ವರ್ತಕರು ಮೌನ ವಹಿಸಿದ್ದರು. ಕಾರಣ, ಭಯ...!!!

ಈ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ' ಮಂಗಳವಾರದ(ಜೂ.30) ಸಂಚಿಕೆಯಲ್ಲಿ **'ಬೃಹತ್ ಕಟೌಟ್‌ಗಳ ಮಾರ್ಗವಾದ ಮೈಸೂರಿನ ಪ್ರತಿಷ್ಠಿತ ವಾಣಿಜ್ಯ ಮಾರ್ಗ ದೇವರಾಜ ಅರಸು ರಸ್ತೆ'** ಶೀರ್ಷಿಕೆಯಡಿ ಚಿತ್ರ ಸಹಿತ ಸವಿವರವಾದ ವರದಿ ಪ್ರಕಟಿಸಿ, ಸಂಭವಿಸ ಬಹುದಾದ ಅಪಾಯದ ಬಗ್ಗೆ ಎಚ್ಚರಿಸಿತ್ತು. ಇದರ ಬೆನ್ನಲ್ಲೇ ಎಚ್ಚೆತ್ತುಕೊಂಡ ಪಾಲಿಕೆ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡಿದ್ದಾರೆ. ಅಭಯ ಎ–1 ಮತ್ತು ಎ–2 ತಂಡದ ಎಂಟು ಸಿಬ್ಬಂದಿ ಹಾಗೂ ಜೆಸಿಬಿ ಸಹಾಯದಲ್ಲಿ ಕಬ್ಬಿಣದ ಪೈಪ್‌ಗಳಿಂದ ನಿರ್ಮಿಸಿದ್ದ ಪಿಲ್ಲರ್‌ಗಳನ್ನು ತೆರವಿಗೆ ಮುಂದಾಗಿದ್ದಾರೆ.

ಅಭಯ ತಂಡದ ಸದಸ್ಯರು, ಪಿಲ್ಲರ್ ತೆರವುಗೊಳಿಸುತ್ತಿದ್ದ ವೇಳೆ ಅವುಗಳನ್ನು ಅಳವಡಿಸಿದ್ದ ಆಸಾಮಿಗಳು, ತಮ್ಮದೇ ಕೆಲಸಗಾರರ ಕಳುಹಿಸಿ ತೆರವುಗೊಳಿಸಲು ಮುಂದಾಗಿದ್ದಾರೆ. ಆದರೂ, ಅಭಯ ತಂಡದ ಸದಸ್ಯರು ಕೆಲವು ಪಿಲ್ಲರ್ ತಾವೇ ತೆರವುಗೊಳಿಸಿ, ಪಾಲಿಕೆ ವಾಹನಕ್ಕೆ ಕಬ್ಬಿಣದ ಪೈಪ್‌ಗಳ ತುಂಬಿದ್ದರು. ಈ ವೇಳೆ ಅಧಿಕಾರಿಗಳ ಬಳಿ ಮನವಿ ಮಾಡಿ, ಅಭಯ ತಂಡ ತಮ್ಮ ವಶಕ್ಕೆ ತೆಗೆದುಕೊಂಡಿದ್ದ ಪೈಪ್ ಗಳನ್ನು ವಾಪಸ್ ಪಡೆದರು. ಪಾಲಿಕೆ ತಂಡದ ಸಮ್ಮುಖದಲ್ಲಿಯೇ ದೇವರಾಜ ಅರಸ್ ರಸ್ತೆಯಲ್ಲಿದ್ದ ಎಲ್ಲಾ ಪಿಲ್ಲರ್ ಗಳನ್ನು ತೆರವು ಮಾಡಿದರು.

ನಮಗೆ ಭಯ...: ವಿವಿಧ ನಾಯಕರ ಜನ್ಮ ದಿನದಂದು ಶುಭ ಕೋರಲು ಇತ್ತೀಚಿನ ವರ್ಷಗಳಲ್ಲಿ ದೇವರಾಜ ಅರಸ್ ರಸ್ತೆಯಲ್ಲಿ ಬೃಹತ್ ಕಟೌಟ್ ಹಾಕುವುದು ಮಾಮೂಲಾಗಿದೆ ಪೈಪೋಟಿಗೆ ಬಿದ್ದವರಂತೆ ರಾಜಕೀಯ ನಾಯಕರು, ಮುಖಂಡರ ಕಟೌಟ್ ಹಾಕಲಾಗುತ್ತಿದೆ. ಪಾರ್ಕಿಂಗ್ ಸ್ಥಳದಲ್ಲಿ ರಸ್ತೆಯುದ್ದಕ್ಕೂ ಕಬ್ಬಿಣದ ಪೈಪ್ ಗಳಿಂದ ಬೃಹತ್ ಪಿಲ್ಲರ್ ಅಳವಡಿಸ ಲಾಗುತ್ತಿದೆ. ಈ ಮಾರ್ಗದ ಕಟ್ಟಡಗಳ ಎತ್ತರದಷ್ಟು ಪಿಲ್ಲರ್‌ಗಳು ಭಾರೀ ಗಾಳಿಗೆ ಉರುಳಿ ಬೀಳುವ ಸಾಧ್ಯತೆ ಹೆಚ್ಚಿದೆ. ಇದರ ಪರಿವೇ ಇಲ್ಲದೆ ಬೃಹತ್ ಪಿಲ್ಲರ್ ಹಾಕಿ ಐದಾರು ದಿನಗಳಾದರೂ ತೆರವು ಮಾಡುತ್ತಿರಲಿಲ್ಲ. ಇತ್ತೀಚೆಗೆ ಖಾಯಂ ಆಗಿ ಅವುಗಳ ಇರಿಸಿಕೊಳ್ಳುವ ವ್ಯವಸ್ಥಿತ ಕಾರ್ಯವೂ ನಡೆದಿತ್ತು. ಇದರಿಂದ ಜನರಿಗೆ ಅಪಾಯ ಎಂದು ತಿಳಿದಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಮೌನಕ್ಕೆ ಶರಣಾಗಿದ್ದರು. ಸದ್ಯ 'ಮೈಸೂರು ಮಿತ್ರ' ನಲ್ಲಿ ವರದಿ ಪ್ರಕಟ ವಾಗಿದ್ದರಿಂದ ಅಧಿಕಾರಿಗಳು ಎಚ್ಚೆತ್ತು ಕೊಂಡು ತೆರವು ಮಾಡಿಸಿದ್ದು ಸಮಾಧಾನ ತಂದಿದೆ. ಮೂರು ಪಕ್ಷಗಳ ಸ್ಥಳೀಯ ಮುಖಂಡರು, ತಮ್ಮ ತಮ್ಮ ನಾಯಕರ ಕಟೌಟ್‌ಗಳ ಅರಸು ರಸ್ತೆಯಲ್ಲಿ ಮೆರೆಸುತ್ತಿದ್ದರು. ಅದನ್ನು ಹಾಕದಂತೆ ವಿರೋಧಿಸುವುದು ಅಂಗಡಿ ಮಾಲೀಕರಿಗೂ ಕಷ್ಟ... ಕಷ್ಟ...!? ಆಕ್ಷೇಪಿಸಿದರೆ ಏನಾದರೂ ತೊಂದರೆ ನೀಡುತ್ತಾರೆ ಎಂಬ ಭಯದಿಂದ ಸುಮ್ಮನಾಗುತ್ತಾರೆ ಎಂದು ಸ್ಥಳೀಯರು ವಿಷಾದಿಸಿದರು.

ಕಟೌಟ್ ತೆರವು: ಮೈಸೂರಿನ ವಿವಿಧ ರಸ್ತೆಯಲ್ಲಿ ಕೆಲ ಮುಖಂಡರ ಹುಟ್ಟುಹಬ್ಬಕ್ಕೆ ಶುಭ ಕೋರಲು ಅಳವಡಿಸಿದ್ದ 60ಕ್ಕೂ ಹೆಚ್ಚು ಕಟೌಟ್‌ಗಳನ್ನು ಅಭಯ ತಂಡದ ಸದಸ್ಯರು ತೆರವು ಮಾಡಿದ್ದಾರೆ. ವಿವಿಧ ಸರ್ಕಲ್, ವಿದ್ಯುತ್ ಕಂಬ, ಮರಗಳಿಗೆ ಹಾಕಲಾಗಿದ್ದ ಬ್ಯಾನರ್, ಫಲಕಗಳನ್ನೂ ತೆರವು ಮಾಡಿದ್ದಾರೆ.

ಚುನಾವಣಾ ಆಯೋಗದ ಸರ್ವಾಧಿಕಾರ ಧೋರಣೆಗೆ ಆಕ್ರೋಶ

ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ ಸೋಮವಾರ ಎಸ್‌ಐಆರ್ ಕುರಿತು ಸ್ಪಷ್ಟನೆ ನೀಡದ ಚುನಾವಣಾ ಆಯೋಗದ ಸರ್ವಾಧಿಕಾರ ಧೋರಣೆ ವಿರೋಧಿಸಿ ಎಸ್‌ಐಆರ್ ವಿರೋಧಿ ಜಾತ್ಯಾತೀತ ಪಕ್ಷಗಳು ಮತ್ತು ಜನಪರ ಸಂಘಟನೆಗಳ ಒಕ್ಕೂಟದವರು ಕೈಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಪ್ರತಿಭಟನೆ ನಡೆಸಿದರು.

ಮೈಸೂರು, ಜೂ.30(ಬಿಎಲ್‌ಯು)– ಎಸ್‌ಐಆರ್ ಕುರಿತು ಸ್ಪಷ್ಟನೆ ನೀಡದೆ ಕೇಂದ್ರ ಚುನಾವಣಾ ಆಯೋಗ ಸರ್ವಾಧಿಕಾರ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಎಸ್‌ಐಆರ್ ವಿರೋಧಿ ಜಾತ್ಯಾತೀತ ಪಕ್ಷಗಳು ಮತ್ತು ಜನಪರ ಸಂಘಟನೆಗಳ ಒಕ್ಕೂಟದ ವರು ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಮುಂದೆ ಇಂದು ಕೈಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಪ್ರತಿಭಟನೆ ನಡೆಸಿದರು.

ಎಸ್‌ಐಆರ್ ಪ್ರಕ್ರಿಯೆಯನ್ನು ಪ್ರಜಾತಾಂತ್ರಿಕಗೊಳಿಸಬೇಕು, ಎಸ್‌ಐಆರ್ ಕುರಿತು ಸ್ಪಷ್ಟನೆ ನೀಡುವುದು ಸೇರಿದಂತೆ ಹಲವು ಹಕ್ಕೊತ್ತಾಯ ಮುಂದಿಟ್ಟು ಮೇ 30 ರಂದು ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಾಯಿತು. ಜೂನ್ 20 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.

ಅಲ್ಲದೆ ಸಾಹಿತಿಗಳು, ಚಿಂತಕರು, ರಂಗಕರ್ಮಿಗಳು ಬಹಿರಂಗ ಪತ್ರ ಬರೆದಿದ್ದರು. ಆದರೆ ಚುನಾವಣಾ ಆಯೋಗ ಯಾವುದಕ್ಕೂ ಉತ್ತರ ಅಥವಾ ಸ್ಪಷ್ಟನೆ ನೀಡದೆ ಸರ್ವಾಧಿಕಾರ ಪ್ರದರ್ಶಿಸಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಂದು ಸಾರ್ವಜನಿಕ ಸಂಸ್ಥೆಗಳು ಜನರ ಪ್ರಶ್ನೆಗಳಿಗೆ ಉತ್ತರಿಸಬೇಕು. ಇದಕ್ಕೆ ಚುನಾವಣಾ ಆಯೋಗ ಕೂಡ ಹೊರತಲ್ಲ. ಆದರೆ ಆಯೋಗ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರ ನೀಡದೆ ಜನರ ಮೂಲಭೂತ ಹಕ್ಕುಗಳನ್ನು ದಮನ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಎಸ್‌ಐಆರ್ ವೇಳೆ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು ಆಯೋಗ ಸೂಕ್ತ ಸಮಯಾವಕಾಶ ನೀಡಬೇಕು. ಇಲ್ಲದಿದ್ದರೆ ಬೃಹತ್ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಕಾಳಚನ್ನೇಗೌಡ, ಡಾ. ಮಹೇಶ್ ದಳಪತಿ, ರತಿರಾವ್, ವರದಯ್ಯ, ಜೀವಿಕ ಉಮೇಶ್, ಜವರಯ್ಯ, ನಾಗರಾಜ್, ಸಂವಿಧಾನ ರಕ್ಷಣಾ ಪಡೆಯ ಬಸವರಾಜ್, ಬಿ.ಆರ್.ರಾಜು ಸೇರಿದಂತೆ ಹಲವರು ಭಾಗವಹಿಸಿದ್ದರು.

ರಾಜ್ಯದಲ್ಲಿ ಜುಲೈ 6ರವರೆಗೆ ಭಾರೀ ಮಳೆ ಮುನ್ಸೂಚನೆ

ಬೆಂಗಳೂರು, ಜೂ.30– ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆ ಜೋರಾಗಿದೆ. ಮಲೆನಾಡು, ಕರಾವಳಿ ಭಾಗಗಳಲ್ಲಿ ಧಾರಾಕಾರ ಮಳೆಯಾಗುತ್ತಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಈ ನಡುವೆ ಹವಾಮಾನ ಇಲಾಖೆ ಹಲವು ಜಿಲ್ಲೆಗಳಿಗೆ ಅಲರ್ಟ್ ಘೋಷಿಸಿದೆ.

ಜುಲೈ 6ರವರೆಗೆ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಿಂಚು, ಗುಡುಗು ಸಹಿತ ಭಾರೀ ಮಳೆಯಾಗಲಿದೆ ಎಂದು ಐಎಂಡಿ ಆರೆಂಜ್ ಅಲರ್ಟ್ ಘೋಷಿಸಿದೆ. ಈ ಸಂದರ್ಭದಲ್ಲಿ ರೈತರು ಕೃಷಿ ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವಂತೆ ಸೂಚಿಸಲಾಗಿದೆ.

ಮುಂದಿನ 24 ಗಂಟೆಗಳಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಗಂಟೆಗೆ 30–40 ಕಿಲೋಮೀಟರ್ ವೇಗದ ಗಾಳಿಯ ಜೊತೆಗೆ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಜುಲೈ 1ರಂದು ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಇನ್ನು ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಚಿತ್ರದುರ್ಗ, ದಾವಣಗೆರೆ, ಕೊಡಗು, ತುಮಕೂರು, ಬಳ್ಳಾರಿ, ವಿಜಯನಗರ ಜಿಲ್ಲೆಗಳಲ್ಲಿಯೂ ಮಳೆಯಾಗಲಿದೆ.

ಶೀಘ್ರದಲ್ಲೇ ಸಾರಿಗೆ ಬಸ್ ದರ ಹೆಚ್ಚಳ ಸಾಧ್ಯತೆ

ಬೆಂಗಳೂರು, ಜೂ.30– ರಾಜ್ಯದಲ್ಲಿ ಸಾರಿಗೆ ಬಸ್ ಟಿಕೆಟ್ ದರ ಏರಿಕೆಯಾಗುವ ಸಾಧ್ಯತೆ ಇದೆ. ಡೀಸೆಲ್ ಬೆಲೆ ಏರಿಕೆ, ನೌಕರರ ವೇತನ ಹೆಚ್ಚಳ ಮತ್ತು ಶಕ್ತಿ ಯೋಜನೆಯ ಅನುಷ್ಠಾನದಿಂದ ನಾಲ್ಕು ಸಾರಿಗೆ ನಿಗಮಗಳು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿವೆ. ಈ ನಿಟ್ಟಿನಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಸೇರಿದಂತೆ ಎಲ್ಲ ನಿಗಮಗಳು ಬಸ್ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸಿವೆ.

ಕಳೆದ ಆರು ತಿಂಗಳಲ್ಲಿ ನಾಲ್ಕು ಬಾರಿ ಡೀಸೆಲ್ ಬೆಲೆ ಏರಿಕೆಯಾಗಿದ್ದು, ಪ್ರತಿ ತಿಂಗಳು 40 ಕೋಟಿ ರೂಪಾಯಿ ನಷ್ಟವಾಗುತ್ತಿದೆ ಎಂದು ನಿಗಮಗಳು ತಿಳಿಸಿವೆ. ಅಲ್ಲದೆ, ಜುಲೈ ತಿಂಗಳಿನಿಂದ ನೌಕರರಿಗೆ ಶೇಕಡಾ 12.5 ರಷ್ಟು ವೇತನ ಹೆಚ್ಚಳ ಮಾಡಬೇಕಿದೆ ಮತ್ತು 1,271 ಕೋಟಿ ರೂಪಾಯಿ ವೇತನ ಹಿಂಬಾಕಿಯನ್ನೂ ಪಾವತಿಸಬೇಕಾಗಿದೆ. ಶಕ್ತಿ ಯೋಜನೆಯ ಬಾಕಿ ಹಣ 5,000 ಕೋಟಿ ರೂಪಾಯಿ ಬಿಡುಗಡೆಯಾಗಬೇಕಿದೆ. ಈ ಎಲ್ಲ ಕಾರಣಗಳಿಂದಾಗಿ ದರ ಏರಿಕೆ ಅನಿವಾರ್ಯ ಎಂದು ನಿಗಮಗಳು ವಾದಿಸಿವೆ.

ಕೆಎಸ್‌ಆರ್‌ಟಿಸಿ ಶೇಕಡಾ 33 ರಷ್ಟು ಮತ್ತು ಬಿಎಂಟಿಸಿ ಶೇಕಡಾ 44 ರಷ್ಟು ದರ ಏರಿಕೆಗೆ ಅನುಮತಿ ಕೋರಿವೆ. ಸಾರಿಗೆ ಸಚಿವರಾದ ಬೈರತಿ ಸುರೇಶ್ ಅವರು ಈ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ಪ್ರಯಾಣಿಕರಿಗೆ ಹೊರೆಯಾಗದಂತೆ ಮತ್ತು ನಿಗಮಗಳ ಸಂಕಷ್ಟ ನಿವಾರಣೆಯಾಗುವ ರೀತಿಯಲ್ಲಿ ಮುಂದಿನ ಕ್ಯಾಬಿನೆಟ್ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಈ ಪ್ರಸ್ತಾಪವು ಸಾರ್ವಜನಿಕರಿಂದ ತೀವ್ರ ವಿರೋಧಕ್ಕೆ ಗುರಿಯಾಗಿದೆ.

ನಾನು ಅಡ್ಡ ಮತದಾನ ಮಾಡಿಲ್ಲ, ಕಾಯಾ ವಾಚ ಮನಸಾ ಬಿಜೆಪಿ ಪರ ಕೆಲಸ ಮಾಡಿದ್ದೇನೆ!

ಹಾಸನ: ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಭಾರೀ ಸುದ್ದಿಯಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಧರ್ಮಸ್ಥಳದಲ್ಲಿ ಆಣೆ–ಪ್ರಮಾಣ ಮಾಡಿಸುತ್ತೇವೆ ಎಂದು ಹೇಳಿ ನಂತರ ಸ್ವಪಕ್ಷದವರು ಮತ್ತು ಹೈಕಮಾಂಡ್‌ನಿಂದ ಸೂಚನೆ ಬಂದ ಹಿನ್ನೆಲೆಯಲ್ಲಿ ನಿರ್ಧಾರದಿಂದ ಹಿಂದೆ ಸರಿದಿದ್ದರು.



ಬೇಲೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಹೆಚ್.ಕೆ.ಸುರೇಶ್ ಅಡ್ಡ ಮತದಾನ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಅದಕ್ಕೆ ಅವರು ಇಂದು ಧರ್ಮಸ್ಥಳ ಶ್ರೀ ಮಂಜುನಾಥ ಕ್ಷೇತ್ರಕ್ಕೆ ಭೇಟಿ ಮಾಡಿ ಧರ್ಮಾಧಿಕಾರಿ ಡಿ ವೀರೇಂದ್ರ ಹೆಗ್ಗಡೆ ಸಮ್ಮುಖದಲ್ಲಿಯೇ ಆಣೆ ಮಾಡಿದ್ದಾರೆ.

ಧರ್ಮಸ್ಥಳದ ಶ್ರೀ ಮಂಜುನಾಥಸ್ವಾಮಿ ಮೇಲೆ ಆಣೆ–ಪ್ರಮಾಣ ಮಾಡಲು ನೂರಾರು ಬೆಂಬಲಿಗರು, ಕಾರ್ಯಕರ್ತರ ಜೊತೆ ಶಾಸಕ ಸುರೇಶ್ ಹೋಗಿದ್ದರು. ಇದಕ್ಕೂ ಮುನ್ನ ಬೇಲೂರಿನ ಶ್ರೀ ಚನ್ನಕೇಶವಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ನಂತರ ದೇವಾಲಯದ ಆವರಣದಲ್ಲಿರುವ ಬಲಿ ಕಲ್ಲಿನ ಮೇಲೆ ಆಣೆ ಮಾಡಿದರು.

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ: ನಾನು ಪತ್ನಿ ಎಂಬ ಕೆಲಸಕ್ಕೆ ರಾಜೀನಾಮೆ ನೀಡುತ್ತಿದ್ದೇನೆ.
ಗಂಡ : ಆಯ್ತು. ಮತ್ತೊಬ್ಬಳು ಬರುವವರೆಗೆ ನೀನು ಕೆಲಸ ಬಿಡಬಾರದು!

ಮೈಸೂರು ಮಿತ್ರ
ಬುಧವಾರ, ಜುಲೈ 1, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಕಷ್ಟಗಳು ಜೀವನವನ್ನು ನಾಶ ಮಾಡಲು ಬರುವುದಿಲ್ಲ, ಬದಲಿಗೆ ನಮ್ಮಲ್ಲಿರುವ ಗುಪ್ತ ಸಾಮರ್ಥ್ಯವನ್ನು ಅರಿಯಲು ಸಹಾಯ ಮಾಡುತ್ತವೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಸ್ವಾರ್ಥ ಉಳಿಸಿದವ ಪಾಪಾತ್ಮ, ನಿಸ್ವಾರ್ಥ ಗಳಿಸಿದವ ಪುಣ್ಯಾತ್ಮ.

ನಿಮ್ಮ ಪತ್ರಗಳು

ಪ್ರಜಾಪ್ರಭುತ್ವದ ಗೌರವ ಉಳಿಸಿ

ಮಾನ್ಯರೇ

ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅವರ ಮೇಲೆ ಜೆಡಿಎಸ್ ಕಾರ್ಯಕರ್ತರೊಬ್ಬರು ಚಪ್ಪಲಿಯನ್ನು ಎಸೆದು ಈಗಾಗಲೇ ಆ ಕಾರ್ಯಕರ್ತನನ್ನು ಪೊಲೀಸರು ಬಂದಿಸಿದ್ದಾರೆ.

ಕೆಂಪೇಗೌಡ ಜಯಂತಿ ಸಂದರ್ಭದಲ್ಲಿ ಪ್ರಚೋದನಕಾರಿಯಾಗಿ ಸಿನಿಮಾ ಶೈಲಿಯಲ್ಲಿ ಭಾಷಣ ಬಿಗಿದು ಜೆಡಿಎಸ್ ರಾಜ್ಯಾಧ್ಯಕ್ಷ, ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಮೇಲೆ ಕೀಳುಮಟ್ಟದಲ್ಲಿ ಮಾತನಾಡಿರುವುದು ಪ್ರದೀಪ್ ಈಶ್ವರ್ ಅವರಿಗೆ ಶೋಭೆ ತರುವುದಿಲ್ಲ.

ಕುಮಾರಸ್ವಾಮಿಯವರು ತಮ್ಮ ಜೆಡಿಎಸ್ ಕಾರ್ಯಕರ್ತರಿಗೆ ಈ ಘಟನೆಗೆ ಸಂಬಂಧಿಸಿದಂತೆ ಒಂದು ಮನವಿ ಮಾಡಿದ್ದಾರೆ. ದಯಮಾಡಿ ಯಾರೂ ಇಂತಹ ಪ್ರಚೋದನಕಾರಿ ಹೇಳಿಕೆಗಳಿಗೆ ಪ್ರತಿಕ್ರಿಯೆ ನೀಡಬೇಡಿ. ಚಪ್ಪಲಿ ಎಸೆಯುವುದೆಲ್ಲಾ ಮಾಡಬೇಡಿ. ಅದು ನಮ್ಮ ಸಂಸ್ಕೃತಿಯಲ್ಲ ಎಂದಿದ್ದಾರೆ.

ಆದರೆ ನಾವು ಇತಿಹಾಸ ನೋಡಿದಾಗ ಇದೇ ಕುಮಾರಸ್ವಾಮಿಯವರು ರಾಮಕೃಷ್ಣ ಹೆಗಡೆಯವರು ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ ದೇವೇಗೌಡರಿಗೆ ಮುಖ್ಯಮಂತ್ರಿ ಹುದ್ದೆ ತಪ್ಪಿತೆಂದು ವಿಧಾನಸೌಧ ಮೆಟ್ಟಿಲಿಂದ ಹೆಗಡೆಯವರ ಕಡೆಗೆ ಚಪ್ಪಲಿ ಎಸೆದಿದ್ದರು. ಈಗ ಈ ಹೇಳಿಕೆ ನೀಡಲು ಇವರಿಗೆ ಯಾವ ನೈತಿಕತೆ ಇದೆ ಎಂಬುದನ್ನು ಹೇಳಬೇಕಾಗಿದೆ. ಹಾಗೂ ಇಂದಿನ ಯುವ ಜನಾಂಗಕ್ಕೆ ಆ ವಿಚಾರ ಬಹುತೇಕ ಗೊತ್ತಿಲ್ಲ.

ಯಾವುದೇ ವಿಚಾರವನ್ನು ಮಾತನಾಡುವಾಗ ತಾವು ಸೃಷ್ಟಿಸಿದ ಇತಿಹಾಸವನ್ನು ಮರೆತು ಬೇರೆಯವರಿಗೆ ಉಪದೇಶ ಮಾಡುವುದು ಯಾರಿಗೂ ಸಾದುವಲ್ಲ. ಆಗ ತಾವು ಆ ಕೆಲಸವನ್ನು ಮಾಡಿದ್ದು ತಪ್ಪು ಎಂದು ಕುಮಾರಸ್ವಾಮಿಯವರು ಎಲ್ಲಿಯೂ ಆ ತಪ್ಪಿಗೆ ಇದುವರೆವಿಗೂ ಕ್ಷಮೆಯಾಚಿಸಿಲ್ಲ. ಹುಡುಗಾಟದಲ್ಲಿ ಮಾಡಿದ ತಪ್ಪು ಎಂಬ ಪಾಪಪ್ರಜ್ಞೆಯೂ ಅವರನ್ನು ಕಾಡಿಲ್ಲ.

ಇಲ್ಲಿ ಪರಸ್ಪರ ಶಾಸಕರು ಮತ್ತು ಕೇಂದ್ರ ಸಚಿವರು ನಿಂದಿಸಿಕೊಳ್ಳುತ್ತಾ ವೃಥಾ ಕಾಲಹರಣ ಮಾಡುತ್ತಿರುವುದು ಸರಿಯಲ್ಲ. ಜನರ ಮುಂದೆ ಬೇಕಾದಷ್ಟು ಸಮಸ್ಯೆಗಳು ಇರುವಾಗ ಈ ನಾಯಕರು ಜಾತಿ ವಿಚಾರಗಳನ್ನು, ವೈಯಕ್ತಿಕ ವಿಚಾರಗಳನ್ನು ಸಾರ್ವಜನಿಕವಾಗಿ ರಂಪ ಮಾಡುತ್ತಿರುವುದು ತರವಲ್ಲ. ಗಹನ ವಾದ ವಿಚಾರಗಳನ್ನು ಅವಲೋಕನ ಮಾಡಿ ಅಭಿವೃದ್ಧಿ ಕಾರ್ಯದತ್ತ ಗಮನಹರಿಸಿ ಮತದಾರರ ಋಣ ತೀರಿಸಿ ತಮ್ಮಗಳ ಬೀದಿ ನಾಟಕ ನಿಲ್ಲಿಸಿ ಎಂಬುದೇ ರಾಜ್ಯದ ಜನತೆ ಈಗ ಬಯಸುತ್ತಿದ್ದಾರೆ. ಇಂತಹ ಚಿಲ್ಲರೆ ರಾಜಕಾರಣವನ್ನು ಮಾಡಿ ರಾಜ್ಯದ ಜನತೆ ಮುಂದೆ ನಗೆ ಪಾಟಲಾಗುವುದನ್ನು ತಪ್ಪಿಸಿ ಪ್ರಜಾಪ್ರಭುತ್ವದ ಗೌರವ ಉಳಿಸಿ ಎಂಬುದು ನಮ್ಮ ಪ್ರಾರ್ಥನೆ.

—ಶಿವಮೊಗ್ಗ ನಾ. ದಿನೇಶ್ ಆಡಿಗ, ಮೈಸೂರು

ಸರ್ಕಾರದ ಅನುದಾನ ವಿಷಯ – ತಾರತಮ್ಯ ಸರ್ಕಾರದ ನೀತಿ, ನಡಾವಳಿಗಳು ಸರಿಯಲ್ಲ

ಮಾನ್ಯರೆ,

ನಮ್ಮ ಮಾನ್ಯ ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರದ ಅನುದಾನವನ್ನು ಬಿಡುಗಡೆ ಮಾಡುವಲ್ಲಿ ತಾರತಮ್ಯ ನೀತಿಯನ್ನು ಅನುಸರಿಸುತ್ತಿರುವುದು ಖಂಡಿತಾ ಸರಿಯಲ್ಲ. ಇದು ಒಂದು ಕಣ್ಣಿಗೆ ಸುಣ್ಣ ಇನ್ನೊಂದು ಕಣ್ಣಿಗೆ ಬೆಣ್ಣೆ ಎಂಬ ಗಾದೆಯ ಮಾತಿನಂತೆ ಇದೆ.

ತಾಲೂಕುವಾರು ಅಲ್ಲಿರುವ ಜನಸಂಖ್ಯೆಯನ್ನು ಅನುಸರಿಸಿ ಅನುದಾನವನ್ನು ಬಿಡುಗಡೆ ಮಾಡಬೇಕಿತ್ತು. ಅದು ಬಿಟ್ಟು ಮುಂದಿನ ಸಾರ್ವತ್ರಿಕ ಚುನಾವಣೆಯನ್ನು ಗಮನದಲ್ಲಿಟ್ಟು ಕೊಂಡಿರುವ ಸರ್ಕಾರವು ತಮ್ಮ ಮನಸ್ಸಿಗೆ ಬಂದಂತೆ ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ಇದು ಸರಿಯೇ ಎಂದು ಜನತಾಜನಾರ್ಧನರು ಪ್ರಶ್ನಿಸುತ್ತಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಇದು ಸರ್ಕಾರದ ನಡೆಗೆ ಅಡ್ಡ ಪರಿಣಾಮವನ್ನು ಉಂಟುಮಾಡಬಹುದು. ಈ ತರಹದ ತಾರತಮ್ಯ ನೀತಿಗೆ ಗೃಹ ಮಂತ್ರಿಯವರ ನೇರ ಹೊಣೆಗಾರರಾಗಿರುತ್ತಾರೆ. ಈ ವಿಷಯಗಳನ್ನೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಸರ್ಕಾರವು ಮುಂದಿನ ಹೆಜ್ಜೆಗಳನ್ನಿಡಲಿ ಎಂಬುದು ಜನತೆಯ ಆಶಯ.

—ಬೇಲೂರು ದ.ಶಂ.ಪ್ರಕಾಶ್, ಮೈಸೂರು

ಪರಿಶಿಷ್ಟರಿಗೆ ತರಬೇತಿ ಕಾರ್ಯಕ್ರಮ ಮರೀಚಿಕೆ ಆಗದಿರಲಿ..!

ಮಾನ್ಯರೆ,

"ಸರ್ಕಾರದ ಯಾವುದೇ ಯೋಜನೆ, ಕಾರ್ಯಕ್ರಮ, ಸವಲತ್ತು ಮೊದಲು ದಲಿತ, ದಮನಿತ, ಶೋಷಿತ ವರ್ಗಕ್ಕೆ ತಲುಪಬೇಕು. ಅವರು ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲೇರಿದಾಗ ಮಾತ್ರ ದೇಶದ ನಿಜವಾದ ಪ್ರಗತಿ."

ಡಾ.ಅಂಬೇಡ್ಕರ್..

ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಐಎಎಸ್ ಕೆಎಎಸ್ ಬ್ಯಾಂಕಿಂಗ್ ರೈಲ್ವೆ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡುವ ಕಾರ್ಯಕ್ರಮ ರೂಪಿಸಿದೆ ಅಷ್ಟೇ.

ಆದರೆ, ಕಳೆದ 2–3 ವರ್ಷಗಳಿಂದ ಈ ತರಬೇತಿಗೆ ಅರ್ಜಿಯನ್ನೇ ಆಹ್ವಾನಿಸಿಲ್ಲ. ಹೀಗಾಗಲೇ, 2025–2026 ಸಾಲು ಮುಗಿದು ಹೋಗಿದೆ. ಇನ್ನೂ ಕೂಡ ಯುಪಿಎಸ್ಸಿ ಪರೀಕ್ಷೆಗೂ ನೀಡುವಂಥ ತರಬೇತಿಗೆ ಅರ್ಜಿ ಕರೆದಿಲ್ಲ. ಇದಕ್ಕೆ ನೈಜ ಕಾರಣ ವಾದರೂ ಏನು..?

ಗಮನಿಸಬೇಕಾದ ಅಂಶವೆಂದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಣ್ಣ ಹುದ್ದೆಯಿಂದ ಹಿಡಿದು ದೊಡ್ಡ ಉನ್ನತ ಅಧಿಕಾರಿಗಳವರೆಗೂ ಬಹುತೇಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಧಿಕಾರಿಗಳೇ ಇದ್ದಾರೆ. ನಿರ್ಧಾರ ತೆಗೆದುಕೊಳ್ಳುವ ಹಂತದಲ್ಲೂ ಹಾಗೂ ಕಾನೂನು ಕಟ್ಟಪ್ಪಣೆಗಳನ್ನು ಹೊರಡಿಸುವ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಸಹ ಬಹುತೇಕ ಪರಿಶಿಷ್ಟ ಜಾತಿಯವರೇ ಇರುತ್ತಾರೆ. ಹೀಗಿದ್ದರು


ಈ ಪರಿ ನಿರ್ಲಕ್ಷ್ಯ ಆದರೂ ಏಕೆ..?

ಸರ್ಕಾರದಿಂದ ಸಿಗುವಂಥ ಯೋಜನೆ ಸಂವಿಧಾನಾತ್ಮಕ ಹಕ್ಕು ದಯೆ ಅಲ್ಲ. ಸಾಮಾಜಿಕ ನ್ಯಾಯ ಅಂದರೆ ಯಾವುದೇ ಯೋಜನೆಗಳು ನಿರಂತರವಾಗಿ ಸಿಗಬೇಕೇ ವಿನಃ ನಿಲ್ಲಬಾರದು. ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಇತ್ತ ಅಗತ್ಯವಾಗಿ ಗಮನಹರಿಸಿ ಸಮಸ್ಯೆ ಬಗೆಹರಿಸಲಿ.

—ಅನಿಲ್‌ಕುಮಾರ್, ನಂಜನಗೂಡು.

ಅಮೂಲ್ಯ ನೆನಪುಗಳ ಫ್ರೇಂ....

—ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ





ಮಾನವಕುಲಕ್ಕೆ ಅದ್ಭುತ ದೃಶ್ಯವನ್ನು ನೀಡಲು ದೇವರು ಮಹಾರಾಜರನ್ನು ಸೃಷ್ಟಿಸಿದ್ದಾನೆ ಎಂದು ರುಡ್ಯಾರ್ಡ್ ಕಿಪ್ಲಿಂಗ್ ಬರೆದಿದ್ದಾರೆ. ಮಹಾರಾಜರು ನಿಜಕ್ಕೂ ರಾಜವೈಭವದ ಜೀವಂತ ಪ್ರತಿರೂಪವಾಗಿದ್ದರು. ಅವರ ಬದುಕು ಕನಸುಗಳ ಲೋಕವನ್ನೇ ನೆನಪಿಸುವಂತಿತ್ತು. ಅವರ ಮೈತ್ರಿಗಳು, ವೈಫಲ್ಯಗೊಂಡ ಸಂಬಂಧಗಳು ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಅವರ ವೈಭವೋಪೇತ ಮತ್ತು ದಂತಕಥೆಗಳಾಗಿ ಉಳಿದಿರುವ ರಾಜವಿವಾಹಗಳು ಜನರನ್ನು ಸದಾ ಬೆರಗುಗೊಳಿಸುತ್ತಿದ್ದವು.

1941ರ ಜೂನ್ 18ರಂದು ಮೈಸೂರು ಅರಮನೆಯ ಭವ್ಯ ನವಿಲು ಮಂಟಪದಲ್ಲಿ ಸೆರೆಹಿಡಿಯಲಾದ ಈ ಮನಮೋಹಕ ಕಪ್ಪು–ಬಿಳುಪಿನ ಛಾಯಾಚಿತ್ರದಲ್ಲಿ ಆಗಷ್ಟೇ ಸತಿಪತಿಯಾದ ಹದಿನಾಲ್ಕು ವರ್ಷದ ರಾಜಕುಮಾರಿ ಶ್ರೀ ಜಯಚಾಮುಂಡಮ್ಮಣ್ಣಿಯವರು ಹಾಗೂ ಭರತ್‌ಪುರದ ಮಹಾರಾಜ ಬ್ರಿಜೇಂದ್ರ ಸವಾಯಿ ಬ್ರಿಜೇಂದ್ರ ಸಿಂಗ್ ಬಹದ್ದೂರ್ ಜಂಗ್ ಅವರ ಜೋಡಿಯನ್ನು ಕಾಣಬಹುದು.

ಭರತ್‌ಪುರದ ಮಹಾರಾಣಿಯಾದ ಮೈಸೂರಿನ ಪುಟ್ಟ ರಾಜಕುಮಾರಿ ಅವರು ಕೇವಲ ತಮ್ಮ 27 ವರ್ಷ (30.10.1927 ರಿಂದ 26.7.1954) ಮಾತ್ರವೇ ಬದುಕಿದ್ದರು. 1954ರ ಜುಲೈ 9ರಂದು ಬೆಂಗಳೂರಿನಲ್ಲಿ ತಮ್ಮ ಐದನೇ ಪುತ್ರಿಗೆ ಜನ್ಮ ನೀಡಿದ ಬಳಿಕ, ಅವರು ಮೈಸೂರಿಗೆ ಆಗಮಿಸಿ ತಮ್ಮ ತಾಯಿಯ ನಿವಾಸವಾದ ಚಾಮುಂಡಿ ವಿಹಾರದಲ್ಲಿ ವಾಸ್ತವ್ಯ ಹೂಡಿದ್ದರು. ಅವರು ಕೊನೆಯುಸಿರೆಳೆದ ಸಂದರ್ಭದಲ್ಲಿ ಅವರ ಪತಿಯಾದ ಭರತ್‌ಪುರದ ಮಹಾರಾಜರು ಅವರ ಪಕ್ಕದಲೇ ಇದ್ದರು.

1954ರ ಜುಲೈ 28ರ ಇಂಡಿಯನ್ ಎಕ್ಸ್‌ಪ್ರೆಸ್ ಬೆಂಗಳೂರು ಆವೃತ್ತಿಯಲ್ಲಿ ಪ್ರಕಟವಾದ ವರದಿ ಪ್ರಕಾರ, 'ಭಾರತದ ರಾಷ್ಟ್ರಪತಿಗಳ ಸೇನಾ ಕಾರ್ಯದರ್ಶಿಯಾಗಿದ್ದ ಮೇಜರ್ ಜನರಲ್ ಬಿ.ಚಟರ್ಜಿ ಅವರು ಈ ದುಃಖದ ಸುದ್ದಿಯನ್ನು ತಿಳಿದ ತಕ್ಷಣ ಚಾಮುಂಡಿ ವಿಹಾರಕ್ಕೆ ಭೇಟಿ ನೀಡಿ, ಆ ಸಂದರ್ಭದಲ್ಲಿ ಮೈಸೂರು ಪ್ರವಾಸದಲ್ಲಿದ್ದ ಭಾರತದ ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರ ಸಂತಾಪ ಸಂದೇಶವನ್ನು ಮೈಸೂರು ಮಹಾರಾಜರು, ಭರತ್‌ಪುರ ಮಹಾರಾಜರು, ಮೈಸೂರಿನ ಯುವರಾಣಿ (ಮೃತ ಮಹಾರಾಣಿಯವರ ತಾಯಿ) ಹಾಗೂ ರಾಜಕುಟುಂಬದ ಇತರ ಸದಸ್ಯರಿಗೆ ತಲುಪಿಸಿದರು. ಬಳಿಕ ಮಹಾರಾಣಿಯವರ ಪಾರ್ಥಿವ ಶರೀರವನ್ನು ಅಂತ್ಯಕ್ರಿಯೆಗಾಗಿ ವಿಶೇಷವಾಗಿ ವ್ಯವಸ್ಥೆ ಮಾಡಲಾದ ವಿಮಾನದ ಮೂಲಕ ಭರತ್‌ಪುರಕ್ಕೆ ಕೊಂಡೊಯ್ಯಲಾಯಿತು.'

ಯುಪಿಯ ಗೋವರ್ಧನ್ ಹಿಲ್ಸ್‌ನಲ್ಲಿರುವ ಭರತ್ ಪುರ್ ರಾಜೋನ್ ಕಿ ಛತ್ರಿಯಲ್ಲಿ (ಸ್ಮಾರಕ ಸಮಾಧಿಗಳು) ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು.

(ಛಾಯಾಚಿತ್ರ ಗಾತ್ರ: 13x20 ಸೆಂ.ಮೀ; ಛಾಯಾಚಿತ್ರ ಮತ್ತು ಆಮಂತ್ರಣ ಸಂಗ್ರಹ: ರಾಮ್‌ಸನ್ಸ್ ಕಲಾ ಪ್ರತಿಷ್ಠಾನ)



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ದೇವುಡು ಅವರ ಮಹಾಬ್ರಾಹ್ಮಣ

ದೇವುಡು ನರಸಿಂಹ ಶಾಸ್ತ್ರಿಗಳು ರಚಿಸಿದ ಮೊದಲನೆಯ ಮಹಾಕೃತಿ 'ಮಹಾಬ್ರಾಹ್ಮಣ'. ಅವರು ವೇದವೇದಾಂತಗಳ ಮತ್ತು ಮೀಮಾಂಸಾ ಶಾಸ್ತ್ರದ ಅಧ್ಯಯನದಲ್ಲಿ ಪರಕಾಷ್ಠೆಯನ್ನು ತಲುಪಿದ್ದರು ಎಂಬುದಕ್ಕೆ ಸಾಕ್ಷಿ ಈ ಕಾದಂಬರಿ. ಮೀಮಾಂಸೆ ಎಂದರೆ ಗೌರವ ಪೂರ್ವಕವಾದ ಶಾಸ್ತ್ರ ಜಿಜ್ಞಾಸೆ. ಅದರಲ್ಲಿ ಪೂರ್ವ ಮೀಮಾಂಸೆ ವೇದೋಕ್ತವಾದ ಯಜ್ಞಯಾಗಾದಿ ಕರ್ಮಗಳ ಸ್ವರೂಪವನ್ನು ತಿಳಿಸುತ್ತದೆ. ಉತ್ತರ ಮೀಮಾಂಸೆಯಾದರೋ ಮೋಕ್ಷ ಕಾರಣವಾದ ಬ್ರಹ್ಮಜ್ಞಾನವನ್ನು ನೀಡುತ್ತದೆ. ವೇದಗಳಲ್ಲಿ ತನಗೆ ಕುಲಕ್ರಮದಿಂದ ಬಂದ ವೇದವನ್ನು ಕಲಿತವನು ಬ್ರಾಹ್ಮಣ. ನಾಲ್ಕು ವೇದಗಳನ್ನೂ ಸಾಂಗೋಪಾಂಗವಾಗಿ ಅಧ್ಯಯನ ಮಾಡಿದವನು ಮಹಾ ಬ್ರಾಹ್ಮಣ. ಏಷ ತು ಮಹಾಬ್ರಾಹ್ಮಣೋ ಯಶ್ಚತುರೋ ವೇದಾನ್ ಅಧೀತೇ. ವೇದಗಳ ಮಂತ್ರಗಳನ್ನು ಸಾಕ್ಷಾತ್ಕರಿಸಿಕೊಂಡು ಲೋಕಕ್ಕೆ ನೀಡಿದವರಂತೂ ಮಹಾ ಬ್ರಾಹ್ಮಣರಲ್ಲಿ ಮಹಾಬ್ರಾಹ್ಮಣರು.

ಋಗ್ವೇದದಲ್ಲಿ ಹತ್ತು ಮಂಡಲಗಳಿವೆ. ಮೂರನೆಯ ಮಂಡಲದ ಮಂತ್ರಗಳನ್ನು ಸಾಕ್ಷಾತ್ಕರಿಸಿಕೊಂಡ ವಿಶ್ವಾಮಿತ್ರ, ನಾಲ್ಕನೆಯ ಮಂಡಲದ ಮಂತ್ರಗಳನ್ನು ತಪಸ್ಸಿನಲ್ಲಿ ಕಂಡುಕೊಂಡ ವಾಮದೇವ, ಏಳನೆಯ ಮಂಡಲದ ಮಂತ್ರಗಳ ದ್ರಷ್ಟಾರ ವಸಿಷ್ಠ–(ವಸಿಷ್ಠ=ವಶಿಷ್ಠ ಎರಡೂ ಸರಿ)–ಇವರ ಹೆಸರನ್ನು ಹೇಳುವವರೂ ಪುಣ್ಯವಂತರು. ರಾಮಾಯಣ, ಮಹಾಭಾರತ, ಹರಿವಂಶ, ವಿಷ್ಣುಪುರಾಣ ಮುಂತಾದ ಗ್ರಂಥಗಳಲ್ಲಿ ಇವರ ಕಥೆ ಹಂಚಿ ಹೋಗಿದೆ. ಇವೆಲ್ಲವುಗಳ ಅಧ್ಯಯನವನ್ನು ಮಾಡಿ ಅವರ ಕಥೆಯನ್ನು ಎಲ್ಲ ಕನ್ನಡಿಗರೂ ಓದಬಹುದಾದ ಕಾದಂಬರಿಯ ರೂಪಕ್ಕೆ ತಂದವರು ಪ್ರಾತಃಸ್ಮರಣೀಯ ದೇವುಡು ನರಸಿಂಹ ಶಾಸ್ತ್ರಿಗಳು. ಅದೇ ಮಹಾಬ್ರಾಹ್ಮಣ. 1952ರಲ್ಲಿ ರಚಿತವಾದ ಈ ಕೃತಿ ಇದುವರೆಗೆ 34 ಮುದ್ರಣಗಳನ್ನು ಕಂಡಿದೆಯೆಂಬುದು ಅದರ ಜನಪ್ರಿಯತೆಯನ್ನು, ಶಾಶ್ವತ ಮೌಲ್ಯವನ್ನೂ ತೋರಿಸುತ್ತದೆ. ಇದು ಈಗ ಕನ್ನಡಕ್ಕೆ ಮಾತ್ರ ಸೀಮಿತವಾಗಿಲ್ಲ. ಶತಾದಧಾನಿ ಪದ್ಮಭೂಷಣ ಡಾ.ಆರ್.ಗಣೇಶ್ ಮಹಾಬ್ರಾಹ್ಮಣವನ್ನು ಸಂಸ್ಕೃತಕ್ಕೆ ಅನುವಾದಿಸಿ ಅದಕ್ಕೆ ಅಖಿಲ ಭಾರತ ವ್ಯಾಪ್ತಿಯನ್ನು ತಂದುಕೊಟ್ಟಿದ್ದಾರೆ.

ವೇದ ಕಾಲದಿಂದ ಮಹರ್ಷಿಯಾಗಿ ವಿಶ್ವಕ್ಕೆ ಮಿತ್ರನಾಗಿದ್ದ, ಕುಶಿಕ ವಂಶದಲ್ಲಿ ಹುಟ್ಟಿದುದರಿಂದ ಕೌಶಿಕನೆನಿಸಿದ್ದ, ಗಾಧಿಸುತ ವಿಶ್ವಾಮಿತ್ರನು ದ್ವಿಜರಿಗೆಲ್ಲ ದ್ವಿಜತ್ವವನ್ನು ತಂದುಕೊಡುವ ಗಾಯತ್ರೀ ಮಂತ್ರದ ದ್ರಷ್ಟಾರ. ಇಪ್ಪತ್ತನಾಲ್ಕು ಅಕ್ಷರಗಳನ್ನಷ್ಟೇ ಹೊಂದಿರುವ ಮೂರು ಸಾಲಿನ ಈ ಮಂತ್ರಕ್ಕೆ ಎಷ್ಟೋ ವ್ಯಾಖ್ಯಾನಗಳು, ಭಾಷ್ಯಗಳು, ವಿವರಣೆಗಳು ರಚಿತವಾಗಿವೆ. ಇದರ ಜಪವನ್ನು ಇಂದಿಗೂ ಲಕ್ಷಾಂತರ ಜನರು ಮಾಡುತ್ತಿದ್ದಾರೆ. ಋಗ್ವೇದ ಸಂಹಿತೆಯಲ್ಲಿರುವ 10552 ಮಂತ್ರಗಳಲ್ಲಿ ಪರಮ ಪವಿತ್ರವಾದುದು ಗಾಯತ್ರೀ ಮಂತ್ರ. ಅದರ ದ್ರಷ್ಟಾರ ವಿಶ್ವಾಮಿತ್ರ ಮಹಾಬ್ರಾಹ್ಮಣ ಕಾದಂಬರಿಯ ಮುಖ್ಯಪಾತ್ರ.

ಕ್ಷತ್ರಿಯನಾಗಿ ಹುಟ್ಟಿ ಭೂಮಿಯನ್ನು ಆಳುತ್ತಿದ್ದ ಕೌಶಿಕ ಎಲ್ಲ ಶ್ರೇಷ್ಠವಸ್ತುಗಳೂ ತನಗೆ ಸೇರಬೇಕು. ಎಲ್ಲ ರತ್ನಗಳನ್ನು ಪಡೆದುಕೊಳ್ಳಲು ತನಗಿರುವ ಅಧಿಕಾರವನ್ನು ಯಾರೂ ಪ್ರಶ್ನಿಸುವಂತಿಲ್ಲ ಎಂಬ ಮನೋಭಾವದಲ್ಲಿದ್ದ ರಾಜ. ಅವನೊಮ್ಮೆ ಮಹರ್ಷಿ ಬ್ರಹ್ಮರ್ಷಿ ವಶಿಷ್ಠರ ಆಶ್ರಮಕ್ಕೆ ಸಪರಿವಾರನಾಗಿ ಸೇನಾ ಸಮೇತನಾಗಿ ಬಂದ. ವಶಿಷ್ಠರ ಬಳಿ ನಂದಿನೀಧೇನುವಿತ್ತು. ಅದು ಕಾಮಧೇನುವಿನ ಮಗಳು. ಪ್ರತಿದಿನದ ಹೋಮಕಾರ್ಯಕ್ಕಾಗಿ ದೇವತೆಗಳು ಅದನ್ನು ವಶಿಷ್ಠರಿಗೆ ಕೊಟ್ಟಿದ್ದರು. ಕೌಶಿಕನಿಗೂ ಅವನ ಪರಿವಾರಕ್ಕೂ ಸೈನ್ಯಕ್ಕೂ ವಶಿಷ್ಠರು ನಂದಿನಿಯ ಪ್ರಭಾವದಿಂದ ಅದ್ಭುತವಾದ ಆತಿಥ್ಯವನ್ನು ಮಾಡಿದರು. ಒಂದು ಪುಟ್ಟ ಆಶ್ರಮದಲ್ಲಿರುವ ಋಷಿ ಇಷ್ಟು ದೊಡ್ಡ ಸೈನ್ಯಕ್ಕೆ ಭೋಜನವನ್ನು ಮಾಡಿಸಿದ್ದು ಹೇಗೆ ಎಂದು ಕೇಳಿದಾಗ ಅದು ನಂದಿನಿಯ ಶಕ್ತಿಯಿಂದ ಎಂದು ಕೌಶಿಕನಿಗೆ ತಿಳಿಯಿತು. ಆ ನಂದಿನಿ ರಾಜನಿಗೆ ಸೇರಬೇಕಾದುದು. ನನಗೆ ಕೊಟ್ಟು ಬಿಡಿ ಎಂದು ವಶಿಷ್ಠರನ್ನು ಕೇಳಿದ. ಅದು ಹೋಮಧೇನುವಾದ್ದರಿಂದ ಕೊಡಲಾರೆ ಎಂದರವರು. ಕೌಶಿಕರಾಜ ಬಲಪ್ರಯೋಗದಿಂದ ಅದನ್ನು ಸೆಳೆದೊಯ್ಯಲು ಯತ್ನಿಸಿದ. ಅದೂ ಸಾಧ್ಯವಾಗಲಿಲ್ಲ. ಅವನ ಸೈನ್ಯವು ಆಶ್ರಮಕ್ಕೆ ನುಗ್ಗಿತು. ನಂದಿನಿಯ ಮಹಿಮೆಯಿಂದ ಎಲ್ಲಿಂದಲೋ ಬಂದ ಪಡೆ ಕೌಶಿಕನ ಸೈನ್ಯವನ್ನು ಸದೆ ಬಡಿಯಿತು. ಕೌಶಿಕನು ಸೋತು ಹಿಂದಿರುಗಬೇಕಾಯಿತು. ಸೋತರೂ ಅವನು ಸುಮ್ಮನಾಗಲಿಲ್ಲ. ತಪಸ್ಸು ಮಾಡಿದ ತೀವ್ರ ತಪಸ್ಸಿನಿಂದ ರುದ್ರನನ್ನು ಒಲಿಸಿಕೊಂಡು ಹೊಸ ಶಸ್ತ್ರಾಸ್ತ್ರಗಳನ್ನು ಪಡೆದುಕೊಂಡು ಮತ್ತೆ ವಶಿಷ್ಠಾಶ್ರಮದ ಮೇಲೆ ದಾಳಿ ಮಾಡಿದ. ಆಗ ಆಶ್ರಮದಲ್ಲಿ ವಶಿಷ್ಠ ಮಹರ್ಷಿಗಳಿರಲಿಲ್ಲ. ಅವರ ಪತ್ನಿ ಅರುಂಧತೀದೇವಿ ನಂದಿನಿಯೊಡನೆ ಆಶ್ರಮದ ಯೋಗವನ್ನು ನೋಡಿಕೊಳ್ಳುತ್ತಿದ್ದಳು. ಅಪಾಯವನ್ನು ಎದುರಿಸುವುದಕ್ಕಾಗಿ ವಶಿಷ್ಠರು ತಮ್ಮ ಬ್ರಹ್ಮದಂಡವನ್ನು ಆಶ್ರಮದಲ್ಲಿಟ್ಟು ಯಜ್ಞಕ್ಕಾಗಿ ವರುಣಲೋಕಕ್ಕೆ ಹೋಗಿದ್ದರು. ಆಶ್ರಮದಲ್ಲಿ ಅರುಂಧತಿಯೊಬ್ಬಳೇ ಇದ್ದಾಳೆಂದು ತಿಳಿದರೂ ಸುಮ್ಮನಾಗದೆ ಕೌಶಿಕನು ಅಸ್ತ್ರಗಳನ್ನು ಪ್ರಯೋಗಿಸಿದನು. ಆಕೆ ಬ್ರಹ್ಮದಂಡವನ್ನು ಮುಂದಿರಿಸಿದಳು. ಅದು ಕೌಶಿಕನ ಅಸ್ತ್ರಗಳನ್ನು ನುಂಗಿ ಹಾಕಿತು. ಕೌಶಿಕನನ್ನೂ ನುಂಗಿ ನೊಣೆದು ಹಾಕಲು ಮುನ್ನುಗ್ಗಿತು. ಆಗ ಅಲ್ಲಿಗೆ ಬಂದ ವಾಮದೇವ ಋಷಿಯು ಬ್ರಹ್ಮ ದಂಡಕ್ಕೆ ಪ್ರಾರ್ಥನೆಯನ್ನು ಸಲ್ಲಿಸಿ ಶಾಂತವಾಗಲು ಕೋರಿದನು. ಅದು ಶಾಂತವಾಯಿತು. ಕೌಶಿಕನು ಉಳಿದುಕೊಂಡನು. ಆಗ ಅವನ ಬಾಯಿಂದ ಬಂದ ಮಾತು –

ಧಿಗ್ ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂ ಬಲಮ್।
ಏಕೇನ ಬ್ರಹ್ಮದಂಡೇನ ಸರ್ವಾಸ್ತ್ರಾಣಿ ಹತಾನಿ ಮೇ ॥

ವಶಿಷ್ಠರ ಮೇಲೆ ವೈರವನ್ನು ಶತ್ರುತ್ವದ ಭಾವನೆಯನ್ನು ಬಹ್ಮದಂಡವು ಕೊನೆಗಾಣಿಸಿತ್ತು. ನಾನೂ ವಶಿಷ್ಠರಂತೆ ಮಹಾಬ್ರಾಹ್ಮಣನಾಗುತ್ತೇನೆ. ಬ್ರಾಹ್ಮಣರ ಬ್ರಾಹ್ಮಣನಾಗುತ್ತೇನೆ ಎಂದು ಕೌಶಿಕನು ಸಂಕಲ್ಪ ಮಾಡಿದನು. ಎಲ್ಲದಕ್ಕೂ ಅವನಿಗಿದ್ದ ಮಾರ್ಗ ತಪಸ್ಸು.

ಹೀಗಿರುವಾಗ ಕಾದಂಬರಿಯಲ್ಲಿ ತ್ರಿಶಂಕುವೆಂಬ ಮಹಾರಾಜನ ಕಥೆಯ ಪ್ರವೇಶ. ತ್ರಿಶಂಕುವಿಗೆ ಮಾನವ ಶರೀರದೊಡನೆ ಸ್ವರ್ಗಕ್ಕೆ ಹೋಗುವ ಹಂಬಲ. ಅದಕ್ಕಾಗಿ ವಿಶೇಷ ಯಜ್ಞವನ್ನು ಮಾಡಿಸಲು ಕುಲಗುರುಗಳಾದ ವಶಿಷ್ಠರನ್ನು ಕೋರುತ್ತಾನೆ. ಅವರು ಒಪ್ಪುವುದಿಲ್ಲ. ಬೇರೆಯವರನ್ನು ನೋಡಿಕೋ ಎಂದು ಹೇಳಿಬಿಡುತ್ತಾರೆ. ತ್ರಿಶಂಕು ವಶಿಷ್ಠರ ಪುತ್ರರನ್ನು ಕೇಳಿದಾಗ ಅವರೂ ನಿರಾಕರಿಸುತ್ತಾರೆ. ಆಮೇಲೆ ಅವನು ವಿಶ್ವಾಮಿತ್ರನನ್ನು ಆಶ್ರಯಿಸುತ್ತಾನೆ. ಜಮದಗ್ನಿಯೆಂಬ ಋಷಿಯೊಡನೆ ಸಮಾಲೋಚನೆ ಮಾಡಿ ಅಶ್ವಿನೀದೇವತೆಗಳನ್ನು ಯೋಗದಿಂದ ಪ್ರತ್ಯಕ್ಷ ಮಾಡಿಕೊಂಡು ಅವರಿಂದ ಹೊಸ ಯಜ್ಞದ ವಿಧಾನವನ್ನು ವಿಶ್ವಾಮಿತ್ರನು ತಿಳಿದುಕೊಂಡು ತ್ರಿಶಂಕುವಿನಿಂದ ಆ ಹೊಸ ಯಜ್ಞವನ್ನು ಮಾಡಿಸುತ್ತಾನೆ. ತ್ರಿಶಂಕುವನ್ನು ಸ್ವರ್ಗಕ್ಕೆ ಯಜ್ಞದ ಬಲದಿಂದ ಕಳುಹಿಸುತ್ತಾನೆ. ಆದರೆ ಇಂದ್ರನು ತ್ರಿಶಂಕು ಸ್ವರ್ಗಕ್ಕೆ ಬಾರದಂತೆ ತಡೆದು ಅವನನ್ನು ಕೆಳಗೆ ಬೀಳುವಂತೆ ದೂಡುತ್ತಾನೆ. ವಿಶ್ವಾಮಿತ್ರನು ಅವನು ಕೆಳಗೆ ಬೀಳದಂತೆ ತಡೆಯುತ್ತಾನೆ. ತ್ರಿಶಂಕುವಿಗಾಗಿ ಹೊಸಸೃಷ್ಟಿಯನ್ನೇ ಮಾಡಲು ಹೊರಟ ವಿಶ್ವಾಮಿತ್ರನನ್ನು ಬೃಹಸ್ಪತಿಯು ನಿವಾರಿಸುತ್ತಾನೆ.

ತ್ರಿಶಂಕು ಪ್ರಕರಣವಾದ ಮೇಲೆ ಮೇನಕಾಪ್ರಕರಣ. ಇಂಧನ ದೂತಿಯಾಗಿ ಬಂದ ಮೇನಕೆ ಅವನನ್ನು ಆಕರ್ಷಿಸಿದ್ದಾಳೆ. ಈ ಸನ್ನಿವೇಶವನ್ನು ದೇವುಡು ಅವರು ವರ್ಣಿಸಿರುವ ರೀತಿಯನ್ನು ನೋಡಿರಿ –

"ವಿಶ್ವಾಮಿತ್ರನಿಗೆ ಮನಃ ಕ್ಷೋಭವಾಗಿದೆ. ಆ ಬೆಳದಿಂಗಳಲ್ಲಿ ಅರ್ಧಾರ್ಧವಾಗಿ ಕಾಣುತ್ತಿದ್ದರೂ, ಲೋಭದಿಂದ ಶತ್ರುವಿಗೆ ವಶವಾಗಿ ತನ್ನ ಅರಸನನ್ನು ಶತ್ರುವಶ ಮಾಡಲು ಸಿದ್ಧನಾಗಿರುವ ದಳಪತಿಯಂತೆ ಕಣ್ಣು ಸೋತ ಮನಸ್ಸನ್ನು ಪರವಶಗೊಳಿಸಲು ಸಿದ್ಧವಾಗಿದೆ. ಸುರಮ್ಯ ಸಂಗೀತಕ್ಕಿಂತ ಹಿತವಾಗಿರುವ ಆ ದನಿಯನ್ನು ಕೇಳಿ ಕಿವಿಯು ಮನಸ್ಸನ್ನು 'ಒಪ್ಪಿಕೋ' ಎನ್ನುವಂತಿದೆ. ಆಕೆಯ ಕಡೆಯಿಂದ ಎರಚಿದಂತೆ ತರಂಗ ತರಂಗವಾಗಿ ಬರುತ್ತಿರುವ ಆ ಅಲೌಕಿಕ ಸುಗಂಧವನ್ನು ಆಘ್ರಾಣಿಸಿದ ನಾಸಿಕವು 'ನೀನು ಒಲಿಯದಿದ್ದರೆ, ನಾನಿಲ್ಲಿಂದ ಎದ್ದು ಹೊರಟು ಹೋಗುವೆನು 'ಎಂದು ಮನಸ್ಸಿನೊಡನೆ ಹಠ ಮಾಡುವಂತಿದೆ. ದೇಹವು ಆ ದೇಹದ ಅಮೃತ ಸ್ಪರ್ಶವನ್ನು ನೆನೆದು ನೆನೆದು 'ಮಾತು ಸಾಕು. ಒಣಮಾತಿನ ಜಂಭ ಬಿಟ್ಟು ಉಪಚಾರಕ್ಕೆ ಮುಂದೆ ನುಗ್ಗು' ಎಂದು ಮನಸ್ಸಿಗೆ ಆಜ್ಞೆಯೀಯುವಂತಿದೆ. ಸ್ವರ್ಗ ಸೌಂದರ್ಯದ ಸೀಮಾ ಭೂಮಿಯಾದವಳು. ತಾನಾಗಿ ಒಲಿದು ಬಂದಿರುವಾಗ ಬೇಡವೆನ್ನುವ ದಿಟ್ಟತನಕ್ಕಿಂತ ಅವಿವೇಕವುಂಟೆ? ಎಂದು ಮನಸ್ಸೇ ಮೊಕ ಮುರಿಯುವಂತಿದೆ." (ಪುಟ. 134–135).

ಹೀಗೆ ಮೇನಕೆಯ ರೂಪಕ್ಕೆ ವಶನಾದ ವಿಶ್ವಾಮಿತ್ರನ ಶೃಂಗಾರದ ಬಣ್ಣನೆಯನ್ನು ದೇವುಡು ದೀರ್ಘವಾಗಿ ಮಾಡಿದ್ದಾರೆ. ಅದರ ಫಲವಾಗಿ ಒಂದು ಹೆಣ್ಣು ಮಗು ಹುಟ್ಟಿದೆ. ಅದನ್ನು ವಿಶ್ವಾಮಿತ್ರನಿಗೆ ಒಪ್ಪಿಸಿ ಮೇನಕೆ ಸ್ವರ್ಗಲೋಕಕ್ಕೆ ತೆರಳುತ್ತಾಳೆ. ಅವನು ಆ ಶಿಶುವನ್ನು ಕಣ್ವರಿಗೆ ಒಪ್ಪಿಸಿ ತಪಸ್ಸನ್ನು ಮಾಡಲು ಹಿಮಾಲಯಕ್ಕೆ ತೆರಳಿದನು. ಅವನು ಸಿಂಧೂನದಿಯ ದಡದಲ್ಲಿ ಆಶ್ರಮವನ್ನು ನಿರ್ಮಿಸಿದನಂತೆ. ಅದರ ವರ್ಣನೆ ಕಾದಂಬರಿಯಲ್ಲಿ ಸೊಗಸಾಗಿ ಬಂದಿದೆ.

"ವಿಶ್ವಾಮಿತ್ರರು ಅವರೆಲ್ಲರನ್ನೂ ಬೀಳ್ಕೊಂಟ್ಟು ಸಿಂಧೂನದಿಯ ತೀರದಲ್ಲಿ ಬಂದು ನಿಂತರು. ಸುತ್ತಲೂ ಬೆಟ್ಟಗಳು, ವಾಯುವ್ಯದಿಂದ ನದಿಯು ನುಗ್ಗಿ ಬಂದು ಅರ್ಧ ಚಂದ್ರವಾಗಿ ಹರಿದು ದಕ್ಷಿಣಕ್ಕೆ ನುಗ್ಗಿ ಹೊರಟು ಹೋಗುವುದು. ಆ ನದಿಯ ಇಕ್ಕೆಲಗಳಲ್ಲೂ ಬೆಟ್ಟದಂತಹ ಮರಗಳು. ಗಿರಿಕನ್ಯೆಯು ಯಾರೋ ತನಗೆ ಬೇಕಾದವರಿಗೋಸ್ಕರ ಉತ್ತಮೋತ್ತಮವಾದ ಹಸಿರುಡೆಯನ್ನು ತಂದು ಗಾಳಿಗೆ ಹರಡಿರುವಳೆಂಬಂತೆ ಕಾಡಿನ ಹಸಿರು ಹೊದ್ದಿರಲು ಆ ಪ್ರಸ್ಥಭೂಮಿಯು ಸೊಗಸಾಗಿದೆ. ಅಲ್ಲಿ ವಿಶ್ವಾಮಿತ್ರರ ಆಶ್ರಮ." (ಪು. 202)

ಈ ಆಶ್ರಮಕ್ಕೆ ಇಂದ್ರನ ಆಣತಿಯಂತೆ ರಂಭೆ, ಘೃತಾಚಿ ಎಂಬ ಅಪ್ಸರೆಯರು ಬರುತ್ತಾರೆ. ರಂಭೆ ಬೈರವನ ಅಪ್ಪಣೆಯಿಲ್ಲದೆ ಆಶ್ರಮದ ಒಳಗೆ ಪ್ರವೇಶಿಸಲು ಯತ್ನಿಸಿ ಕಲ್ಲಾಗಿ ಹೋಗುತ್ತಾಳೆ. ಘೃತಾಚಿಗೆ ಪ್ರವೇಶ ಸಿಕ್ಕುತ್ತದೆ. ಅವಳನ್ನು ವಿಶ್ವಾಮಿತ್ರರು ಮದುವೆಯಾಗಿ ಒಂದೇ ಗರ್ಭದಲ್ಲಿ ನೂರು ಮಕ್ಕಳನ್ನು ಪಡೆಯುತ್ತಾರೆ. ಆಮೇಲೆ ಅವರ ಆಶ್ರಮಕ್ಕೆ ಹರಿಶ್ಚಂದ್ರ ಮಹಾರಾಜನು ಬರುತ್ತಾನೆ. ಅವನಿಗೆ ಒಳ್ಳೆಯ ಆತಿಥ್ಯವನ್ನು ಆಶ್ರಮವು ನೀಡುತ್ತದೆ. ರಾಜನು ಆಶ್ರಮವಾಸಿಗಳಿಗೆ ಅಪಾರ ದಾನಗಳನ್ನು ಕೊಡುತ್ತಾನೆ. ಅವನು ನರಮೇಧ ಎಂಬ ಯಜ್ಞವನ್ನು ಮಾಡಬೇಕೆಂದಿರುತ್ತಾನೆ. ಅದರಲ್ಲಿ ಹೊತೃವಾಗಿ ಭಾಗವಹಿಸಲು ವಿಶ್ವಾಮಿತ್ರ ಮಹರ್ಷಿಗಳು ಒಪ್ಪಿಕೊಳ್ಳುತ್ತಾರೆ. ಆ ನರಮೇಧದಲ್ಲಿ ಪಶು ಅಜೀಗರ್ತನೆಂಬ ಬಡಬ್ರಾಹ್ಮಣನ ಮಗ ಶುನಃಶೇಷ. ಯಾಗದಲ್ಲಿ ಪಶು ಆಗಿ ವರುಣನ ಪಾಲಾಗಬೇಕಾಗಿದ್ದ ಶುನಃಶೇಷನ ಪ್ರಾಣವನ್ನು ವಿಶ್ವಾಮಿತ್ರರು ಉಳಿಸುತ್ತಾರೆ. ಅವನನ್ನು ತಮ್ಮ ಮಗನಾಗಿ ಸ್ವೀಕರಿಸಿ ದೇವರಾತ ಎಂಬ ಹೆಸರನ್ನು ಅವನಿಗೆ ಮಗ ರೋಹಿತಾಶ್ವನಿಗೂ ಅಜೀಗರ್ತನು ಮಾರಿಬಿಟ್ಟದ್ದ ಶುನಃಶೇಷನಿಗೂ ಶ್ರೇಯಸ್ಸು ಉಂಟಾಗುತ್ತದೆ.

ಇದು ವೇದಕಾಲದ ಸಂಸ್ಕೃತಿಯ ಚಿತ್ರಣ. ಇದರ ಕೆಲವು ಭಾಗಗಳು ಆ ಪ್ರಾಚೀನ ಸಂಸ್ಕೃತಿಯ ಪರಿಚಯವಿಲ್ಲದವರಿಗೆ ಅರ್ಥವಾಗದೆ ಹೋಗಬಹುದು. ನಮಗೆ ಪರ್ವತವನ್ನು ಏರಲು ಸಾಧ್ಯವಿಲ್ಲವೆಂದ ಮಾತ್ರಕ್ಕೆ ಪರ್ವತದ ಅಸ್ತಿತ್ವವೇ ತಪ್ಪೆಂದು ಹೇಳಬಹುದೆ? ಪುಸ್ತಕದ ಮೊದಲನೆಯ ಮುದ್ರಣವಾದಾಗಲೇ ದೇವುಡು ಹೇಳಿದ್ದರು. "ಬ್ರಾಹ್ಮಣ ದ್ವೇಷ, ವೈದಿಕ ಸಂಸ್ಕೃತಿ ತಿರಸ್ಕಾರ ತುಂಬಿರುವ ಈ ಕಾಲದಲ್ಲೇ ಈ ಜಾತಿಯ ಕಥೆ? ಎಂದು ಕೆಲವರು ಮಿತ್ರರು ಶಂಕಿಸಿದ್ದಾರೆ. ಹೌದು. ಕತ್ತಲು ಇರುವಾಗಲೇ ಬೆಳಕು ಬೇಕಾಗಿರುವುದು. ಜಗತ್ತು ಯಾವಾಗಲೂ ಹೀಗೆಯೇ ಇತ್ತು. ಅದೂ ಇತ್ತು. ಇದೂ ಇತ್ತು. ಮಿತ್ರರು ಇದ್ದ ಮೇಲೆ ಶತ್ರುಗಳೂ ಇರಲೇಬೇಕು! ಇದನ್ನು ಯಾರು ಕಾಣರು? ಅಲ್ಲದೆ ಸಾಹಿತ್ಯ ಸೃಷ್ಟಿಯಾಗುವುದು ಸುನಿತ್ಸರಿಗಾಗಿ. ಬಾಳೆಯ ಹಣ್ಣು, ಹಲಸಿನ ಹಣ್ಣು ಹುಟ್ಟಿರುವುದು ಹೊಟ್ಟೆಯ ನೋವಿನಿಂದ ನರಳುತ್ತಿರುವವರಿಗಲ್ಲ, ಹಸಿವನ್ನು ತಡೆಯಲಾರದವರಿಗಾಗಿ" (ಪು. 5)

ಸಾವಿರಾರು ವರ್ಷಗಳ ಹಿಂದೆ, ರಾಮಾಯಣ–ಮಹಾಭಾರತಗಳ ಕಾಲಕ್ಕೂ ಹಿಂದೆ ಇದ್ದ ಆಚಾರ–ವಿಚಾರ–ಸಂಚಾರಗಳ ಬಗೆಗೆ ಕಲ್ಪನೆ–ಊಹೆಗಳನ್ನು ಮಾಡಿಕೊಳ್ಳುವುದೇ ಕಷ್ಟ. ಅವರು ಬಳಸುತ್ತಿದ್ದ ಶಬ್ದಗಳನ್ನು –ಉಪಬೃಂಹಣ, ವೈಶ್ವಾನರವಿದ್ಯೆ, ಛಾಯಾ ಪುರುಷ, ಕಾಮ್ಯ ಕರ್ಮ–ಮುಂತಾದುವನ್ನು ಉಪಯೋಗಿಸುವುದೇ ಸಾಮಾನ್ಯ ಲೇಖಕರಿಗೆ ಅಶಕ್ಯ. ಜ್ಞಾನಕಾಂಡ–ಕರ್ಮ ಕಾಂಡಗಳ ನಿಷ್ಕೃಷ್ಟ ಅರಿವು ಇದ್ದವರೇ ಹೀಗೆ ಬರೆಯಲು ಸಾಧ್ಯ.

ದೇವುಡು ಅವರ ಮೂರು ಮಹಾಕೃತಿಗಳ (ಮಹಾಬ್ರಾಹ್ಮಣ, ಮಹಾಕ್ಷತ್ರಿಯ, ಮಹಾದರ್ಶನಗಳ) ಬಗೆಗೆ ಚಿಂತನ ಗೋಷ್ಠಿಗಳು ನಡೆಯಬೇಕು. ಶಾಸ್ತ್ರವಿದ್ವಾಂಸರು ಈ ಕಾದಂಬರಿಗಳ ಗುಣದೋಷಗಳ ವಿಮರ್ಶೆ ಮಾಡಿ ಜನರ ಜ್ಞಾನವನ್ನು ಬೆಳಸಬೇಕು. ಅಧ್ಯಾತ್ಮ ಜ್ಞಾನ ಪ್ರಸಾರದಲ್ಲಿ ಆಸಕ್ತರು ಈ ಬಸ್ಸಿಗೆ ಗಮನವನ್ನು ನೀಡಬೇಕು.



ದೇವುಡು ನರಸಿಂಹಶಾಸ್ತ್ರಿಗಳು

ಮಹಾಬ್ರಾಹ್ಮಣ ಉಪನ್ಯಾಸ–ವಾಚನ–ವ್ಯಾಖ್ಯಾನ–ನೃತ್ಯರೂಪಕ

ದೇವುಡು ಅವರ ಮಹಾಬ್ರಾಹ್ಮಣವನ್ನು ಕವಿ ಮೃತ್ಯುಂಜಯ ತೇಜಸ್ವಿ ಭಾಮಿನೀ ಷಟ್ಪದಿಯಲ್ಲಿ ಮಹಾಪ್ರಯಾಣ ಎಂಬ ಕಾವ್ಯವನ್ನಾಗಿ ಪರಿವರ್ತಿಸಿದ್ದಾರೆ. ಅದರ ವಾಚನ–ವ್ಯಾಖ್ಯಾನ–ಉಪನ್ಯಾಸಗಳನ್ನು ವಿದುಷಿ ಡಾ.ಜ್ಯೋತಿಶಂಕರ್ 5–7–26ರಿಂದ 11–7–26 ರವರೆಗೆ ಪ್ರತಿದಿನ ಸಂಜೆ 6 ಗಂಟೆಯಿಂದ 8 ಗಂಟೆಯವರೆಗೆ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ನಡೆಸಿಕೊಡಲಿದ್ದಾರೆ. 12–7–2026 ಭಾನುವಾರ ಸಂಜೆ 6 ಗಂಟೆಗೆ ಗಾನಭಾರತಿ ರಮಾಗೋವಿಂದ ಕಲಾವೇದಿಕೆಯಲ್ಲಿ ನಾಟ್ಯ ಗುರು ವಿದ್ವಾನ್ ಸಂದೇಶ್ ಭಾರ್ಗವ್ ಶಿಷ್ಯ ವೃಂದವು ಮಹಾಬ್ರಾಹ್ಮಣ ನೃತ್ಯರೂಪಕವನ್ನು ಪ್ರಸ್ತುತಪಡಿಸಲಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಪರಂಪರೆ ಹಮ್ಮಿಕೊಂಡಿದೆ. ಸರ್ವರಿಗೂ ಸ್ವಾಗತ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಎಂಎಲ್ಸಿ ವಿನಯ್ ಕಾರ್ತಿಕ್ ಮೈಸೂರಿಗೆ ಭೇಟಿ



ವಿಧಾನ ಪರಿಷತ್ ನೂತನ ಸದಸ್ಯ ವಿನಯ್ ಕಾರ್ತಿಕ್ ಮಂಗಳವಾರ ಚಾಮುಂಡಿ ಬೆಟ್ಟಕ್ಕೆ ತೆರಳಿ ದೇವಿಯ ದರ್ಶನ ಪಡೆದ ಬಳಿಕ ನಜರ್‌ಬಾದ್‌ನಲ್ಲಿರುವ ತಮ್ಮ ತಾತ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಸಾಹುಕಾರ್ ಚೆನ್ನಯ್ಯ ಅವರ ನಿವಾಸಕ್ಕೆ ತೆರಳಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಜಿ.ಶ್ರೀನಾಥ್ ಬಾಬು, ಅಬ್ಬು ಜಾಕೆರಿಯಾ, ಶಶಾಂಕ್, ಕೃಷ್ಣ, ಮಂಜೇಶ್, ಅಶೋಕ್, ವರದರಾಜ್, ಪ್ರಕಾಶ್, ಜಿ.ರಾಘವೇಂದ್ರ, ಹರೀಶ್ ನಾಯ್ಡು, ಎಸ್.ಎನ್.ರಾಜೇಶ್, ಕೆಜಿ ಕೊಪ್ಪಲ್ ಜಯಪ್ರಕಾಶ್(ಜೆಪಿ), ಕಿರಣ್, ಯೋಗೇಶ, ಮೋಹನ್ ಮತ್ತಿತರರಿದ್ದರು.

ಸಕಾಲಕ್ಕೆ ಜಾತಿ–ಆದಾಯ ಪ್ರಮಾಣ ಪತ್ರ ಕಲ್ಪಿಸಲು ಆಗ್ರಹಿಸಿ ಮನವಿ

ಮೈಸೂರು, ಜೂ.30– ಸಾರ್ವಜನಿಕರಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ತ್ವರಿತವಾಗಿ ಲಭಿಸುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ನಾಗವಾಲ ಗ್ರಾಮ ಪಂಚಾಯ್ತಿ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ಶಾಲಾ–ಕಾಲೇಜುಗಳಿಗೆ ದಾಖಲಾತಿ, ಉದ್ಯೋಗ, ಸರ್ಕಾರಿ ಸೌಲಭ್ಯ ಪಡೆಯುವುದು ಸೇರಿದಂತೆ ಹಲವು ಕಾರ್ಯಗಳಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಅಗತ್ಯ ದಾಖಲೆಯಾಗಿದೆ. ಆದರೆ ವಿವಿಧ ಕಾರಣಗಳಿಂದ ಸಕಾಲದಲ್ಲಿ ಪ್ರಮಾಣ ಪತ್ರ ಸಿಗದೆ, ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ ಎಂದು ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಯಿತು.

ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆಯಲು ಸಾಮಾನ್ಯ ಜನರು ಹರಸಾಹಸಪಡುವಂತಾಗಿದೆ. ದಿನ ಗೂಲಿ ಕಾರ್ಮಿಕರು, ವೃದ್ಧರು, ವಿದ್ಯಾರ್ಥಿಗಳು ನಾಡ ಕಚೇರಿಗಳಲ್ಲಿ ತಾಸುಗಟ್ಟಲೆ ಸರತಿಯಲ್ಲಿ ನಿಲ್ಲಬೇಕಿದೆ. ಅನಾರೋಗ್ಯದಿಂದ ಬಳಲುತ್ತಿರುವವರ ಪಾಡಂತೂ ಹೇಳತೀರದ್ದಾಗಿದೆ. ಸುಮಾರು 7 ದಾಖಲೆಗಳನ್ನು ಹಿಡಿದುಕೊಂಡು ಐದು ಓಟಿಪಿ ಬರುವವರೆಗೂ ಕಾದು ಅರ್ಜಿ ಸಲ್ಲಿಸಬೇಕಿದೆ. ಬಹುತೇಕ ಸಮಯದಲ್ಲಿ ತಾಂತ್ರಿಕ ಸಮಸ್ಯೆಯಿಂದ ಅರ್ಜಿ ಸಲ್ಲಿಕೆ ವಿಳಂಬವಾಗುತ್ತದೆ. ಸಕಾಲದಲ್ಲಿ ಪ್ರಮಾಣ ಪತ್ರ ಸಿಗದೆ ಅದೆಷ್ಟೋ ವಿದ್ಯಾರ್ಥಿಗಳು, ಉದ್ಯೋಗಾಕಾಂಕ್ಷಿಗಳು, ಸರ್ಕಾರಿ ಸೌಲಭ್ಯಕ್ಕೆ ಅರ್ಹರಾದವರಿಗೆ ಅನ್ಯಾಯವಾಗುತ್ತಿದೆ.

ಪ್ರತಿನಿತ್ಯ ನೂರಾರು ಜನ ಸರತಿಯಲ್ಲಿ ನಿಂತರೂ ಅವರಲ್ಲಿ 20ರಿಂದ 30 ಜನರ ಅರ್ಜಿ ಸಲ್ಲಿಕೆ ಮಾತ್ರ ಸಾಧ್ಯವಾಗುತ್ತಿದೆ ಈ ಗಂಭೀರ ಸಮಸ್ಯೆ ಬಗ್ಗೆ ಕಂದಾಯ ಇಲಾಖೆ ಗಮನ ಹರಿಸಬೇಕು. ಹೆಚ್ಚುವರಿ ಗಣಕ ಯಂತ್ರಗಳ ಜೊತೆಗೆ ಸಿಬ್ಬಂದಿಯನ್ನು ನಿಯೋಜಿಸಿ ತ್ವರಿತವಾಗಿ ಜಾತಿ ಮತ್ತು ಪ್ರಮಾಣ ಪತ್ರ ಸಿಗುವಂತೆ ಕ್ರಮ ವಹಿಸಬೇಕು. ಈ ಸಂಬಂಧ ತಾವು ಸೂಕ್ತನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದರು.

ಹುಯಿಲಾಳು ರಾಮಸ್ವಾಮಿ ಅವರೊಂದಿಗೆ ಮುಖಂಡ ಗೋಪಾಲ್‌ಗೌಡ ಸಾಹುಕಾರ್‌ಹುಂಡಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂಘಟನಾ ಸಂಚಾಲಕ ಬಿಡಿಎಂ ಕುಮಾರ್, ಹುಯಿಲಾಳು ಮಂಜುನಾಥ್ ಪ್ರಸಾದ್ ಇದ್ದರು.



ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರಿಗೆ ಹುಯಿಲಾಳು ರಾಮಸ್ವಾಮಿ, ಗೋಪಾಲ್‌ಗೌಡ ಸಾಹುಕಾರ್‌ಹುಂಡಿ, ಬಿಡಿಎಂ ಕುಮಾರ್, ಹುಯಿಲಾಳು ಮಂಜುನಾಥ್ ಪ್ರಸಾದ್ ಮನವಿ ಸಲ್ಲಿಸಿದರು.

ಭಾರತೀಯ ಭೂಸೇನೆಯ 31ನೇ ಮುಖ್ಯಸ್ಥರಾಗಿ ಜನರಲ್ ಧೀರಜ್ ಸೇಠ್ ಅಧಿಕಾರ ಸ್ವೀಕಾರ



ನವದೆಹಲಿ: ಗಡಿ ಸವಾಲುಗಳನ್ನು ಎದುರಿಸುತ್ತಾ, ಸ್ವಾವಲಂಬಿ ಮತ್ತು ಭವಿಷ್ಯದ ಚಾಲೆಂಜ್‌ಗಳಿಗೆ ಸನ್ನದ್ಧವಾಗುತ್ತಿರುವ 13 ಲಕ್ಷ ಸೈನಿಕರನ್ನು ಹೊಂದಿರುವ ಭಾರತೀಯ ಭೂಸೇನೆಯ ಹೊಸ ಮುಖ್ಯಸ್ಥರಾಗಿ ಜನರಲ್ ಧೀರಜ್ ಸೇಠ್ ಅವರು (ಮಂಗಳವಾರ) ಅಧಿಕಾರ ವಹಿಸಿಕೊಂಡರು.

ಪಶ್ಚಿಮ ಗಡಿಯಲ್ಲಿ ಸೇನೆಯ ಎರಡು ಕಾರ್ಯಾಚರಣಾ ಕಮಾಂಡ್‌ಗಳ ನೇತೃತ್ವ ವಹಿಸಿದ ಅಪರೂಪದ ಹೆಗ್ಗಳಿಕೆ ಇವರದ್ದಾಗಿದೆ. ಅತ್ಯಂತ ದಕ್ಷ ಮಿಲಿಟರಿ ಅಧಿಕಾರಿಯಾಗಿರುವ ಜನರಲ್ ಧೀರಜ್ ಸೇಠ್ ಅವರು, ಸಶಸ್ತ್ರ ಪಡೆಗಳಲ್ಲಿ 40 ವರ್ಷಗಳಿಗೂ ಹೆಚ್ಚು ಕಾಲ ಸುದೀರ್ಘ ಸೇವೆ ಸಲ್ಲಿಸಿ ಮಂಗಳವಾರ ನಿವೃತ್ತರಾದ ಜನರಲ್ ಉಪೇಂದ್ರ ದ್ವಿವೇದಿ ಅವರ ಉತ್ತರಾಧಿಕಾರಿಯಾಗಿ ಬಂದಿದ್ದಾರೆ.

ಜನರಲ್ ಧೀರಜ್ ಸೇಠ್ ಅವರು ಖಡಕ್ವಾಸ್ಲಾದ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ (ಎನ್‌ಡಿಎ)ಯ ಹಳೆಯ ವಿದ್ಯಾರ್ಥಿ. ಇವರು ಡಿಸೆಂಬರ್ 1986 ರಲ್ಲಿ ಆರ್ಮರ್ಡ್ ಕಾರ್ಪ್ಸ್‌ಗೆ ಸೇರಿದರು. ಭಾರತೀಯ ಭೂಸೇನೆಯ 31ನೇ ಮುಖ್ಯಸ್ಥರಾಗುವ ಮುನ್ನ ಇವರು ಉಪ ಭೂಸೇನಾ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದರು.

ಜಾಗತಿಕ ಭೌಗೋಳಿಕ ಕಾರ್ಯತಂತ್ರವು ನಿರಂತರವಾಗಿ ಬದಲಾಗುತ್ತಿರುವ, ತಾಂತ್ರಿಕ ಪ್ರಗತಿ ಹಾಗೂ ಆಧುನಿಕ ಯುದ್ಧದ ಸ್ವರೂಪದಿಂದಾಗಿ ಭದ್ರತಾ ವಲಯದಲ್ಲಿ ಸವಾಲುಗಳು ಹೆಚ್ಚುತ್ತಿರುವ ಸಮಯದಲ್ಲಿ ಜನರಲ್ ಸೇಠ್ ಅವರು ಭಾರತೀಯ ಭೂಸೇನೆಯ ಅಧಿಕಾರ ಸ್ವೀಕರಿಸಿದ್ದಾರೆ.

ಇಂದು ವೈದ್ಯರಿಗೆ ಪ್ರಶಸ್ತಿ ಪ್ರದಾನ



ದಾಕ್ಷಾಯಣಿ, ಡಾ. ಬಾಪಟ್, ಡಾ.ವೀಣಾ, ಡಾ.ಹರಿದಾಸ್, ಡಾ.ಸದಾನಂದ, ರಾಜ್‌ಕುಮಾರ್, ಡಾ.ನಿಶ್ಚಲ್, ಡಾ.ಆದರ್ಶ್, ಡಾ.ಸುಹಾಸ್

ಮೈಸೂರು, ಜೂ.30– ಮೈಸೂರಿನ ಸ್ಫಟಿಕ ಹೆಲ್ತ್ ಅಂಡ್ ಎಜುಕೇಶನ್ ಟ್ರಸ್ಟ್ ಹಾಗೂ ಎಸ್‌ಬಿಎಂ ಸ್ನೇಹಬಳಗದ ಸಹಯೋಗದಲ್ಲಿ ವೈದ್ಯರ ದಿನಾಚರಣೆ ಅಂಗವಾಗಿ ಗಣನೀಯ ಸೇವೆ ಸಲ್ಲಿಸುತ್ತಿರುವ ಒಂಬತ್ತು ವೈದ್ಯರಿಗೆ ಚೌಡಯ್ಯ ಸಿದ್ದಪ್ಪ ಸ್ಮರಣಾರ್ಥ ಪ್ರಶಸ್ತಿ ನೀಡಿ, ಗೌರವಿಸಲಾಗುತ್ತಿದೆ.

ಗೋಕುಲಂ ಒಂದನೇ ಹಂತದ ಸಾಂಸ್ಕೃತಿಕ ಭವನದಲ್ಲಿ ಬುಧವಾರ (ಜು.1) ಸಂಜೆ 5 ಗಂಟೆಗೆ ಆಯೋಜಿಸಿರುವ ಸಮಾರಂಭದಲ್ಲಿ ಡಾ.ಕೆ.ಆರ್.ದಾಕ್ಷಾಯಣಿ, ಡಾ.ವಾಮನ್‌ರಾವ್ ಬಾಪಟ್, ಡಾ.ಟಿ.ಎ.ವೀಣಾ, ಡಾ.ಹರಿದಾಸ್ ಉಪಾಧ್ಯ, ಡಾ.ಕೆ.ಎಸ್.ಸದಾನಂದ, ಡಾ.ರಾಜ್‌ಕುಮಾರ್ ಪ್ರಾಣ್ನಾತ್ ವಾಧ್ವ, ಡಾ.ಎಲ್.ನಿಶ್ಚಲ್ ರಾಜ್, ಡಾ.ಜಿ.ಆದರ್ಶ್, ಡಾ.ಸಿ.ಸುಹಾಸ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು ಎಂದು ಟ್ರಸ್ಟ್‌ನ ಅಧ್ಯಕ್ಷ ಎಸ್‌ಬಿಎಂ ಮಂಜು ತಿಳಿಸಿದ್ದಾರೆ.

ಶಾಶ್ವತ ನಿವಾಸ ಪ್ರಮಾಣ ಪತ್ರ ವಿತರಣೆಗೆ ರಾಜ್ಯ ಸರ್ಕಾರದಿಂದ ಮಾರ್ಗಸೂಚಿ ಪ್ರಕಟ!

ಬೆಂಗಳೂರು: ಕರ್ನಾಟಕ ಸರ್ಕಾರ ರಾಜ್ಯದಾದ್ಯಂತ ಶಾಶ್ವತ ನಿವಾಸ ಪ್ರಮಾಣಪತ್ರಗಳ ಸುಗಮ ಹಾಗೂ ಕಾಲಮಿತಿಯ ವಿತರಣೆಗೆ ಹೊಸ ಕಾರ್ಯಾಚರಣಾ ಚೌಕಟ್ಟನ್ನು ಜಾರಿಗೆ ತಂದಿದೆ. ಈ ಆದೇಶವನ್ನು ಜೂ.29 ರ ಕಂದಾಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಅವರ ಡಿಜಿಟಲ್ ಸಹಿಯೊಂದಿಗೆ ಪ್ರಕಟಿಸಲಾಗಿದೆ.

ಸರ್ಕಾರದ ಆದೇಶದನ್ವಯ ಅರ್ಹ ವ್ಯಕ್ತಿಗಳಿಗೆ ಶಾಶ್ವತ ನಿವಾಸ ಪ್ರಮಾಣಪತ್ರಗಳನ್ನು ನೀಡುವ ಸಮಗ್ರ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಇತರೆ ಸರ್ಕಾರಿ ಪ್ರಮಾಣಪತ್ರಗಳು ಹಾಗೂ ನಾಗರಿಕ ಸೇವೆಗಳನ್ನೂ ಪ್ರಚಲಿತ ಆದೇಶಗಳು ಮತ್ತು ಸುತ್ತೋಲೆಗಳನ್ವಯ ಒದಗಿಸಲಾಗುತ್ತಿದೆ.

ಶಾಶ್ವತ ನಿವಾಸ ಪ್ರಮಾಣಪತ್ರವು ಪ್ರವೇಶ, ನೇಮಕಾತಿ, ವಿದ್ಯಾರ್ಥಿವೇತನ, ಕಲ್ಯಾಣ ಯೋಜನೆಗಳು ಹಾಗೂ ಸರ್ಕಾರದ ನೀತಿಗಳ ಅಡಿಯಲ್ಲಿ ಮಹತ್ವದ ದಾಖಲೆ ಆಗಿರುವುದರಿಂದ, ಈ ಸೇವೆಯನ್ನು ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011ರ ಅಡಿಯಲ್ಲಿ ಅಧಿಸೂಚಿಸಲು ಸರ್ಕಾರ ನಿರ್ಧರಿಸಿದೆ.

ಪ್ರತಿ ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಂಪ್ಯೂಟರ್, ಇಂಟರ್ನೆಟ್, ಮುದ್ರಣ, ಸ್ಕ್ಯಾನಿಂಗ್ ಸೌಲಭ್ಯಗಳೊಂದಿಗೆ ಸಹಾಯ ಮತ್ತು ಸೌಲಭ್ಯ ಕೌಂಟರ್‌ಗಳನ್ನು ಸ್ಥಾಪಿಸಲಾಗುತ್ತದೆ. ಅರ್ಜಿದಾರರು ಸೇವಾ ಸಿಂಧು, ಅಟಲ್ ಜನಸ್ನೇಹಿ ಕೇಂದ್ರ ಪೋರ್ಟಲ್ ಅಥವಾ ಸರ್ಕಾರ ಸೂಚಿಸುವ ಇತರೆ ಪೋರ್ಟಲ್‌ಗಳ ಮೂಲಕ ಅರ್ಜಿ ಸಲ್ಲಿಸಬಹುದು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಗ್ರಾಮೀಣ ಪ್ರದೇಶಗಳಲ್ಲಿ, ಮಹಾನಗರ ಪಾಲಿಕೆ ಆಯುಕ್ತರು ಹಾಗೂ ನಗರಸಭೆಗಳ ಮುಖ್ಯಾಧಿಕಾರಿಗಳು ನಗರ ಪ್ರದೇಶಗಳಲ್ಲಿ ಕೌಂಟರ್‌ಗಳನ್ನು ಸ್ಥಾಪಿಸಬೇಕು. ಆದೇಶ ಹೊರಡಿಸಿದ ಏಳು ದಿನಗಳೊಳಗೆ ಕಾರ್ಯಾರಂಭ ಮಾಡಬೇಕೆಂದು ಸೂಚಿಸಲಾಗಿದೆ.

ಸರ್ಕಾರಿ ದತ್ತಾಂಶಗಳನ್ನು ಪರಿಶೀಲನೆಗೆ ಬಳಸುವ ಮೂಲಕ ದಾಖಲೆ ಸಲ್ಲಿಸುವ ಅಗತ್ಯವನ್ನು ಕಡಿಮೆ ಮಾಡುವ ವ್ಯವಸ್ಥೆ ಜಾರಿಗೆ ಬರಲಿದೆ. ಕುಟುಂಬ, ಶಿಕ್ಷಣ, ನಿವಾಸ, ಮತದಾರರ ಪಟ್ಟಿಗಳು ಮುಂತಾದ ದತ್ತಾಂಶಗಳನ್ನು ಬಳಸಬಹುದಾದರೂ ಪ್ರಮಾಣಪತ್ರ ನೀಡುವ ಮೊದಲು ಅರ್ಹತೆಯನ್ನು ಸ್ವತಂತ್ರವಾಗಿ ದೃಢೀಕರಿಸಬೇಕಾಗಿದೆ. ಡಿಜಿಟಲ್ ವೇದಿಕೆಯನ್ನು NIC ಬೆಂಗಳೂರು ಹಾಗೂ DPAR (e-Govemance) ಇಲಾಖೆಯ ಸಹಕಾರದೊಂದಿಗೆ ಕಾರ್ಯಗತಗೊಳಿಸಲಾಗುತ್ತದೆ.

ಮೈಸೂರು ಮಿತ್ರ

ಮಂಡ್ಯದಲ್ಲಿ ಕೆಂಪೇಗೌಡರ ಪ್ರತಿಮೆ ಸ್ಥಾಪನೆ ನನ್ನ ಕನಸು

ನಾಡಪ್ರಭು ಕೆಂಪೇಗೌಡರ ತತ್ವಾದರ್ಶ ಮೈಗೂಡಿಸಿಕೊಳ್ಳಿ: ಶಾಸಕ ಪಿ.ರವಿಕುಮಾರ್ ಸಲಹೆ

ಮಂಡ್ಯ, ಜೂ.30– ಪ್ರಸ್ತುತ ಜಾಗತಿಕ ತಂತ್ರಜ್ಞಾನ ನಗರವಾಗಿರುವ ಬೆಂಗಳೂರು ನಗರವನ್ನು ನಿರ್ಮಾಣ ಮಾಡಿದವರು ನಾಡಪ್ರಭು ಕೆಂಪೇಗೌಡರು. ಅವರ ಆಡಳಿತಾವಧಿಯಲ್ಲಿ ಉತ್ತಮ ನಗರ ನಿರ್ಮಾಣ ಮಾಡುವ ದೂರದೃಷ್ಟಿಯಿಂದ ಬೆಂಗಳೂರು ನಗರ ಕಟ್ಟಿದರು. ಅವರ ತತ್ವಾದರ್ಶ ಹಾಗೂ ಸಾಧನೆಗಳನ್ನು ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು ಎಂದು ಶಾಸಕ ಪಿ.ರವಿಕುಮಾರ್ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಲ್ಲಿ ಕೆಂಪೇಗೌಡರ ಪ್ರತಿಮೆ ಸ್ಥಾಪಿಸುವುದು ನನ್ನ ಬಹುದೊಡ್ಡ ಕನಸಾಗಿದೆ. ಜಿಲ್ಲೆಯಲ್ಲಿ ನಾಡಪ್ರಭು ಕೆಂಪೇಗೌಡರ ಪ್ರತಿಮೆ ನಿರ್ಮಾಣ ಮಾಡಲು 2 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು ಕೇವಲ 6 ತಿಂಗಳಲ್ಲಿ ಉದ್ಘಾಟಿಸುತ್ತೇವೆ ಎಂದು ತಿಳಿಸಿದರು.

ಮಂಡ್ಯ ಜಿಲ್ಲೆಯ ಕೆರೆ ಕಟ್ಟೆಗಳ ಅಭಿವೃದ್ಧಿಗೆ ವಿಶೇಷ ಅನುದಾನ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಮಂಡ್ಯವನ್ನು ಹೊಸ ನಗರವಾಗಿ ನಿರ್ಮಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತೇನೆ. ಈಗಾಗಲೇ ಜಿಲ್ಲೆಗೆ 10 ಸಾವಿರ ಕೋಟಿ ಅನುದಾನ ಬಿಡುಗಡೆ ಮಾಡಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿದೆ ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ನಾಡಪ್ರಭು ಕೆಂಪೇಗೌಡರ ಸಾಧನೆ ಕೊಡುಗೆಗಳು ಇಂದಿಗೂ ಜೀವಂತವಾಗಿವೆ ಅವರು ನಾಡಿಗೆ ನೀಡಿದ ಕೊಡುಗೆ ಅಪಾರವಾಗಿದೆ. ಬೆಂಗಳೂರಲ್ಲಿ ಉದ್ಯಾನವನ ನಿರ್ಮಿಸಿ ಹಸಿರಿನಿಂದ ಕೂಡಿದ ನಗರವನ್ನಾಗಿ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಹಾಗೂ ನೀರಿನ ಕೊರತೆ ನಿವಾರಿಸಲು ಅನೇಕ ಕೆರೆಗಳನ್ನು ನಿರ್ಮಿಸಿ ಕೃಷಿ ಮತ್ತು ಜನಜೀವನಕ್ಕೆ ಅನುಕೂಲ ಮಾಡಿಕೊಟ್ಟರು ಎಂದು ತಿಳಿಸಿದರು. ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ರಾಜ್ಯ ಕಂಡ ಅತ್ಯಂತ ಪ್ರಭಾವಿ ಹಾಗೂ ದೂರದೃಷ್ಟಿಯ ರಾಜಕಾರಣಿಗಳಲ್ಲಿ ಎಸ್.ಎಂ. ಕೃಷ್ಣ ಪ್ರಮುಖರು. ಅವರು ಕರ್ನಾಟಕದ ಮುಖ್ಯ ಮಂತ್ರಿಯಾಗಿ 'ಬ್ರಾಂಡ್ ಬೆಂಗಳೂರು' ಪರಿಕಲ್ಪನೆಗೆ ನಾಂದಿ ಹಾಡಿದರು. ಜೊತೆಗೆ ಭಾರತದ ವಿದೇಶಾಂಗ ಸಚಿವರಾಗಿ ಮತ್ತು ಮಹಾರಾಷ್ಟ್ರದ ರಾಜ್ಯಪಾಲರಾಗಿ ದೇಶ–ವಿದೇಶಗಳಲ್ಲಿ ಕರ್ನಾಟಕದ ಕೀರ್ತಿ ಹೆಚ್ಚಿಸಿದ ಧೀಮಂತ ನಾಯಕರು ಎಂದರು.

ಪ್ರಸ್ತುತ ಜಾಗತಿಕ ತಂತ್ರಜ್ಞಾನ ನಗರವಾಗಿರುವ ಬೆಂಗಳೂರಿನ ಸಂಸ್ಥಾಪಕರಾದ ನಾಡಪ್ರಭು ಕೆಂಪೇಗೌಡರು ಬೃಹತ್ ಬೆಂಗಳೂರು ನಿರ್ಮಾಣ ಮಾಡುವಲ್ಲಿ ದೂರದೃಷ್ಟಿ ಇಟ್ಟು ಕೊಂಡಿದ್ದರು. ಅವರು ಉತ್ತಮ ಆಡಳಿತಗಾರ ಹಾಗೂ ಜನಪರ ಚಿಂತಕರು ಮತ್ತು ಸಮರ್ಥ ನಾಯಕರಾಗಿದ್ದರು. ಮಹನೀಯರ ಆದರ್ಶ ಕಲ್ಪನೆಗಳನ್ನು ನಾವು ಸ್ಮರಿಸಿಕೊಳ್ಳಬೇಕು ಹಾಗೂ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಮುಡಾ ಅಧ್ಯಕ್ಷ ಬಿ.ಪಿ. ಪ್ರಕಾಶ್, ಎಸ್ಪಿ ಡಾ.ಶೋಭಾರಾಣಿ, ಎಡಿಸಿ ಬಿ.ಸಿ. ಶಿವಾನಂದಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ವಿ.ನಂದೀಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಕಾರ್ಯಕ್ರಮವನ್ನು ಶಾಸಕ ರವಿಕುಮಾರ್ ಸೇರಿದಂತೆ ಗಣ್ಯರು ಉದ್ಘಾಟಿಸಿದರು.

ನಾಡಪ್ರಭು ಕೆಂಪೇಗೌಡರು ವಿಜಯನಗರ ಸಾಮ್ರಾಜ್ಯದ ಅಡಿ ಯಲಹಂಕವನ್ನು ಆಳಿದ ಪ್ರಸಿದ್ಧ ನಾಯಕರು. ಇವರ ದೂರದೃಷ್ಟಿಯ ಆಡಳಿತದಿಂದಾಗಿ ಇಂದಿನ ಕರ್ನಾಟಕದ ರಾಜಧಾನಿ ಬೆಂಗಳೂರು ಜಾಗತಿಕ ಮಟ್ಟದಲ್ಲಿ ಬೆಳೆಯಲು ಸಾಧ್ಯವಾಯಿತು. ಬೆಂಗಳೂರು ನಗರದ ಸಂಸ್ಥಾಪಕರಾಗಿ ಸುಂದರವಾದ ಬೆಂಗಳೂರು ನಗರ ಕಟ್ಟಿದವರು. ವಿವಿಧ ಸಮುದಾಯದ ವ್ಯಾಪಾರಸ್ಥರಿಗೆ ಅನುಕೂಲವಾಗುವಂತೆ ವಿಶೇಷ ಪೇಟೆಗಳನ್ನು (ಅಕ್ಕಿಪೇಟೆ, ಬಳೆಪೇಟೆ, ಕುಂಬಾರಪೇಟೆ) ಸ್ಥಾಪಿಸಿ ಪ್ರಮುಖ ವಾಣಿಜ್ಯ ಕೇಂದ್ರವನ್ನಾಗಿ ಮಾಡಿದರು.

– ಶ್ರೀನಿರ್ಮಲಾನಂದನಾಥ ಸ್ವಾಮೀಜಿ, ಶ್ರೀಆದಿಚುಂಚನಗಿರಿ ಪೀಠಾಧ್ಯಕ್ಷ.

ನಮ್ಮ ಬಜಾರ್ ಆನ್‌ಲೈನ್ ಮಳಿಗೆಯ

ಉಗ್ರಾಣ ಸ್ಥಳಾಂತರಕ್ಕೆ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ವಸಂತಮ್ಮ ಮಾತನಾಡಿದರು.

ಮಂಡ್ಯ, ಜೂ.30– ನಗರಸಭೆ ವಾರ್ಡ್ ನಂ.8ರ ಮರೀಗೌಡ ಬಡಾವಣೆಯ 6ನೇ ಅಡ್ಡರಸ್ತೆ ನಿವಾಸಿಗಳಿಗೆ ತೊಂದರೆಯಾಗುತ್ತಿರುವ ನಮ್ಮ ಬಜಾರ್ ಆನ್‌ಲೈನ್ ಮಳಿಗೆ ಉಗ್ರಾಣ ಸ್ಥಳಾಂತರಕ್ಕೆ ಕ್ರಮ ವಹಿಸುವಂತೆ ನಿವಾಸಿ ವಸಂತಮ್ಮ ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರಸಭೆಯಿಂದ ನಮ್ಮ ಬಜಾರ್ ಆನ್‌ಲೈನ್ ಮಳಿಗೆಗೆ ಪರವಾನಗಿ ನೀಡಲಾಗಿದೆ. ಇದರಿಂದ ಬಡಾವಣೆಯ 500ಕ್ಕೂ ಹೆಚ್ಚು ಕುಟುಂಬಗಳ ನಿವಾಸಿಗಳಿಗೆ ತೊಂದರೆ ಉಂಟಾಗಿದೆ ಎಂದು ಆರೋಪಿಸಿದರು.

ಸರಕು ಸಂಗ್ರಹ ಸಾವಿರಕ್ಕೂ ಹೆಚ್ಚು ದ್ವಿಚಕ್ರ ವಾಹನಗಳು, ನೂರಕ್ಕೂ ಹೆಚ್ಚು ಆಟೋ, ಗೂಡ್ಸ್ ವಾಹನ, ಲಾರಿಗಳು ಕಿರಿದಾದ ಬಡಾವಣೆಯ ರಸ್ತೆಗೆ ಬರುವುದರಿಂದ ಕೇವಲ 3 ತಿಂಗಳಲ್ಲೇ 2 ಬಾರಿ ಅಪಘಾತ ಸಂಭವಿಸಿ ನಿವಾಸಿಗಳಿಗೆ ಸಣ್ಣಪುಟ್ಟ ಗಾಯಗಳಾಗಿದೆ.ಅಲ್ಲದೇ ಅಲ್ಲಿಗೆ ಬರುವ ವಾಹನ ಸವಾರರ ಅಜಾಗರೂಕತೆಯಿಂದ ಜೀವ ಕೈಯಲ್ಲಿ ಹಿಡಿದು ಓಡಾಡುವ ಪರಿಸ್ಥಿತಿ ಎದುರಾಗಿದೆ ಎಂದು ಅಳಲು ತೋಡಿಕೊಂಡರು.

ಹೆಚ್ಚಾದ ವಾಹನ ಸಂಚಾರದಿಂದಾಗಿ ವಾಯು ಮಾಲಿನ್ಯ ಶಬ್ದಮಾಲಿನ್ಯ ಉಂಟಾಗುತ್ತಿದೆ. ಧೂಳಿನಿಂದಾಗಿ ಮನೆಯಲ್ಲಿ ಆಹಾರ ಪದಾರ್ಥಗಳು ಹಾಳಾಗುತ್ತಿವೆ, ಇಲ್ಲಿನ ನಿವಾಸಿಗಳು ನರಕಯಾತನೆ ಅನುಭವಿಸುವಂತಾಗಿದೆ. ಈ ಸಂಬಂಧ ಪೊಲೀಸರಿಗೆ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರು ನೀಡಿದರೆ ಅದನ್ನು ಹಿಂಪಡೆಯುವಂತೆ ಕೆಲ ಜನಪ್ರತಿನಿಧಿಗಳ ಒತ್ತಡ ಹೇರಲಾಗುತ್ತಿದೆ ಎಂದು ದೂರಿದರು.

ಈ ಕೂಡಲೇ ನಗರಸಭೆ ಅಧಿಕಾರಿಗಳು ನಮ್ಮ ಬಜಾರ್ ಆನ್‌ಲೈನ್ ಮಳಿಗೆ ಉಗ್ರಾಣವನ್ನು ಸ್ಥಳಾಂತರ ಮಾಡಿ ನಿವಾಸಿಗಳಿಗೆ ನೆಮ್ಮದಿ ಜೀವನ ನಡೆಸಲು ಅನುಕೂಲ ಮಾಡಿಕೊಡಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬಡಾವಣೆ ನಿವಾಸಿಗಳಾದ ಕೆ.ಪಿ.ಶೋಭ, ಕೆ.ಎನ್.ಪ್ರವೀಣ್, ಗೂಳಿಗೌಡ, ಪುರುಷೋತ್ತಮ ಇದ್ದರು.

ನಾಟಕ ನಿರ್ದೇಶಕ ಕೆಂಪೇಗೌಡರಿಗೆ ಶ್ರದ್ಧಾಂಜಲಿ



ಎ.ಎಂ.ಕೆಂಪೇಗೌಡ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಭಾರತೀನಗರ, ಜೂ.30– ಇತ್ತೀಚೆಗೆ ನಿಧನರಾದ ರಂಗಭೂಮಿ ಸಾಮಾಜಿಕ ನಾಟಕ ನಿರ್ದೇಶಕ ಕಲಾ ಟ್ರಸ್ಟ್ ರಾಜ್ಯ ಘಟಕದ ಅಧ್ಯಕ್ಷ ಎ.ಎಂ.ಕೆಂಪೇಗೌಡರಿಗೆ ಪಟ್ಟಣದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಇಲ್ಲಿನ ಸಿ.ಎ.ಕೆರೆ ಹೋಬಳಿ ರಂಗಭೂಮಿ ಕಲಾವಿದರ ಸಂಘದ ಕಚೇರಿಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ತೊರೆಚಾಕನಹಳ್ಳಿ ಶಂಕರೇಗೌಡ, ಕೆಂಪೇಗೌಡರು ಕಳೆದ ಎರಡ್ಮೂರು ದಶಕಗಳಿಂದ ರಂಗಭೂಮಿ ಚಟುವಟಿಕೆಯಲ್ಲಿ ಸಕ್ರಿಯರಾಗಿ ಹಲವಾರು ಪೌರಾಣಿಕ, ಸಾಮಾಜಿಕ ನಾಟಕಗಳು ಪ್ರದರ್ಶನಗೊಳ್ಳುವಂತೆ ಮಾಡಿದ್ದಾರೆ ಎಂದರು.

ರಂಗಭೂಮಿ ಅಥವಾ ಇನ್ಯಾವುದೇ ನಾಟಕಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಯಾವುದೇ ಸಂಘಟನೆ ಇಲ್ಲದ ಸಂದರ್ಭ ರಂಗಭೂಮಿ ಕಲಾವಿದರ, ನಿರ್ದೇಶಕರ ಸಂಘವನ್ನು ಅಸ್ತಿತ್ವಕ್ಕೆ ತಂದು ನೂರಾರು ಕಲಾವಿದರ ಸಾಮಾಜಿಕ ಗುರುತಾಗುವಂತೆ ಮಾಡಿದ್ದಾರೆ ಎಂದರು.

ಈ ವೇಳೆ ಸಾಮಾಜಿಕ ನಾಟಕ ನಿರ್ದೇಶಕರ ಕಲಾ ಟ್ರಸ್ಟ್ ಕಾರ್ಯದರ್ಶಿ ಲಿಂಗರಾಜು, ರಾಮಕೃಷ್ಣ, ಶಿವಪ್ರಕಾಶ್, ಶೇಖರ್, ದೇವರಾಜು, ಬಸವರಾಜು, ಸಿದ್ದರಾಜು, ಶ್ರೀಧರ್, ಸೂರ್ಯಪ್ರಕಾಶ್, ಅಂದಾನಿ, ಬೀರೇಶ್, ಪುಟ್ಟರಾಜು, ಪ್ರತಾಪ್‌ಸಿಂಕ, ಈಶಪ್ರಸಾದ್, ಮಂಜು, ದೇಶಿಗೌಡ ಇದ್ದರು.

ಅರ್ಹರು ಮತದಾನದಿಂದ ವಂಚಿತರಾಗದಂತೆ ಕಾರ್ಯ ನಿರ್ವಹಿಸಿ

ಶಾಸಕ ರಮೇಶ್‌ಬಾಬು

ಶ್ರೀರಂಗಪಟ್ಟಣ, ಜೂ.30– ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್)ಯಲ್ಲಿ ತೊಡಗಿರುವ ಬೂತ್ ಮಟ್ಟದ ಅಧಿಕಾರಿಗಳು(ಬಿಎಲ್‌ಓ) ಹಾಗೂ ಸಿಬ್ಬಂದಿಯ ಕೈಯಲ್ಲಿ ಒಂದು ಕುಟುಂಬದ ಭವಿಷ್ಯ ಅಡಗಿದೆ. ಆದ್ದರಿಂದ ಯಾವುದೇ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ವಂಚಿತರಾಗದಂತೆ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು ಎಂದು ಶಾಸಕ ರಮೇಶ್‌ಬಾಬು ತಿಳಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ಸಂಬಂಧ ಬೂತ್ ಮಟ್ಟದ ಅಧಿಕಾರಿಗಳು, ಬಿಎಲ್‌ಓ–2ಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಜು.29ರವರೆಗೆ ನಡೆಯುವ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ಅಭಿಯಾನದ ಅವಧಿಯಲ್ಲಿ ಮನೆ ಮನೆಗೆ ಭೇಟಿ ನೀಡಿ ಪ್ರತಿಯೊಂದು ಕುಟುಂಬದ ಸದಸ್ಯರನ್ನು ಭೇಟಿ ಮಾಡಬೇಕು. ಅರ್ಹ ಮತದಾರರ ಹೆಸರನ್ನು ಅಗತ್ಯ ದಾಖಲೆಗಳೊಂದಿಗೆ ಮತದಾರರ ಪಟ್ಟಿಗೆ ಸೇರಿಸುವ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಸೂಚಿಸಿದರು.

ಪ್ರಜಾಪ್ರಭುತ್ವದ ಬಲವಾದ ಅಡಿಪಾಯವೇ ಮತದಾನ. ಮತದಾನದ ಹಕ್ಕು ಸುರಕ್ಷಿತವಾಗಿರಬೇಕಾದರೆ ಮತದಾರರ ಪಟ್ಟಿಯಲ್ಲಿ ಪ್ರತಿಯೊಬ್ಬರ ಮಾಹಿತಿಯೂ ನಿಖರವಾಗಿರಬೇಕು. ಹೀಗಾಗಿ ಸಂಬಂಧಿಸಿದ ಅರ್ಜಿ ನಮೂನೆಗಳನ್ನು ನೀಡಿ ಅಗತ್ಯ ಮಾಹಿತಿ ಪಡೆದು ಪರಿಷ್ಕರಣೆ ಕಾರ್ಯ ಪೂರ್ಣಗೊಳಿಸಬೇಕು ಎಂದರು.

ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇದೆಯೇ ಎಂದು ಪರಿಶೀಲಿಸಬೇಕು. ಹೊಸ ಮತದಾರರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹೆಸರು, ವಿಳಾಸ ಅಥವಾ ಇತರ ವಿವರಗಳಲ್ಲಿ ತಿದ್ದುಪಡಿ ಅಗತ್ಯವಿದ್ದರೆ ಕೂಡಲೇ ಅರ್ಜಿ ಸಲ್ಲಿಸಬೇಕು. ಮೃತಪಟ್ಟವರು ಅಥವಾ ಶಾಶ್ವತವಾಗಿ ಸ್ಥಳಾಂತರಗೊಂಡವರ ಹೆಸರನ್ನು ನಿಯಮಾನುಸಾರ ತೆಗೆದುಹಾಕಲು ಕುಟುಂಬ ಸದಸ್ಯರಿಂದ ಮಾಹಿತಿ ಹಾಗೂ ಸಹಿ ಪಡೆದುಕೊಳ್ಳಬೇಕು ಎಂದು ತಿಳಿಸಿದರು.



ಸಭೆಯಲ್ಲಿ ಶಾಸಕ ರಮೇಶ್‌ಬಾಬು ಮಾತನಾಡಿದರು.

ಯಾವುದೇ ಮಾಹಿತಿ ಅಥವಾ ನಿಯಮಗಳ ಕುರಿತು ಸಂದೇಹವಿದ್ದರೆ ಸಂಬಂಧಿಸಿದ ಮತದಾರರ ನೋಂದಣಿ ಅಧಿಕಾರಿ (ERO) ಅಥವಾ ಚುನಾವಣಾ ಇಲಾಖೆ ಅಧಿಕೃತ ವ್ಯವಸ್ಥೆ ಮೂಲಕ ಮಾಹಿತಿ ಪಡೆದು ಕಾರ್ಯ ನಿರ್ವಹಿಸುವಂತೆ ಸಲಹೆ ನೀಡಿದರು.

ಗ್ರಾಪಂಗಳಲ್ಲಿಯೂ ಈ ಕಾರ್ಯಕ್ಕಾಗಿ ಅಧಿಕಾರಿಗಳನ್ನು ನೇಮಿಸಲಾಗಿದ್ದು, ಮತದಾರರು ತಮ್ಮ ದಾಖಲೆಗಳನ್ನು ಸಲ್ಲಿಸಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸರಿಯಾಗಿ ದಾಖಲಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದರು.

ಸಭೆಯಲ್ಲಿ ತಹಸೀಲ್ದಾರ್ ಚೇತನ ಯಾದವ್, ತಾಪಂ ಇಓ ಚಂದ್ರು ಸಿಡಿಪಿಓ ಕಮಲೇಶ್ವರ್, ಮುಖ್ಯಾಧಿಕಾರಿ ರಾಜಣ್ಣ, ತಾಪಂ ನೋಡಲ್ ಅಧಿಕಾರಿ ತ್ರಿವೇಣಿ, ಮಮತಾ ಸೇರಿದಂತೆ ಇನ್ನಿತರರಿದ್ದರು.

ಒಂದನೇ ಪುಟದಿಂದ

ನಿಮ್ಮ ಮತದಾನದ ಹಕ್ಕು ಉಳಿಸಿಕೊಳ್ಳಿ...

ಹೊಸ ಮತದಾರರು ನಿವಾಸ ದೃಢೀಕರಣ ಪತ್ರ ನೀಡಬೇಕಿದೆ. ಕರ್ನಾಟಕ ಸರ್ಕಾರ ರಾಜ್ಯದ ಜನರಿಗೆ ಅಗತ್ಯ ಪ್ರಮಾಣಪತ್ರ ನೀಡಲು ಮುಂದಾಗಿದ್ದು, ಎಲ್ಲರೂ ತಮ್ಮ ಮತದಾನದ ಹಕ್ಕು ಉಳಿಸಿಕೊಳ್ಳಬೇಕು.

ಮತದಾನ ಹಕ್ಕು ಇಲ್ಲವಾದರೆ ಸರ್ಕಾರಿ ಸೌಲಭ್ಯ, ಯೋಜನೆಗಳ ಲಾಭ ಪಡೆಯಲು ಅವಕಾಶವಾಗಲಾರದು. ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿಗೆ ಆಪ್ ಬಳಕೆ ಮಾಹಿತಿ ಇಲ್ಲದಿದ್ದರೆ ಬಿಎಲ್‌ಓಗಳಿಂದ ಅರ್ಜಿ ಪಡೆದು ಆಫ್‌ಲೈನ್ ಮೂಲಕವೂ ಅರ್ಜಿ ತುಂಬಬಹುದು.

ಇತರೆ ರಾಜ್ಯಗಳಲ್ಲಿ ಸರ್ಕಾರಿ ಸೌಲಭ್ಯಗಳನ್ನು ಮತದಾರರಿಗೆ ಮಾತ್ರ ನೀಡಲಾಗುತ್ತಿದ್ದು, ಮತದಾನ ಹಕ್ಕು ಇಲ್ಲದವರಿಂದ ಸೌಲಭ್ಯ ಹಿಂಪಡೆಯಲಾಗುತ್ತಿದ್ದು, ಇದೇ ವ್ಯವಸ್ಥೆ ಕರ್ನಾಟಕದಲ್ಲೂ ಬರಬಹುದು ಎಂದರು. ರಾಜ್ಯದ ಮತದಾರರಿಗೆ ಮಾತ್ರ ನಮ್ಮ ಸರ್ಕಾರದ ಗ್ಯಾರಂಟಿ, ಬೇರೆ ರಾಜ್ಯದವರಿಂದ ಗ್ಯಾರಂಟಿ ಸೌಲಭ್ಯಗಳನ್ನು ಹಿಂಪಡೆಯುವ ಆಲೋಚನೆ ಇದೆ ಎಂದು ಸ್ಪಷ್ಟಪಡಿಸಿದರು.

ಮೈಸೂರು ಜಿಲ್ಲೆಯ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಸಂಬಂಧ ಒಟ್ಟು ಮತದಾರರ ಸಂಖ್ಯೆಗೆ ಅನುಗುಣವಾಗಿ 27,99,693 ಗಣಿಕೆ ನಮೂನೆ (ಎನ್ಯೂಮರೇಷನ್ ಫಾರಂ) ಮುದ್ರಿಸಿದ್ದು, ಈ ಪೈಕಿ 17,478 ನಮೂನೆ ವಿತರಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು ಮತದಾರರ ಮ್ಯಾಪಿಂಗ್ ಶೇ.96.64ರಷ್ಟು ಪೂರ್ಣಗೊಂಡಿದೆ ಎಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

ಜಿಲ್ಲೆಯಲ್ಲಿ ಎಸ್‌ಐಆರ್ ಪ್ರಕ್ರಿಯೆ ಆರಂಭ

ನಿಯೋಜಿಸಲಾಗಿದೆ. ಅದರಂತೆ ಬಿಎಲ್‌ಓಗಳು ಪ್ರತಿಯೊಂದು ಮನಗಳಿಗೆ ಭೇಟಿ ನೀಡಿ ಎನ್ಯೂಮರೇಷನ್ ಫಾರಂಗಳನ್ನು ವಿತರಣೆ ಮಾಡುತ್ತಿದ್ದಾರೆ. ಈಗಾಗಲೇ ಮತದಾರರ ಪಟ್ಟಿಯಲ್ಲಿ ದಾಖಲಾಗಿರುವ ಕುಟುಂಬಗಳ ಮಾಹಿತಿ ಮೇರೆಗೆ ಬಿಎಲ್‌ಓಗಳು ಪ್ರತಿ ಕುಟುಂಬಕ್ಕೆ ಎನ್ಯೂಮರೇಷನ್ ಫಾರಂಗಳನ್ನು ನೀಡುತ್ತಿದ್ದಾರೆ.

ಬಿಎಲ್‌ಓಗಳು ಈ ಅರ್ಜಿಯನ್ನು ವಿತರಣೆ ಮಾಡುವುದರ ಜೊತೆಗೆ ಹೇಗೆ ಭರ್ತಿ ಮಾಡಬೇಕು, ಏನೇನು ವಿಷಯ ಭರ್ತಿ ಮಾಡಬೇಕು ಎಂಬ ಮಾಹಿತಿಯನ್ನು ಕುಟುಂಬದವರಿಗೆ ತಿಳಿಸುತ್ತಿದ್ದಾರೆ. ಅಲ್ಲದೆ ಮುಂದಿನ ಬಾರಿ ಭೇಟಿ ನೀಡಿದ ಸಮಯದೊಳಗೆ ಎನ್ಯೂಮರೇಷನ್ ಫಾರಂಗಳನ್ನು ಭರ್ತಿ ಮಾಡಿ ತಮಗೆ ವಾಪಾಸು ನೀಡಬೇಕೆಂದು ತಾಕೀತು ಮಾಡುತ್ತಿದ್ದಾರೆ.

ಎನ್ಯೂಮರೇಷನ್ ಫಾರಂ ಎಂದರೇನು...

ಎನ್ಯೂಮರೇಷನ್ ಫಾರಂ ಅಂದರೆ ಭಾರತದ ಚುನಾವಣಾ ಆಯೋಗವು ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಮತ್ತು ನವೀಕರಿಸಲು ಬಳಸುವ ಮತದಾರರ ಗಣತಿಯ ನಮೂನೆಯಾಗಿದೆ.

ಮತದಾರರ ಪಟ್ಟಿಯನ್ನು ಸ್ವಚ್ಛಗೊಳಿಸಲು ಮತ್ತು ಅರ್ಹರಾದ ಪ್ರತಿಯೊಬ್ಬ ಮತದಾರರ ಹೆಸರು ಪಟ್ಟಿಯಲ್ಲಿ ಸೇರ್ಪಡೆಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಈ ಪ್ರಕ್ರಿಯೆ ನಡೆಸಲಾಗುತ್ತದೆ.

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಎನ್ಯೂಮರೇಷನ್ ಫಾರಂನಲ್ಲಿ ಮಾಹಿತಿ ನೀಡುವುದರಿಂದ ನಾಗರಿಕರ ಮತದಾನದ ಹಕ್ಕು ಸುರಕ್ಷಿತವಾಗಿರುತ್ತದೆ.

ಜು.8ಕ್ಕೆ ಸಂಪುಟ ವಿಸ್ತರಣೆ

13 ಮಂದಿಯನ್ನು ಸೇರ್ಪಡೆ ಮಾಡಿಕೊಂಡಿದ್ದರು. ಇನ್ನೂ 20 ಮಂದಿಗೆ ಮಂತ್ರಿಮಂಡಲ ಸೇರ್ಪಡೆಗೆ ಅವಕಾಶ ಇದ್ದು, ಪ್ರಸ್ತುತ 18 ಮಂದಿಗೆ ಅವಕಾಶ ನೀಡಿ ಇನ್ನೂ ಎರಡು ಸಚಿವ ಸ್ಥಾನಗಳನ್ನು ಖಾಲಿ ಉಳಿಸಿಕೊಳ್ಳಲಿದ್ದಾರೆ. ಯುವಜನರಿಗೆ ಹೆಚ್ಚು ಅವಕಾಶ ನೀಡುವ ಮೂಲಕ ತಮ್ಮ ಸಂಪುಟವನ್ನು ಸ್ಫೂರ್ತಿಯುತಗೊಳಿಸುವ ಆಲೋಚನೆ ಹೊಂದಿದ್ದಾರೆ.

ಅಧಿಕಾರ ವಹಿಸಿಕೊಳ್ಳುವ ವೇಳೆ ಹಿರಿಯರಿಗೆ ಹೆಚ್ಚು ಅವಕಾಶ ಮಾಡಿಕೊಟ್ಟಿದ್ದ ಮುಖ್ಯಮಂತ್ರಿ, ಇದೀಗ ರಾಹುಲ್ ಗಾಂಧಿ ಸೂತ್ರವನ್ನು ವಿಸ್ತರಣೆ ಸಂದರ್ಭದಲ್ಲಿ ಅಳವಡಿಸಲಿದ್ದಾರೆ. ಸಂಪುಟ ವಿಸ್ತರಣೆಗೆ ಅನುಮೋದನೆ ಪಡೆಯಲು ಮುಖ್ಯಮಂತ್ರಿ ದೆಹಲಿ ಪ್ರವಾಸ ಕೈಗೊಳ್ಳಲಿದ್ದಾರೆ ಎಂಬ ಮಾಹಿತಿ ದೊರೆಯುತ್ತಿದ್ದಂತೆ ಸಚಿವ ಆಕಾಂಕ್ಷಿಗಳ ದಂಡು ಮತ್ತೆ ಲಾಬಿ ಆರಂಭಿಸಿದೆ. ಕೆಲವು ಮಾಜಿ ಸಚಿವರು ಹಾಗೂ ಪಕ್ಷದ ಶಾಸಕರ ದಂಡೇ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಇಂದು ಭೇಟಿ ಮಾಡಿ, ತಮ್ಮನ್ನು ಮಂತ್ರಿ ಮಾಡಲು ಶಿಫಾರಸು ಮಾಡುವಂತೆ ಕೋರಿದ್ದಾರೆ. ಸಿದ್ದರಾಮಯ್ಯ ಸಹ ಉಪ ಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್ ಅವರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡು ಸಂಪುಟ ವಿಸ್ತರಣೆಗೆ ಸಂಬಂಧಿಸಿದಂತೆ ಚರ್ಚೆ ಮಾಡಿದರು ಎನ್ನಲಾಗಿದೆ. ಶಿವಕುಮಾರ್ ಹಿಂದೆಯೇ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಡಾ.ಪರಮೇಶ್ವರ್ ಹಾಗೂ ಸಿದ್ದರಾಮಯ್ಯ ದೆಹಲಿಗೆ ತೆರಳುವ ಸಾಧ್ಯತೆ ಇದೆ.

ಕರ್ನಾಟಕ ಮಾದಕ ದ್ರವ್ಯ ಮುಕ್ತ



ಅಂತರರಾಷ್ಟ್ರೀಯ ಮಾದಕ ದ್ರವ್ಯ ವ್ಯಸನ ಮತ್ತು ಕಳ್ಳಸಾಗಣೆ ವಿರೋಧಿ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಾದಕವಸ್ತು ಅಕ್ರಮ ಮಾರಾಟದ ಬಗ್ಗೆ ಮಾಹಿತಿ ಕೊಡುವವರಿಗೆ ಬಹುಮಾನ ನೀಡುವುದಾಗಿ ಪ್ರಕಟಿಸಿದರು. ಮಾಹಿತಿದಾರರ ಬಗ್ಗೆ ಪೊಲೀಸರು ಗೌಪ್ಯತೆ ಕಾಪಾಡುವ ಜೊತೆಗೆ ಅಗತ್ಯ ರಕ್ಷಣೆ ನೀಡಲಿದ್ದಾರೆ.

ಮಕ್ಕಳು ಮಾದಕದ್ರವ್ಯ ವ್ಯಸನಿಯಾಗಿದ್ದರೆ ಅದನ್ನು ಮುಚ್ಚಿಡದೆ, ಪೊಲೀಸರಿಗೆ ಪೋಷಕರು ಮಾಹಿತಿ ನೀಡಿದರೆ ಸರ್ಕಾರದ ಹೋರಾಟಕ್ಕೆ ಬಲ ಬರುತ್ತದೆ. ಮಾದಕದ್ರವ್ಯದಿಂದ ಇಡೀ ಕುಟುಂಬ ನಾಶವಾಗದಂತೆ ಪ್ರಾಥಮಿಕ ಹಂತದಲ್ಲೇ ಮಾಹಿತಿಯನ್ನು ಪೊಲೀಸರೊಂದಿಗೆ ಹಂಚಿಕೊಳ್ಳಿ, ಅದನ್ನು ಗೌಪ್ಯವಾಗಿಡಲಾಗುವುದು. ಅಲ್ಲದೆ, ಕಳ್ಳ ಮಾರಾಟಗಾರರನ್ನು ಬಂಧಿಸಲು ಸಹಕಾರಿಯಾಗಲಿದೆ.

ಶಾಲಾ–ಕಾಲೇಜುಗಳಲ್ಲಿ ಮಾದಕವ್ಯಸನಿಗಳ ಬಗ್ಗೆ ಸಹಪಾಠಿಗಳಿಗೆ ತಿಳಿದಿರುತ್ತದೆ, ಅಂತಹವರ ವಿವರಗಳನ್ನು ವಿದ್ಯಾರ್ಥಿಗಳು ಮತ್ತು ಪೋಷಕರು ಪೊಲೀಸರ ಗಮನಕ್ಕೆ ತರುವ ಕೆಲಸ ಮಾಡಬೇಕು.

ಮಾದಕ ದಂಧೆ ನಿರ್ಮೂಲನೆಗೆ ಸಹಕರಿಸಿ: ಸರ್ಕಾರದಿಂದ ಎಲ್ಲವೂ ಸಾಧ್ಯವಿಲ್ಲ. ಸಮಾಜ ಸಹಕರಿಸಿದರೆ ಮಾದಕ ದ್ರವ್ಯ ಕಳ್ಳದಂಧೆ ನಿರ್ಮೂಲನೆಗೆ ಸಹಕಾರಿಯಾಗಲಿದೆ. ಪೊಲೀಸ್ ಇಲಾಖೆ ಮೇಲೆ ವಿಶ್ವಾಸವಿಟ್ಟು ಮಾಹಿತಿ ನೀಡಿದರೆ, ಮಾದಕ ದ್ರವ್ಯ ಕಳ್ಳದಂಧೆ ನಿರ್ಮೂಲನೆ ಸಾಧ್ಯ.

ಮಾದಕದ್ರವ್ಯ ಕಳ್ಳ ದಂಧೆಕೋರರ ವಿರುದ್ಧ ಪೊಲೀಸರು ದಿನದ 24 ಗಂಟೆ ಕಾರ್ಯಪ್ರವೃತ್ತರಾಗಿದ್ದಾರೆ. ಆದರೂ ವಿದೇಶ ಮತ್ತು ಹೊರರಾಜ್ಯಗಳಿಂದ ಅಕ್ರಮವಾಗಿ ರಾಜ್ಯದೊಳಗೆ ಮಾದಕದ್ರವ್ಯ ಕಳ್ಳಸಾಗಣೆ ಆಗುತ್ತಿದ್ದು, ಇದರ ತಡೆಗೆ ನಮ್ಮ ಪೊಲೀಸರು ಶ್ರಮಿಸುತ್ತಿದ್ದಾರೆ ಎಂದರು.

2028ರ ವೇಳೆಗೆ ಮಾದಕ ವಸ್ತು ಮುಕ್ತ, ನಶೆ ಮುಕ್ತ ಕರ್ನಾಟಕ ರೂಪಿಸುವುದಾಗಿ ಪ್ರತಿಜ್ಞೆ ಮಾಡಿದ್ದು, ಸಾರ್ವಜನಿಕರು, ಯುವ ಜನತೆ ಮತ್ತು ವಿದ್ಯಾರ್ಥಿಗಳು ಸರ್ಕಾರದ ಜೊತೆ ಕೈಜೋಡಿಸಿದರೆ ಈ ಕಳ್ಳದಂಧೆಯನ್ನು ಇಲ್ಲವಾಗಿಸಬಹುದು.

'ನಶೆ ಬಿಡಿ ಖುಷಿ ಪಡಿ' ಎಂಬುದು ನಮ್ಮ ಚಿಂತನೆ, ನಮ್ಮ ಆದರ್ಶಗಳನ್ನು ನಾವೇ ರೂಪಿಸಿಕೊಳ್ಳಬೇಕು. ಇಂದು ಮಾಡಿರುವ ಸಂಕಲ್ಪ, ಪ್ರತಿಜ್ಞೆ ಜೀವನದ ಉದ್ದಕ್ಕೂ ರೂಢಿಸಿಕೊಳ್ಳಬೇಕು.

ಜನರಲ್ಲಿ ಜಾಗೃತಿಗೆ ಸಲಹೆ: ನಮ್ಮ ಸುತ್ತಲಿನ ಪರಿಸರದಲ್ಲೂ ಈ ಬಗ್ಗೆ ಜಾಗೃತಿ ಮೂಡಿಸಬೇಕು. ಅನೇಕರು ನಮ್ಮ ಮೇಲೆ ಒತ್ತಡ ಹೇರಬಹುದು, ಅದಕ್ಕೆ ವಿದ್ಯಾರ್ಥಿ, ಯುವಜನತೆ ಮಣಿಯಬಾರದು. ನಿಮ್ಮ ದೇಹ ಮನಸ್ಸನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಮಾನಸಿಕ ಸ್ಥಿಮಿತತೆ ಕಳೆದುಕೊಳ್ಳಬಾರದು.


ಡ್ರಗ್ಸ್ ಮುಕ್ತ ಕರ್ನಾಟಕ ಎನ್ನುವುದು ಕೇವಲ ಸರ್ಕಾರದ ಘೋಷಣೆಯಲ್ಲ. ಇದು ಪ್ರತಿಯೊಬ್ಬ ಕನ್ನಡಿಗರ ಸಂಕಲ್ಪ, ಆದರ್ಶ ಇಲ್ಲದೇ ಬದುಕುವುದು ಅಪಮಾನ. ನಾವೆಲ್ಲರೂ ಜೀವನದಲ್ಲಿ ಆದರ್ಶ ಅಳವಡಿಸಿಕೊಂಡು ಮುನ್ನಡೆಯಬೇಕು.

ಪಾನ್ ಮಸಲಾ, ಗುಟ್ಕಾದಲ್ಲಿ ಅಮಲು ಪದಾರ್ಥ ಬೆರೆಸುವುದು ಗೊತ್ತಾದರೂ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ.

ವಿಶ್ವ ಆರೋಗ್ಯ ಸಂಸ್ಥೆ ವರದಿ ಪ್ರಕಾರ ದೇಶದಲ್ಲಿ ತಂಬಾಕು ಸೇವನೆಯಿಂದ ಪ್ರತಿ ವರ್ಷ 13 ರಿಂದ 14 ಲಕ್ಷ ಜನ ಸಾಯುತ್ತಿದ್ದಾರೆ. ದೇಶದ ಸಂಸ್ಕೃತಿ, ಭಾಷೆ, ವೈವಿಧ್ಯತೆಯನ್ನು ಇಡೀ ಪ್ರಪಂಚ ಗಮನಿಸುತ್ತಿದೆ.

ಶಾಲಾ–ಕಾಲೇಜುಗಳಲ್ಲಿ ಸ್ಟೂಡೆಂಟ್ ಪೊಲೀಸಿಂಗ್ ವ್ಯವಸ್ಥೆ ಈಗಾಗಲೇ ಜಾರಿಗೆ ತರಲಾಗಿದೆ. ಡ್ರಗ್ಸ್ ಸೇವನೆ ಸೇರಿದಂತೆ ಇತರೇ ಕಾನೂನುಬಾಹಿರ ಕೃತ್ಯಗಳನ್ನು ನಿಯಂತ್ರಿಸಲು ಸಾರ್ವಜನಿಕರು ಪೊಲೀಸ್ ಇಲಾಖೆ ಜೊತೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಶಾಬಾಸ್ ಖಾನ್ ನೇಮಕ



ಮೈಸೂರು,ಜೂ.30(ಪಿಎಂ)– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಬೀದಿ ಬದಿ ವ್ಯಾಪಾರಿಗಳ ವಿಭಾಗದ ರಾಜ್ಯಾಧ್ಯಕ್ಷ ರಂಗಸ್ವಾಮಿ ಅವರ ಆದೇಶದ ಮೇರೆಗೆ ಮಂಡಿ ಮೊಹಲ್ಲಾದ ಶಾಬಾಸ್ ಖಾನ್ ಅವರನ್ನು ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿಯ ಬೀದಿ ಬದಿ ವ್ಯಾಪಾರಿಗಳ ವಿಭಾಗದ ಸಂಘಟನಾ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ ಎಂದು ಸದರಿ ವಿಭಾಗದ ನಗರಾಧ್ಯಕ್ಷ ಅಜ್ಮಲ್‌ಪಾಷ ನೇಮಕಾತಿ ಆದೇಶದಲ್ಲಿ ತಿಳಿಸಿದ್ದಾರೆ.

ಕುವೆಂಪುನಗರದ ನಿತ್ಯಾನಂದ ಹತ್ಯೆ ಪ್ರಕರಣ

ಹತ್ಯೆಯಲ್ಲಿ ನಿತ್ಯಾನಂದರ ಪತ್ನಿ ಸುಶೀಲಾ ಸೇರಿ ಐವರು ಭಾಗಿ; ನಾಲ್ವರ ಬಂಧನ–ಮತ್ತೊಬ್ಬ ಆರೋಪಿಗೆ ಶೋಧ

ಮೈಸೂರು, ಜೂ.30(ಪಿಎಂ)– ಕುವೆಂಪುನಗರದ ಹುಡ್ಕೋ ಬಡಾವಣೆ ನಿವಾಸಿ ನಿತ್ಯಾನಂದ ಹತ್ಯೆ ಪ್ರಕರಣ ಪೂರ್ವನಿಯೋಜಿತ ಕೃತ್ಯ ಎಂಬುದು ಪೊಲೀಸರ ತನಿಖೆಯಲ್ಲಿ ಮೇಲ್ನೋಟಕ್ಕೆ ಕಂಡುಬಂದಿದ್ದು, ನಿತ್ಯಾನಂದ ಪತ್ನಿ ಸುಶೀಲಾ, ಆಕೆಯ ಸಂಬಂಧಿ ಹರೀಶ್ ಸೇರಿದಂತೆ ಒಟ್ಟು ಐವರು ಭಾಗಿಯಾಗಿರುವುದು ವಿಚಾರಣೆ ವೇಳೆ ಬಹಿರಂಗಗೊಂಡಿದೆ.

ಈ ಪ್ರಕರಣದಲ್ಲಿ ಸುಶೀಲಾ, ಹರೀಶ್ ಹಾಗೂ ಇಬ್ಬರು ಕೂಲಿ ಕಾರ್ಮಿಕರನ್ನು ಪೊಲೀಸರು ಬಂಧಿಸಿದ್ದು, ಮತ್ತೊಬ್ಬ ಆರೋಪಿಗೆ ಶೋಧ ಕಾರ್ಯ ಮುಂದುವರೆಸಿದ್ದಾರೆ. ಪತಿ ಸಾವಿಗೆ ಹೃದಯಾಘಾತ ಕಾರಣವೆಂಬ ಕಥೆ ಕಟ್ಟಲು ಹೋಗಿ ಸಿಕ್ಕಿ ಬಿದ್ದಿದ್ದ ಸುಶೀಲಾ ಜೊತೆಗೆ ಇದೀಗ ಕೃತ್ಯದಲ್ಲಿ ಭಾಗಿಯಾಗಿದ್ದ ಮೂವರು ಪೊಲೀಸರ ಅತಿಥಿಯಾಗಿದ್ದಾರೆ.

ಖಾಸಗಿ ಶಾಲೆಯ ಶಿಕ್ಷಕಿ ಸುಶೀಲಾ, ತನ್ನ ಪತಿ ನಿತ್ಯಾನಂದ ಅವರೊಂದಿಗೆ ಹೊಂದಿದ್ದ ವಿರಸವೇ ಹತ್ಯೆಗೆ ಕಾರಣ ಎಂದು ಪೊಲೀಸ್ ತನಿಖೆಯಲ್ಲಿ ಸದ್ಯ ಕಂಡು ಬಂದಿದ್ದು, ವಿವಿಧ ಆಯಾಮದಲ್ಲಿ ತನಿಖೆ ಮುಂದುವರೆಸಲಾಗಿದೆ. ಆರೋಪಿ ಹರೀಶನು ಸುಶೀಲಾ ಅವರ ಸಹೋದರಿಯ ಪತಿಯಾಗಿದ್ದು, ಈತನೊಂದಿಗೆ ಇನ್ನೂ ಮೂವರು ಪುರುಷರು ಕೃತ್ಯದಲ್ಲಿ ಭಾಗಿಯಾಗಿರುವುದು ತನಿಖೆ ವೇಳೆ ಬಯಲಾಗಿದೆ. ಐವರು ಸೇರಿಕೊಂಡು ನಿತ್ಯಾನಂದರ ಕುತ್ತಿಗೆ ಹಿಸುಕಿ ಹತ್ಯೆ ಮಾಡಿದ್ದೇವೆ ಎಂದು ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ.



ಸುಶೀಲಾ ನಿತ್ಯಾನಂದ ದಂಪತಿ.

ಈ ಸಂಬಂಧ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಡಿಸಿಪಿ ಡಾ. ಹರ್ಷ ಪ್ರಿಯಂವದಾ, ಪೂರ್ವ ನಿಯೋಜಿತ ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಈಗ ಆರೋಪಿಗಳ ಹೇಳಿಕೆಗಳ ಆಧಾರದಲ್ಲಿ ಪೂರ್ವ ನಿಯೋಜಿತ ಎಂದು ಹೇಳಬಹುದು. ಆದರೆ ಇನ್ನು ತಾಂತ್ರಿಕ ಸಾಕ್ಷ್ಯಗಳು ಲಭ್ಯವಾಗಿಲ್ಲ. ಆ ನಿಟ್ಟಿನಲ್ಲಿ ತನಿಖಾ ಪ್ರಕ್ರಿಯೆ ಮುಂದುವರೆದಿದೆ. ಸುಶೀಲಾ, ಹರೀಶ್ ಸೇರಿದಂತೆ ಒಟ್ಟು ಐವರು ಸೇರಿ ಬಟ್ಟೆಯಲ್ಲಿ ಕುತ್ತಿಗೆ ಬಿಗಿದು ಹತ್ಯೆ ಮಾಡಿದ್ದಾರೆ. ಹೀಗೆಂದು ಆರೋಪಿಗಳು ಹೇಳಿಕೆ ನೀಡಿದ್ದಾರೆ. ತನಿಖೆ ಮುಂದುವರೆದಿದೆ ಎಂದು ತಿಳಿಸಿದರು.

ನಿತ್ಯಾನಂದ ಅವರ ಸಹೋದರ ಮುಕ್ತ ವಿವಿ ಕುಲಸಚಿವ ಎಸ್.ಕೆ.ನವೀನ್ ಕುಮಾರ್ ನೀಡಿದ ದೂರಿನನ್ವಯ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಮೃತದೇಹ ಪರಿಶೀಲಿಸಿದಾಗ, ನನ್ನ ಸಹೋದರನ ಕೆನ್ನೆ ಮೊದಲಾದೆಡೆ ರಕ್ತ ಹೆಪ್ಪುಗಟ್ಟಿದಂತೆ ಇರುವುದು ಕಂಡಿತು. ಜೊತೆಗೆ ಕುತ್ತಿಗೆ ಬಳಿ ಬಿಗಿದಿರುವುದರಿಂದ ಉಂಟಾಗಿರುವಂತೆ ಕೆಂಪು ಗುರುತು ಮೂಡಿತ್ತು. ಆದರೆ ನನ್ನ ತಮ್ಮನ ಪತ್ನಿಯ ವಿಚಾರಿಸಿದಾಗ, ಹೃದಯಾಘಾತದಿಂದಲೇ ಮೃತಪಟ್ಟಿದ್ದಾರೆ ಎಂದು ಹೇಳಿದರು. ಆದರೆ ನನಗೆ ಆ ರೀತಿಯಲ್ಲಿ ಮೃತಪಟ್ಟಿದ್ದಾರೆ ಎಂದು ಕಂಡು ಬರುತ್ತಿಲ್ಲ. ಸುಶೀಲ ಮತ್ತು ಇತರರು ಸೇರಿ ಕತ್ತು ಹಿಸುಕಿ ಕೊಲೆ ಮಾಡಿದ್ದಾರೆ ಎಂದು ಎಸ್.ಕೆ.ನವೀನ್ ಕುಮಾರ್ ಆರೋಪದಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು.

ದಸರಾದಲ್ಲಿ ಕಂಬಳ ಆಯೋಜನೆಗೆ ಮರಗಳ ಹನನ ಸರಿಯಲ್ಲ ; ಪರಿಸರಕ್ಕಾಗಿ ನಾವು ಸಂಘಟನೆ ಆಕ್ಷೇಪ

ನಾಳೆ ಜಲದರ್ಶಿನಿಯಲ್ಲಿ ಸಭೆ ಆಯೋಜನೆ

ಮೈಸೂರು,ಜೂ.30(ಪಿಎಂ)– ಈ ಬಾರಿಯ ದಸರಾ ಉತ್ಸವದಲ್ಲಿ ಕಂಬಳ ಆಯೋಜಿಸಲು ಉದ್ದೇಶಿಸಿದ್ದು, ಇದಕ್ಕಾಗಿ ಮರಗಳನ್ನು ಕಡಿದು ಪರಿಸರ ನಾಶ ಮಾಡುವುದು ವಿವೇಕದ ನಡೆಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿರುವ ಪರಿಸರಕ್ಕಾಗಿ ನಾವು ಸಂಘಟನೆ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ, ಈ ಬಗ್ಗೆ ವಿಸ್ತೃತ ಚರ್ಚೆಗಾಗಿ ಜು.2ರಂದು ಮಧ್ಯಾಹ್ನ 3.30ಕ್ಕೆ ಜಲದರ್ಶಿನಿ ಅತಿಥಿ ಗೃಹದಲ್ಲಿ ಸಭೆ ಆಯೋಜಿಸಿರುವುದಾಗಿ ತಿಳಿಸಿದ್ದಾರೆ.

ದಸರಾ ವೇಳೆ ಕೋಣಗಳ ಓಟದ ಸ್ಪರ್ಧೆ ಕಂಬಳವನ್ನು ಮೈಸೂರಿನಲ್ಲಿ ನಡೆಸಲು ಜಿಲ್ಲಾಡಳಿತ ಸಿದ್ಧತೆ ನಡೆಸಿದೆ. ಈ ಕ್ರೀಡೆಯು ಕರಾವಳಿ ಪ್ರದೇಶದ ಸಂಸ್ಕೃತಿ–ಪರಂಪರೆಯ ಹೆಮ್ಮೆಯ ಭಾಗ. ಇದನ್ನು ಮೈಸೂರು ದಸರಾ ವೇಳೆ ಆಯೋಜಿಸಲು ಸರ್ಕಾರ ಮುಂದಾಗಿರುವ ಬಗ್ಗೆ ಮೈಸೂರಿನ ಪ್ರಜ್ಞಾವಂತ, ಪರಿಸರ ಕಾಳಜಿಯುಳ್ಳ ನಾಗರಿಕರು, ಪರಿಸರ ಸಂಘಟನೆಗಳು, ರೈತ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು ಚರ್ಚೆ ನಡೆಸುತ್ತಿವೆ.

ಮೈಸೂರು ದಸರಾಗೆ ತನ್ನದೇ ಐತಿಹಾಸಿಕ ಹಿನ್ನೆಲೆ, ಪರಂಪರೆ, ಭವ್ಯತೆ ಇದ್ದು, ವಿಶ್ವ ವಿಖ್ಯಾತಿ ಹೊಂದಿದೆ. ಈ ನೆಲದ್ದಲ್ಲದ ಬೇರೆ ಉತ್ಸವಗಳನ್ನು ದಸರಾದಲ್ಲಿ ಮಾಡುತ್ತ ಹೋದರೆ ನಮ್ಮ ನಾಡಹಬ್ಬದ ಘನತೆ, ಪರಂಪರೆಗೆ ಚ್ಯುತಿ ಬರಬಹುದು. ಜೊತೆಗೆ ಇದಕ್ಕಾಗಿ ಮರಗಳನ್ನು ಕಡಿದು ಪರಿಸರ ನಾಶ ಮಾಡುವುದು, ಕಂಬಳ ವೀಕ್ಷಿಸಲು ಸಿದ್ಧತೆಗಾಗಿ ಕೋಟ್ಯಾಂತರ ಹಣ ಖರ್ಚು ಮಾಡುವುದು ವಿವೇಕದ ನಡೆಯಲ್ಲ. ಈ ಬಗ್ಗೆ ಚರ್ಚಿಸಲು ಸಭೆ ಆಯೋಜಿಸಲಾಗಿದೆ.

ಸಭೆಯಲ್ಲಿ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮತ್ತು ಪದಾಧಿಕಾರಿಗಳು, ನಿವೃತ್ತ ಮೇಜರ್ ಜನರಲ್ ಸುಧೀರ್ ಒಂಬತ್ಕೆರೆ ಸೇರಿದಂತೆ ಪರಿಸರ ಸಂಘಟನೆಗಳ ಕಾರ್ಯಕರ್ತರು, ಬೆಳವಲ ಫೌಂಡೇಷನ್ ಡಾ.ರಾಮಕೃಷ್ಣಪ್ಪ, ಪರಂಪರೆ ತಜ್ಞ ಪ್ರೊ.ಎನ್.ಎಸ್.ರಂಗರಾಜು, ಉಗ್ರನರಸಿಂಹೇಗೌಡ ಸೇರಿದಂತೆ ಪ್ರಗತಿಪರ ಸಂಘಟನೆಗಳ ಮುಖಂಡರು, ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಮೈಸೂರಿನ ಪರಿಸರ, ಪರಂಪರೆ ಮತ್ತು ನಾಡಹಬ್ಬ ದಸಾರದ ಅಸ್ಮಿತೆ ಉಳಿಸಿಕೊಳ್ಳಲು ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಪ್ರಕಟಣೆಯಲ್ಲಿ ಅವರು ವಿನಂತಿಸಿದ್ದಾರೆ.

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ

ಬುಧವಾರ 1 ಜುಲೈ 2026

ಶಿಷ್ಯ ವೇತನ ಬಿಡುಗಡೆಗೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಮೈಸೂರಲ್ಲಿ ಪ್ರತಿಭಟನಾ ಮೆರವಣಿಗೆ

ದಲಿತರನ್ನು ಬೀದಿಯಲ್ಲಿ ಕೂರಿಸಿರುವ ಸರ್ಕಾರಕ್ಕೆ ತಕ್ಕ ಪಾಠದ ಎಚ್ಚರಿಕೆ

ಮೈಸೂರು, ಜೂ.30(ಬಿಎಲ್‌ಯು)– ಶಿಷ್ಯವೇತನ ಬಿಡುಗಡೆಗೆ ಆಗ್ರಹಿಸಿ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಮುಂಭಾಗ ಕಳೆದ 15 ದಿನಗಳಿಂದ ಧರಣಿ ನಡೆಸುತ್ತಿರುವ ದಲಿತ ಸಂಘರ್ಷ ಸಮಿತಿಯ ಹೋರಾಟಗಾರರು ಮಂಗಳವಾರ ಪುರಭವನದಿಂದ ಕ್ರಾಫರ್ಡ್ ಭವನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪುರಭವನದ ಮುಂದಿನ ಡಾ.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಯಿತು. ಶಿಷ್ಯವೇತನ ನಮ್ಮ ಹಕ್ಕು, ನಮ್ಮ ಬೇಡಿಕೆ ಈಡೇರುವ ತನಕ ಹೋರಾಟ ನಿಲ್ಲಿಸುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯ ನಮ್ಮ ಬೇಡಿಕೆ ಈಡೇರಿಕೆಗೆ ಸಕರಾತ್ಮಕವಾಗಿ ಸ್ಪಂದಿಸದಿದ್ದರೆ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸುತ್ತೇವೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಈ ವೇಳೆ ಮಾತನಾಡಿದ ವಿದ್ಯಾರ್ಥಿನಿ ದೀಪಾ, ಕಳೆದ 15 ದಿನಗಳಿಂದ ಕ್ರಾಫರ್ಡ್ ಭವನದ ಮುಂದೆ ಪ್ರತಿಭಟನಾ ಧರಣಿ ನಡೆಸುತ್ತಿದ್ದು, ನಮ್ಮ ಬೇಡಿಕೆ ಈಡೇರಿಸುವ ಕನಿಷ್ಠ ಭರವಸೆಯನ್ನೂ ನೀಡಿಲ್ಲ. ದಲಿತ ವಿದ್ಯಾರ್ಥಿಗಳನ್ನು ಬೀದಿಯಲ್ಲಿ ಕೂರಿಸಿರುವ ರಾಜ್ಯ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ಸರಿಯಾದ ಪಾಠ ಕಲಿಸುತ್ತೇವೆ. ದಲಿತರನ್ನು ಮತ ಬ್ಯಾಂಕ್ ಆಗಿ ಮಾತ್ರ ಪರಿಗಣಿಸಿದ್ದಾರೆ. ಮತ ನೀಡಿದ ಈ ಸಮುದಾಯಕ್ಕೆ ಕನಿಷ್ಠ ಸೌಲಭ್ಯಗಳನ್ನೂ ನೀಡುತ್ತಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.



ಶಿಷ್ಯ ವೇತನ ಬಿಡುಗಡೆಗೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ನೂರಾರು ಮಂದಿ ವಿದ್ಯಾರ್ಥಿಗಳು ಮಂಗಳವಾರ ಪುರಭವನದಿಂದ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದವರೆಗೆ ಮೆರವಣಿಗೆಯಲ್ಲಿ ತೆರಳಿ ಪ್ರತಿಭಟಿಸಿದರು.

ಸಮತಾ ಸೈನಿಕ ದಳದ ವೆಂಕಟಪ್ಪ ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯವು ಬಜೆಟ್‌ನಲ್ಲಿ ಪರಿಶಿಷ್ಟರಿಗೆ ಮೀಸಲಿಟ್ಟ ಅನುದಾನವನ್ನು ಏನು ಮಾಡಿದೆ ಎಂಬ ಲೆಕ್ಕ ನೀಡಬೇಕು ಎಂದು ಆಗ್ರಹಿಸಿದರು.

ದಲಿತ ಪರ ಸಂಘಟನೆಗಳ ಹಿರಿಯ ಹೋರಾಟಗಾರ ಹರಿಹರ ಆನಂದಸ್ವಾಮಿ ಮಾತನಾಡಿ, ಕಳೆದ 70 ವರ್ಷಗಳಿಂದ ಶಿಕ್ಷಣ, ಭೂಮಿಗೆ ಹೋರಾಟ ಮಾಡುತ್ತಲೇ ಬಂದಿದ್ದೇವೆ. ಈವರೆಗೂ ನಮ್ಮ ಬೇಡಿಕೆ ಈಡೇರುತ್ತಿಲ್ಲ ಎಂದು ಕಿಡಿಕಾರಿದರು. ಪುರಭವನದಿಂದ ಹೊರಟ ಪ್ರತಿಭಟನಾ ಮೆರವಣಿಗೆ ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಸಯ್ಯಾಜಿರಾವ್ ರಸ್ತೆ ದೇವರಾಜ ಅರಸ್ ರಸ್ತೆ ಮೂಲಕ ಕ್ರಾಫರ್ಡ್ ಭವನ ತಲುಪಿತು.

ಚಿತ್ರನಟ ಚೇತನ್ ಅಹಿಂಸಾ, ದಲಿತ ಸಂಘರ್ಷ ಸಮಿತಿ ಸಂಘಟನಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ಎಡತೊರೆ ಮಹದೇವಯ್ಯ, ಕೆಆರ್‌ಎಸ್ ಪಕ್ಷದ ಮುಖಂಡ ನಾಗರಾಜು, ಸೋಸಲೆ ಸಿದ್ದರಾಜು, ಸೋಮಯ್ಯ ಮಲೆಯೂರು ಸೇರಿದಂತೆ ನೂರಾರು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

> ❝ ಶಿಷ್ಯ ವೇತನದ ಹಣದಿಂದ ವಿದ್ಯಾರ್ಥಿಗಳು ಕೋಟ್ಯಾಧಿಪತಿ ಆಗುವುದಿಲ್ಲ. ವಿಶ್ವವಿದ್ಯಾನಿಲಯ ನೀಡುವ ಶಿಷ್ಯ ವೇತನ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಷ್ಟೆ ಖರ್ಚಾಗುತ್ತದೆ. ಅದನ್ನೇನೂ ಉಳಿತಾಯ ಮಾಡಲು ಸಾಧ್ಯವಿಲ್ಲ. ಇದನ್ನು ಮನಗಂಡು ವಿಶ್ವವಿದ್ಯಾನಿಲಯ ಈ ಕೂಡಲೇ ಶಿಷ್ಯ ವೇತನ ನೀಡಬೇಕು. ಗುತ್ತಿಗೆದಾರರು, ಲ್ಯಾಂಡ್ ಮಾಫಿಯಾದವರಿಗೆ ಅನುಕೂಲ ಮಾಡಿಕೊಡುವ ಸರ್ಕಾರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಹಣ ಕೊಡಲು ಏಕೆ ಹಿಂಜರಿಯುತ್ತಿದೆ.
>
> –ಚೇತನ್ ಅಹಿಂಸಾ, ಚಿತ್ರ ನಟ



ಬಂಡೀಪುರ, ನಾಗರಹೊಳೆಯಲ್ಲಿ ಸಫಾರಿಗೆ ಸಿಎಂ ಸೂಚನೆ



ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆದ ರಾಜ್ಯ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿ ಸಭೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿದರು.

ಬೆಂಗಳೂರು, ಜೂ.30(ಕೆಎಂಶಿ)– ಅಗತ್ಯ ಸುರಕ್ಷತಾ ಕ್ರಮಗಳ ಕಟ್ಟುನಿಟ್ಟು ಪಾಲನೆ ಮೂಲಕ ಬಂಡೀಪುರ ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನಗಳಲ್ಲಿ ಸಫಾರಿ ಮತ್ತು ಪರಿಸರ ಪ್ರವಾಸೋದ್ಯಮ ಚಟುವಟಿಕೆ ಮನರಾರಂಭಿಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರಿಗಳಿಗೆ ಇಂದಿಲ್ಲಿ ಸೂಚಿಸಿದ್ದಾರೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆದ ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಬಂಡೀಪುರ ಮತ್ತು ನಾಗರಹೊಳೆ ಪರಿಸರ ಪ್ರವಾಸೋದ್ಯಮ ಹಾಗೂ ಸಫಾರಿ ಪ್ರದೇಶಗಳಲ್ಲಿ ಪ್ರವಾಸಿಗರ ಸುರಕ್ಷತೆಗೆ ಧಕ್ಕೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ಹಾಗೂ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಬಿಎಂಟಿಸಿ ಕಾರಿಡಾರ್ ನಿರ್ಮಾಣದಿಂದ ಆನೆ, ಹುಲಿ ಹಾಗೂ ಚಿರತೆಗಳ ಸಾಂಪ್ರದಾಯಿಕ ಸಂಚಾರ ಮಾರ್ಗಗಳಿಗೆ ಅಡ್ಡಿಯಾದ ಪರಿಣಾಮ ವನ್ಯಜೀವಿಗಳು ಅರಣ್ಯ ಪ್ರದೇಶದಿಂದ ಹೊರಬಂದು ಚನ್ನಪಟ್ಟಣ ಹಾಗೂ ರಾಮನಗರ ಭಾಗಗಳತ್ತ ಸಂಚರಿಸುತ್ತಿದ್ದು, ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ನಿರ್ಮಾಣಕ್ಕೆ ಅನುಮತಿ ನೀಡುವ ಸಂದರ್ಭದಲ್ಲಿ ವನ್ಯಜೀವಿಗಳ ಸುರಕ್ಷಿತ ಸಂಚಾರಕ್ಕೆ ಅಗತ್ಯ ಅಂಡರ್‌ಪಾಸ್, ಓವರ್‌ಪಾಸ್ ಹಾಗೂ ವನ್ಯಜೀವಿ ಕಾರಿಡಾರ್‌ಗಳ ನಿರ್ಮಾಣಕ್ಕೆ ಷರತ್ತು ವಿಧಿಸಲಾಗಿತ್ತು. ಆದರೆ, ರಸ್ತೆ ನಿರ್ಮಾಣದ ವೇಳೆ ಷರತ್ತುಗಳನ್ನು ಸಮರ್ಪಕವಾಗಿ ಪಾಲಿಸಿಲ್ಲ ಎಂಬ ಅಧಿಕಾರಿಗಳ ವಿವರಕ್ಕೆ ಸಿಎಂ ಬೇಸರ ವ್ಯಕ್ತಪಡಿಸಿದರು.

ವಿದ್ಯಾರ್ಥಿವೇತನಕ್ಕಾಗಿ ಅರ್ಹರಿಂದ ಅರ್ಜಿ ಆಹ್ವಾನ

ಮೈಸೂರು: ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2026–27ನೇ ಸಾಲಿಗೆ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲ್ಲೂಕಿನ 10ನೇ ತರಗತಿ / SSLCನಂತರದ PUC, Diploma, ITI, Degree, Engineering, Nursing, B.Ed, Post Graduation ಹಾಗೂ ಇತರೆ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಜನವರಿ 31, 2027ರೊಳಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ssp.postmatric.karnataka.gov.inನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ಮೊದಲು Aadhaar Seeding, College Details, Course Details ಮತ್ತು NSP OTR Validation ನೊಂದಿಗೆ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲಿಸಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಗ್ರೇಡ್–1 ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲ್ಲೂಕು ಡಾ॥ ಬಾಬು ಜಗಜೀವನರಾಂ ಭವನಕಟ್ಟಡ, ಆದಿಪಂಪ ರಸ್ತೆ ಒಂಟಿಕೊಪ್ಪಲು ಪೂರ್ವ, ಬಡಾವಣೆ ಪಡುವಾರಹಳ್ಳಿ ಮೈಸೂರು, ದೂ.ಸಂಖ್ಯೆ: 0821–2520910 ಮೊ.ಸಂ. 8880421982 ಸಂಪರ್ಕಿಸಿ.

ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡರಿಂದ ಚಾಲನೆ...



ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನಂ.46ರಲ್ಲಿ 3 ಕೋಟಿ 28 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕರಾದ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು. ಈ ವೇಳೆ ಮುಖಂಡರಾದ ರಮೇಶ್ ಕಲ್ಲಿಪಾಳ್ಯ, ಶಿವಪ್ರಕಾಶ್, ನಟರಾಜು, ಹಾಲತಿ ಸೋಮಶೇಖರ್, ಶಶಿ, ಜಗದೀಶ್, ಮನೋಜ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಶುಭಾಶಯ...



ಮೈಸೂರಿನ ಉದಯಗಿರಿ ಶ್ರೀ ವಿಶ್ವೇಶ್ವರ ದೇವಸ್ಥಾನ ಟ್ರಸ್ಟ್‌ನ ಅಧ್ಯಕ್ಷರು, ಜಿಲ್ಲಾ ಈಡಿಗ ಸಮಾಜದ ಪ್ರಧಾನ ಕಾರ್ಯದರ್ಶಿಗಳೂ ಆದ ವಿಶ್ವನಾಗರ್ ಕದಂಬ ಅವರಿಗೆ ಕಾಯಕ ಸಮುದಾಯದ ಒಕ್ಕೂಟದ ವತಿಯಿಂದ ಹುಟ್ಟು ಹಬ್ಬದ ಶುಭಾಶಯ ಕೋರಿ, ಅಭಿನಂದಿಸಲಾಯಿತು. ಈ ವೇಳೆ ಓಬಿಸಿ ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಜಿ.ಆರ್.ಶಿವರಾಮಪ್ಪ, ಕಾಯಕ ಸಮುದಾಯದ ಒಕ್ಕೂಟದ ಜಿಲ್ಲಾಧ್ಯಕ್ಷ ಮೈ.ನಾ.ಲೋಕೇಶ್, ವಿಶ್ವಕರ್ಮ ಮುಖಂಡ ಎಂ.ಜಿ.ರವಿಶಂಕರ್, ಟ್ರಸ್ಟ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಿವಿಲ್ ಕಾನ್ಸ್‌ಟೇಬಲ್, ಸಿಎಆರ್–ಡಿಎಆರ್ ಕಾನ್ಸ್‌ಟೇಬಲ್ ಹುದ್ದೆಗೆ ಉಚಿತ ಅಣಕು ಪರೀಕ್ಷೆ

ಮೈಸೂರು,ಜೂ.30– ನಗರ ಕೇಂದ್ರ ಗ್ರಂಥಾಲಯದ ವತಿಯಿಂದ ಕರ್ನಾಟಕ ರಾಜ್ಯ ಪೊಲೀಸ್ ಇಲಾಖಾ ನೇಮಕಾತಿ ಸಮಿತಿಯವರು ಸಿವಿಲ್ ಕಾನ್ಸ್‌ಟೇಬಲ್ ಹಾಗೂ ಸಿಎಆರ್–ಡಿಎಆರ್ ಕಾನ್ಸ್‌ಟೇಬಲ್ ಹುದ್ದೆಗಳ ಭರ್ತಿಗಾಗಿ ರಾಜ್ಯಾದ್ಯಂತ ಲಿಖಿತ ಪರೀಕ್ಷೆಯನ್ನು ನಡೆಸುತ್ತಿದ್ದು, ಲಿಖಿತ ಪರೀಕ್ಷೆಯು ಆ.2ರಂದು ನಡೆಯಲಿದೆ. ಪರೀಕ್ಷೆಗೆ ಹಾಜರಾಗುತ್ತಿರುವ ಅಭ್ಯರ್ಥಿಗಳ ಉಪಯೋಗಕ್ಕಾಗಿ ಮೈಸೂರು ನಗರದ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯ ಸದರಿ ಪರೀಕ್ಷೆಗೆ ಸಂಬಂಧಿಸಿದ ಅಣಕು ಪರೀಕ್ಷೆಗಳನ್ನು ಉಚಿತವಾಗಿ ನಡೆಸಲು ಉದ್ದೇಶಿಸಿದೆ. ಈ ಅಣಕು ಪರೀಕ್ಷೆಗಳನ್ನು ಮುಂಬರುವ ಜುಲೈ ತಿಂಗಳಲ್ಲಿ ನಡೆಸಲಾಗುವುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ಜು.4ರೊಳಗಾಗಿ ನಗರ ಕೇಂದ್ರ ಗ್ರಂಥಾಲಯ ಪೀಪಲ್ಸ್ ಪಾರ್ಕ್ ಮೈಸೂರು ಇಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ಸದರಿ ಅಣಕು ಪರೀಕ್ಷೆಗೆ ಹಾಜರಾಗಲು ಇಚ್ಛಿಸುವ ಅಭ್ಯರ್ಥಿಗಳು ಪೀಪಲ್ಸ್ ಪಾರ್ಕ್ ಗ್ರಂಥಾಲಯ ಸೇರಿದಂತೆ ಮೈಸೂರು ನಗರದ ವಿವಿಧ ಬಡಾವಣೆಗಳಲ್ಲಿ ಇರುವಂತಹ ಯಾವುದೇ ಶಾಖಾ ಗ್ರಂಥಾಲಯದಲ್ಲಿ ಸದಸ್ಯತ್ವ ಪಡೆಯುವುದು ಕಡ್ಡಾಯವಾಗಿರುತ್ತದೆ ಎಂದು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಮಾಕ್ಷಿ ಆಸ್ಪತ್ರೆ 53ನೇ ಸಂಸ್ಥಾಪನಾ ದಿನಾಚರಣೆ

ಮೈಸೂರು, ಜೂ.30(ಎಸ್‌ಪಿಎನ್)– ಮೈಸೂರು ಕುವೆಂಪುನಗರದಲ್ಲಿರುವ ಕಾಮಾಕ್ಷಿ ಆಸ್ಪತ್ರೆ ಆವರಣದಲ್ಲಿ 53ನೇ ಸಂಸ್ಥಾಪನಾ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ವೇಳೆ ಕಾಮಾಕ್ಷಿ ಆಸ್ಪತ್ರೆಯಲ್ಲಿ ಹಲವು ವರ್ಷಗಳಿಂದ ಪ್ರಾಮಾಣಿಕರಾಗಿ ದುಡಿದ ಸಾಧಕರಾದ ಎಕ್ಸ್‌ರೇ ವಿಭಾಗದ ಎಚ್.ಬಿ.ನಂದೀಶ್, ಹಿರಿಯ ಸ್ತ್ರೀರೋಗ ತಜ್ಞೆ ಡಾ.ನಾಗಲಕ್ಷ್ಮಿ ಭಟ್ಟಾಚಾರ್ಯ, ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್, ಜನರಲ್ ಮ್ಯಾನೇಜರ್ ಎಸ್.ವಿ.ಪ್ರಸನ್ನ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಬಳಿಕ ಕಲಾವಿದ ಡಾ.ರಾಜಶೇಖರ್ ಕಾಮಾಕ್ಷಿ ಆಸ್ಪತ್ರೆಯ ವಾರ್ಷಿಕೋತ್ಸವ ಗೀತೆಯನ್ನು ಹಾಡಿದರು. ಗಾಯಕ ಮಹದೇವ್ ಅವರಿಂದ ಜಾನಪದ ಗೀತೆ, ಕಾಮಾಕ್ಷಿ ಆಸ್ಪತ್ರೆಯ ನರ್ಸ್ ತಂಡದಿಂದ ಸಮೂಹ ನೃತ್ಯ, ರಾಜೇಶ್ವರಿ ನೇತೃತ್ವದಲ್ಲಿ ಗಾಯನ, ಪುಟ್ಟರಾಜ್ ಅವರಿಂದ ಮಿಮಿಕ್ರಿ, ಫ್ಯಾಷನ್ ಶೋ. ಪ್ರಯೋಗಾಲಯ ಸಿಬ್ಬಂದಿಯಿಂದ ಸಮೂಹ ನೃತ್ಯ ಹಾಗೂ ಸಂತೋಷ್ ಅವರಿಂದ ಸಿನಿಮಾ ಗೀತೆ ಹಾಗೂ ವೈದ್ಯರ ತಂಡದಿಂದ ಫ್ಯಾಷನ್ ಶೋ ಯಶಸ್ವಿಯಾಗಿ ಆಯೋಜಿಸಲಾಗಿತ್ತು.

ನಂತರ ಸನ್ಮಾನ ಸ್ವೀಕರಿಸಿ ಮಾತನಾಡಿದ ಕಾಮಾಕ್ಷಿ ಆಸ್ಪತ್ರೆಯ ಜನರಲ್ ಮ್ಯಾನೇಜರ್ ಎಸ್.ವಿ.ಪ್ರಸನ್ನಕುಮಾರ್, 1973ರಲ್ಲಿ ದಿವಂಗತ ಮಾಧವಶೆಣೈ, ಪತ್ನಿ ಸುಲೋಚನಾ ನೇತೃತ್ವದಲ್ಲಿ ಕಾಮಾಕ್ಷಿ ಆಸ್ಪತ್ರೆ ಸ್ಥಾಪಿತವಾಯಿತು. ಜನರಲ್ ಮೆಡಿಸಿನ್, ಸರ್ಜರಿ, ಓಪಿಡಿ, ಪೀಡಿಯಾಟ್ರಿಕ್ಸ್ ಹಾಗೂ ಇತರೆ ಖಾಯಿಲೆಗಳಿಗೆ ಕಡಿಮೆ ವೆಚ್ಚದಲ್ಲಿ ಬಡವರಿಗೆ ಸೂಕ್ತ ಚಿಕಿತ್ಸೆ ದೊರಕಬೇಕೆಂಬ ಮಹದಾಶಯದೊಂದಿಗೆ ಎಲ್ಲರೂ ಒಟ್ಟಾಗಿ ಕೆಲಸ ಮಾಡುವುದರಿಂದ ಒಂದು ಸಂಸ್ಥೆ ಬೆಳವಣಿಗೆ ಸಾಧ್ಯ. ಸಂಸ್ಥೆ ಬೆಳವಣಿಗೆಗೆ ದುಡಿದವರನ್ನು ಸಂಸ್ಥಾಪನಾ ದಿನದಂದು ಗೌರವಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಅಲ್ಲದೆ, ಜಿಲ್ಲೆಯಲ್ಲಿ ವೈದ್ಯಕೀಯ ಸೇವೆಯನ್ನು ಕಡಿಮೆ ದರದಲ್ಲಿ ನೀಡಬೇಕು ಎಂಬ ಆಲೋಚನೆ ದಿ. ಮಾಧವಶೆಣೈ, ಶ್ರೀಮತಿ ಸುಲೋಚನಾ ಅವರ ಮನಸ್ಸಿನಲ್ಲಿ ಆ ಕಾಲಕ್ಕೆ ಬಂದಿರುವುದು ಶ್ಲಾಘನೀಯ ಎಂದರಲ್ಲದೆ, ಹಲವು ವರ್ಷಗಳ ಸುದೀರ್ಘ ಸೇವೆಯಲ್ಲಿ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್, ಸ್ತ್ರೀರೋಗ ತಜ್ಞೆ ಡಾ.ನಾಗಲಕ್ಷ್ಮಿ ಭಟ್ಟಾಚಾರ್ಯ, ಎಕ್ಸ್‌ರೇ ವಿಭಾಗದ ನಂದೀಶ್ ಸೇವೆ ಪ್ರಮುಖವಾಗಿದೆ. ಇವರೊಂದಿಗೆ ಆಸ್ಪತ್ರೆ ಇತರೆ ಸಿಬ್ಬಂದಿ, ವೈದ್ಯರು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಆಸ್ಪತ್ರೆಯ ಏಳಿಗೆಗೆ ಶ್ರಮಿಸಿದ್ದಾರೆ ಎಂದು ಸಿಬ್ಬಂದಿ ಸೇವೆಯನ್ನು ಕೊಂಡಾಡಿದರು. ಈ ವೇಳೆ ಕಾಮಾಕ್ಷಿ ಆಸ್ಪತ್ರೆಯ ಛೇರ್ಮನ್ ವಿಶ್ವನಾಥ್ ರಾವ್, ಮ್ಯಾನೇಜಿಂಗ್ ಟ್ರಸ್ಟಿ ಮಹೇಶ್ ಶೆಣೈ, ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ. ಮಂಜುನಾಥ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.



ಕಾಮಾಕ್ಷಿ ಆಸ್ಪತ್ರೆ ಆವರಣದಲ್ಲಿ 53ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಸ್ಪತ್ರೆಯಲ್ಲಿ ಹಲವು ವರ್ಷಗಳಿಂದ ಪ್ರಾಮಾಣಿಕರಾಗಿ ದುಡಿದ ಸಾಧಕರಾದ ಎಕ್ಸ್‌ರೇ ವಿಭಾಗದ ಎಚ್.ಬಿ.ನಂದೀಶ್, ಹಿರಿಯ ಸ್ತ್ರೀರೋಗ ತಜ್ಞೆ ಡಾ.ನಾಗಲಕ್ಷ್ಮಿ ಭಟ್ಟಾಚಾರ್ಯ, ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್, ಜನರಲ್ ಮ್ಯಾನೇಜರ್ ಎಸ್.ವಿ.ಪ್ರಸನ್ನಕುಮಾರ್ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಮನೆ ನಿರ್ಮಾಣ ಸೌಲಭ್ಯಕ್ಕೆ ಅರ್ಜಿ

ಮೈಸೂರು: ಪರಿಶಿಷ್ಟ ಜಾತಿ ಮತ್ತು ಪಂಗಡದ ಅಲೆಮಾರಿ ಸಮುದಾಯದ ವಸತಿರಹಿತರಿಗೆ ವಸತಿ ಯೋಜನೆಯಡಿ ಮನೆ ನಿರ್ಮಾಣ ಮಾಡಲು ಅನುದಾನ ಮಂಜೂರಾಗಿದ್ದು, ಪರಿಶಿಷ್ಟ ಜಾತಿ ಅಲೆಮಾರಿ ಸಮುದಾಯಕ್ಕೆ–75 ಹಾಗೂ ಪ.ಪಂಗಡ ಅಲೆ ಮಾರಿ ಸಮುದಾಯಕ್ಕೆ–150 ಗುರಿಗಳನ್ನು ಮೈಸೂರು ಜಿಲ್ಲೆಗೆ ನೀಡಲಾಗಿದೆ. ಅದರಂತೆ ಮೈಸೂರು ತಾಲೂಕಿನಲ್ಲಿ ಹಾಲಿ ನಿವೇಶನ ಹೊಂದಿರುವ ಅರ್ಹ ಫಲಾಪೇಕ್ಷಿಗಳು ಈ ಹಿಂದೆ ಯಾವುದೇ ವಸತಿ ಯೋಜನೆಯಡಿ ಸೌಲಭ್ಯ ಪಡೆಯದಿರುವ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ದೃಢೀಕರಣದೊಂದಿಗೆ ನಿವೇಶನ ಹೊಂದಿರುವ ಬಗ್ಗೆ ಹಕ್ಕು ಪತ್ರ/ಪೂರಕ ದಾಖಲಾತಿ, ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ಜಾತಿ ಮತ್ತು ಆಧಾಯ ಪ್ರಮಾಣ ಪತ್ರ, ಪಡಿತರ ಚೀಟಿ, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಪಾಸ್ ಪುಸ್ತಕ ದಾಖಲಾತಿಗಳನ್ನು ನೀಡಿ ಸಹಾಯಕ ನಿರ್ದೇಶಕರ ಗ್ರೇಡ್–1ರವರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲೂಕು ಡಾ. ಬಾಬು ಜಗಜೀವನ್‌ರಾಂ ಭವನದ ಕಟ್ಟಡ, ಪಡುವಾರಹಳ್ಳಿ, ಕಾಳಿದಾಸ ರಸ್ತೆ, ಮೈಸೂರು ಈ ಕಛೇರಿಗೆ ಭೇಟಿ ನೀಡಿ ಅರ್ಜಿ ನಮೂನೆಗಳನ್ನು ಪಡೆದುಕೊಳ್ಳಲು ಸೂಚಿಸಲಾಗಿದೆ.

ದೇಶ - ವಿದೇಶ

ಮತ್ತಿಗಾಗಿ ನಾಲಿಗೆ ಮೇಲೆ ಹಾವಿನಿಂದ ಕಚ್ಚಿಸಿಕೊಳ್ತಾರೆ; ಕೇರಳ ಸಚಿವರ ವಿವಾದಾಸ್ಪದ ಹೇಳಿಕೆ



ಕೇರಳ: ಇಂದಿನ ಯುವಕರು ಮಾದಕತೆ ಅಥವಾ ಮತ್ತಿಗಾಗಿ ತಮ್ಮ ನಾಲಿಗೆಯ ಮೇಲೆ ವಿಷಪೂರಿತ ಹಾವಿನಿಂದ ಕಚ್ಚಿಸಿಕೊಳ್ಳುವ ಪದ್ಧತಿ ಇದೆ ಎಂಬ ಕೇರಳದ ಗೃಹ ಸಚಿವ ರಮೇಶ್ ಚೆನ್ನಿತ್ತಲ ಅವರ ಹೇಳಿಕೆ ತೀವ್ರ ವಿವಾದಕ್ಕೆ ಕಾರಣವಾಗಿದೆ. ಸಚಿವರ ಈ ವಿಚಿತ್ರ ಹೇಳಿಕೆ ವಿರುದ್ಧ ಈಗಾಗಲೇ ಹಲವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಒಂದು ವೇಳೆ ಯಾರಾದರೂ ಮಂಡಲ ಹಾವಿನಿಂದ ಈ ರೀತಿ ನಾಲಿಗೆಗೆ ಕಚ್ಚಿಸಿಕೊಂಡರೆ ಮಾದಕತೆ ಸಿಗುವುದಿರಲಿ ಕ್ಷಣಾರ್ಧದಲ್ಲಿ ಅವರ ಸಾವು ಸಂಭವಿಸುವ ಸಾಧ್ಯತೆ ಇದೆ ಎಂದು ವೈದ್ಯಕೀಯ ತಜ್ಞರು ಎಚ್ಚರಿಸಿದ್ದಾರೆ. ಜವಾಬ್ದಾರಿಯುತ ರಾಜಕಾರಣಿ ಹೇಳಿಕೆ ನಂಬಿ ಯಾರಾದರೂ ಇಂತಹ ಅಪಾಯಕಾರಿ ಸಾಹಸಕ್ಕೆ ಕೈಹಾಕುವ ಸಾಧ್ಯತೆ ಇರುತ್ತದೆ. ಆದ್ದರಿಂದ ಯಾರೂ ಇಂತಹ ತಪ್ಪು ಮಾಹಿತಿಗಳನ್ನು ಪ್ರಯೋಗಿಸಲು ಹೋಗಬಾರದು. ಮಂಡಲ ಹಾವಿನ ವಿಷವು ರಕ್ತದ ಮೇಲೆ ಪ್ರಭಾವ ಬೀರುವುದರಿಂದ ಮಾದಕತೆ ಸಿಗಲು ಸಾಧ್ಯವೇ ಇಲ್ಲ. ನಾಗರಹಾವು ಮತ್ತು ಕಟ್ಟುಹಾವುಗಳ ವಿಷವು ನರಮಂಡಲದ ಮೇಲೆ ಪರಿಣಾಮ ಬೀರುವ 'ನ್ಯೂರೋ ಟಾಕ್ಸಿಕ್' ಗುಣ ಹೊಂದಿದ್ದು, ಮಾದಕ ವ್ಯಸನಿಗಳು ಇವುಗಳನ್ನು ಬಳಸಲು ಯತ್ನಿಸುತ್ತಾರೆ. ಆದರೆ, ಇವುಗಳಿಂದ ಕಚ್ಚಿಸಿ ಕೊಂಡರೂ ದೇಹಕ್ಕೆ ವಿಷವೇರಿ ಸಾವು ಸಂಭವಿಸುವ ಅಪಾಯವೇ ಶೇ.100 ರಷ್ಟಿರುತ್ತದೆ ಎಂದು ಡಾ.ಶಿಮ್ನಾ ಅಜೀಜ್ ಎಚ್ಚರಿಸಿದ್ದಾರೆ.

ನಮ್ಮ ಪಾಲಿನ ನೀರು ಮುಟ್ಟಿದರೆ ಆ ಕೈಗಳನ್ನೇ ಕತ್ತರಿಸುತ್ತೇವೆ.!



ಇಸ್ಲಾಮಾಬಾದ್: ಸಿಂಧೂ ಜಲ ಒಪ್ಪಂದ ವಿಚಾರದಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವಿನ ಉದ್ವಿಗ್ನತೆ ಮತ್ತಷ್ಟು ಹೆಚ್ಚಾಗಿದ್ದು, ಪಾಕಿಸ್ತಾನದ ಹವಾಮಾನ ಬದಲಾವಣೆ ಸಚಿವ ಮುಸಾದಿಕ್ ಮಲಿಕ್ ಭಾರತದ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ.

ಪಾಕಿಸ್ತಾನಕ್ಕೆ ಸೇರಬೇಕಾದ ನೀರನ್ನು ಕಸಿದುಕೊಳ್ಳಲು ಯಾರೇ ಪ್ರಯತ್ನಿಸಿದರೂ ಅವರ ಕೈ ಕತ್ತರಿಸುತ್ತೇವೆ ಎಂದು ಯುದ್ಧೋನ್ಮಾದದ ಮಾತುಗಳನ್ನಾಡಿದ್ದಾರೆ. ಪಾಕಿಸ್ತಾನದ ಮಾಹಿತಿ ಸಚಿವ ಅತ್ತಾವುಲ್ಲಾ ತಾರರ್ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಮುಸಾದಿಕ್ ಮಲಿಕ್, ಸಿಂಧೂ ನದಿ ನೀರಿನ ಹರಿವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಿದೆ ಎಂದು ಆರೋಪಿಸಿದರು. ಪಾಕಿಸ್ತಾನಕ್ಕೆ ಹಕ್ಕಿನಂತೆ ದೊರೆಯಬೇಕಾದ ನೀರನ್ನು ತಡೆಯಲು ಅಥವಾ ಬೇರೆಡೆಗೆ ತಿರುಗಿಸಲು ಯಾರಿಗೂ ಅವಕಾಶ ನೀಡುವುದಿಲ್ಲ. ನಮ್ಮ ಪಾಲಿನ ನೀರಿನ ಮೇಲೆ ಯಾರಾದರೂ ಹಕ್ಕು ಸಾಧಿಸಲು ಯತ್ನಿಸಿದರೆ, ನಾವು ಸುಮ್ಮನಿರುವುದಿಲ್ಲ. ಅಗತ್ಯವಿದ್ದರೆ ಬಲಪ್ರಯೋಗಕ್ಕೂ ಹಿಂದೇಟು ಹಾಕುವುದಿಲ್ಲ ಎಂದು ಹೇಳಿದ್ದಾರೆ. ಅವರ ಈ ಹೇಳಿಕೆಯ ವಿಡಿಯೋವನ್ನು ಪಾಕಿಸ್ತಾನದ ಹಲವು ಮಾಧ್ಯಮಗಳು ಪ್ರಸಾರ ಮಾಡಿವೆ. ಮಾಹಿತಿ ಸಚಿವ ಅತ್ತಾವುಲ್ಲಾ ತಾರರ್ ಮಾತನಾಡಿ, 1960ರ ಸಿಂಧೂ ಜಲ ಒಪ್ಪಂದವನ್ನು ಭಾರತ ಏಕಪಕ್ಷೀಯವಾಗಿ ಅಮಾನತುಗೊಳಿಸಲು ಅಥವಾ ರದ್ದುಪಡಿಸಲು ಸಾಧ್ಯವಿಲ್ಲ ಎಂದು ವಾದಿಸಿದರು.


ರಾಮಮಂದಿರಕ್ಕೆ ತೆರಳಲು ಸಜ್ಜಾಗಿದ್ದ ಕಾಂಗ್ರೆಸ್ ನಾಯಕರಿಗೆ ಗೃಹಬಂಧನ ಆರೋಪ



ಅಯೋಧ್ಯೆ: ದೇಣಿಗೆ ಕಳ್ಳತನ ಪ್ರಕರಣ ಸದ್ದು ಮಾಡುತ್ತಿರುವ ಹೊತ್ತಲ್ಲಿ ರಾಮಮಂದಿರಕ್ಕೆ ಹೊರಟಿದ್ದ ಉತ್ತರ ಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಅಜಯ್ ರೈ ಅವರನ್ನು ಪೊಲೀಸರು ಗೃಹಬಂಧನದಲ್ಲಿಟ್ಟಿದ್ದಾರೆ. ಮಂಗಳವಾರ ರಾಮಮಂದಿರ ದರ್ಶನ ಕ್ಕಾಗಿ ಅಜಯ್ ರೈ ಪಕ್ಷದ ಸಂಸದರು ಮತ್ತು ನಾಯಕರ ನಿಯೋಗದ ನೇತೃತ್ವ ವಹಿಸಬೇಕಿತ್ತು. ಈ ಹಿನ್ನೆಲೆಯಲ್ಲಿ ಸೋಮವಾರ ರಾತ್ರಿ ಅಯೋಧ್ಯೆಗೆ ಬಂದ ಅವರನ್ನು ಹೋಟೆಲ್‌ನಲ್ಲಿ ಗೃಹಬಂಧನದಲ್ಲಿ ಇರಿಸಲಾಗಿದೆ ಎಂದು ಅಜಯ್‌ರೈ ಆರೋಪಿಸಿ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಹಂಚಿಕೊಂಡಿದ್ದಾರೆ.

ಆರ್‌ಎಸ್‌ಎಸ್ ಮತ್ತು ಬಿಜೆಪಿಯಿಂದ ದೇಣಿಗೆ ಕಳ್ಳತನ ಹಾಗೂ ಭೂ ಹಗರಣಗಳ ಮೂಲಕ ಈ ಪವಿತ್ರ ಸ್ಥಳಕ್ಕೆ ತಂದಿರುವ ಅಪಖ್ಯಾತಿ ಬಗ್ಗೆ ಭಗವಂತನಲ್ಲಿ ಪ್ರಾರ್ಥಿಸಲು ಬಯಸಿದ್ದೆವು. ತಡರಾತ್ರಿ ಕಾಂಗ್ರೆಸ್ ನಾಯಕರನ್ನು ಆಚಾರ್ಯ ನರೇಂದ್ರದೇವ್ ವಿವಿಯ ಅತಿಥಿಗೃಹಕ್ಕೆ ಸ್ಥಳಾಂತರಿಸಲಾಯಿತು. ನಮಗೆ ಕಿರುಕುಳ ನೀಡಲಾಗುತ್ತಿದೆ ಮತ್ತು ದೇವಸ್ಥಾನಕ್ಕೆ ಭೇಟಿ ನೀಡದಂತೆ ತಡೆಯಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಹಿರಿಯ ಕಾಂಗ್ರೆಸ್ ನಾಯಕ ಮತ್ತು ವಕ್ತಾರ ಅಂಶು ಅವಸ್ಥಿ, ಇದು ಯೋಗಿ ಆದಿತ್ಯನಾಥ್ ಸರ್ಕಾರದ ಸರ್ವಾಧಿಕಾರ, ಕಳ್ಳರು ಮತ್ತು ಡಕಾಯಿತರಿಗೆ ಮಾತ್ರ ರಾಮ ಮಂದಿರಕ್ಕೆ ಭೇಟಿ ನೀಡುವ ಹಕ್ಕಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಇತ್ತಿಹಾದ್ ರೈಲು ಸೇವೆ ಆರಂಭ: ಮೊದಲ ದಿನವೇ ಭಾರಿ ಪ್ರತಿಕ್ರಿಯೆ



ಟ್ರೆಹಾನ್: ಅಬುಧಾಬಿ: ಯುಎಇಯ ರಾಷ್ಟ್ರೀಯ ಪ್ರಯಾಣಿಕರ ರೈಲು ಸೇವೆಯಾಗಿರುವ ಇತ್ತಿಹಾದ್ ರೈಲು ಮಂಗಳವಾರ ಅಧಿಕೃತವಾಗಿ ಆರಂಭಗೊಂಡಿದ್ದು, ಮೊದಲ ದಿನದ ಕಾರ್ಯಾಚರಣೆಗೂ ಮುನ್ನವೇ 10 ಸಾವಿರಕ್ಕೂ ಹೆಚ್ಚು ಟಿಕೆಟ್‌ಗಳು ಮಾರಾಟವಾಗಿವೆ. ಮೊದಲ ದಿನ ಒಟ್ಟು ಆರು ರೈಲುಗಳು ಸಂಚರಿಸಲಿವೆ. ಮುಂದಿನ ಕೆಲವು ದಿನಗಳಲ್ಲಿ ಸಂಚರಿಸಲಿರುವ ಹೆಚ್ಚಿನ ರೈಲುಗಳ ಬಹುತೇಕ ಎಲ್ಲ ಆಸನಗಳು ಈಗಾಗಲೇ ಭರ್ತಿಯಾಗಿವೆ. ಫುಜೈರಾದಿಂದ ಮೊದಲ ರೈಲು ಹೊರಟ ಕ್ಷಣದಿಂದ ರಾಷ್ಟ್ರೀಯ ಕನಸೊಂದು ಜನರ ದೈನಂದಿನ ಬದುಕಿನ ಭಾಗವಾಗಿದೆ. ಇದು ಜನರನ್ನು, ಅವಕಾಶಗಳನ್ನು ಮತ್ತು ದೇಶದ ವಿವಿಧ ಭಾಗಗಳನ್ನು ಹೊಸ ರೀತಿಯಲ್ಲಿ ಸಂಪರ್ಕಿಸುತ್ತದೆ. ಇಂದಿನ ಪ್ರಯಾಣಿಕರು ಈ ಐತಿಹಾಸಿಕ ಆರಂಭದ ಸಾಕ್ಷಿಗಳಾಗಿದ್ದಾರೆ ಎಂದು ಇತ್ತಿಹಾದ್ ರೈಲಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಹ್ಮಾ ಅಲ್ ಸುವೈದಿ ಹೇಳಿದ್ದಾರೆ.

ಉದ್ಘಾಟನಾ ರೈಲಿನಲ್ಲಿ ಪ್ರಯಾಣಿಸಲು ಅನೇಕರು ವಿಶೇಷವಾಗಿ ಸಿದ್ಧತೆ ಮಾಡಿಕೊಂಡಿದ್ದರು. ದುಬೈ ನಿವಾಸಿ ಅಮೀನಾ ಸಲೀಂ ಅವರು ಸ್ನೇಹಿತ ಫಾರಿಸ್ ಜೊತೆ ರಾತ್ರಿ 3 ಗಂಟೆಗೆ ಫುಜೈರಾಗೆ ತೆರಳಿ, ಮೊದಲ ರೈಲಿನಲ್ಲಿ ಪ್ರಯಾಣಿಸಿದರು. ಈ ಐತಿಹಾಸಿಕ ಕ್ಷಣದ ಭಾಗವಾಗಲು ಅವರು ಕೆಲಸಕ್ಕೂ ರಜೆ ಪಡೆದಿದ್ದರು. ಅದೇ ದಿನ ಸಂಜೆ 6 ಗಂಟೆಯ ರೈಲಿನಲ್ಲಿ ಮರಳಿ ಫುಜೈರಾಗೆ ಬರಲು ಟಿಕೆಟ್ ಕಾಯ್ದಿರಿಸಿದ್ದರು.

ಪ್ಯಾರಾಮೆಡಿಕಲ್ ಪರೀಕ್ಷೆಯಲ್ಲಿ ಸಾಮೂಹಿಕ ನಕಲು: ಪರೀಕ್ಷೆ ರದ್ದು, ನಾಲ್ವರ ಬಂಧನ



ಜೈಪುರ: ರಾಜಸ್ಥಾನ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಪ್ಯಾರಾಮೆಡಿಕಲ್ ಪರೀಕ್ಷೆಯಲ್ಲಿ ಸಾಮೂಹಿಕ ನಕಲು ನಡೆಯುತ್ತಿದ್ದ ವೇಳೆಯೇ ಪೊಲೀಸರು ದಾಳಿ ನಡೆಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಿದ್ದಾರೆ.

ಜುನ್ಝುನುವಿನ ಎಸ್.ಕರಣ್ ಕಾಲೇಜಿನ ಪ್ಯಾರಾಮೆಡಿಕಲ್ ವಿಭಾಗದ ಮುಖ್ಯಸ್ಥ ಕೃಷ್ಣಕುಮಾರ್ ಸೈನಿ, ರೇಡಿಯಾಲಜಿ ವಿಭಾಗದ ಉಪನ್ಯಾಸಕ ಶಂಕರ್ ಲಾಲ್ ಜಾಟ್, ಪ್ರಭಾ ಮೆಮೋರಿಯಲ್ ಪಿಜಿ ಕಾಲೇಜಿನೊಂದಿಗೆ ಸಂಪರ್ಕ ಹೊಂದಿರುವ ರಾಮಕೃಷ್ಣ ಮಂಡಿವಾಲ್ ಮತ್ತು ಕಾಲೇಜಿನ ಆಡಳಿತಾಧಿಕಾರಿ ದೇವಕೃಷ್ಣ ಮಂಡಿವಾಲ್ ಎಂಬುವವರನ್ನು ಬಂಧಿಸಿದ್ದಾರೆಂದು ವರದಿಯಾಗಿದೆ.

ಜೈಪುರದ ಪ್ರಭಾ ದೇವಿ ಮೆಮೋರಿಯಲ್ ಪಿಜಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ನಕಲು ಮಾಡಲು ಆರೋಪಿಗಳು ಸುಮಾರು 45 ಅಭ್ಯರ್ಥಿಗಳಿಂದ ಭಾರಿ ಮೊತ್ತದ ಹಣವನ್ನು ಸಂಗ್ರಹಿಸಿದ್ದಾರೆ ಎಂದು ವಿಚಾರಣೆಯಲ್ಲಿ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೊದಲ ವರ್ಷದಲ್ಲಿ ಪಾಸ್ ಆಗದೇ ಉಳಿದಿದ್ದ ಅಭ್ಯರ್ಥಿಗಳನ್ನು ಪಾಸ್ ಮಾಡಲು, ಆರೋಪಿಗಳು ಜೈಪುರ ಪರೀಕ್ಷಾ ಕೇಂದ್ರದೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು ಎಂದು ಆರೋಪಿಸಲಾಗಿದೆ. ಘಟನೆ ಬಳಿಕ ಪರೀಕ್ಷೆ ರದ್ದಾಗಿದ್ದು, ವಿದ್ಯಾರ್ಥಿಗಳು ಕಾಲೇಜಿನ ಪೀಠೋಪಕರಣ ಹಾಗೂ ಪ್ರಶ್ನೆ ಪತ್ರಿಕೆಗಳನ್ನು ಎಸೆದು ಪ್ರತಿಭಟಿಸಿದ್ದಾರೆ.

ಮೈಸೂರು ಮಿತ್ರ ಬುಧವಾರ 1 ಜುಲೈ 2026

ಬಲವಂತದ ಮತಾಂತರ, ಮಹಿಳಾ ದೌರ್ಜನ್ಯ ಖಂಡಿಸಿ

ಕುಶಾಲನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ



ಕುಶಾಲನಗರದಲ್ಲಿ ಮೆರವಣಿಗೆಯ ನಂತರ ನಡೆದ ಬೃಹತ್ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡಿರುವ ಸಾವಿರಾರು ಪ್ರತಿಭಟನಾಕಾರರು.

ಕುಶಾಲನಗರ: ಬಲವಂತದ ಮತಾಂತರ ಹಾಗೂ ಮಹಿಳಾ ದೌರ್ಜನ್ಯ ಖಂಡಿಸಿ ಹಾಗೂ ಧಾರ್ಮಿಕ ಅಸ್ಮಿತೆ ಉಳಿಸುವ ಉದ್ದೇಶದಿಂದ ಹಿಂದೂ ಸುರಕ್ಷಾ ಸಮಿತಿ ನೇತೃತ್ವದಲ್ಲಿ ವಿವಿಧ ಹಿಂದೂ ಸಂಘಟನೆಗಳ ಸಾವಿರಾರು ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಕಾವೇರಿ ನಿಸರ್ಗಧಾಮದಿಂದ ಬೃಹತ್ ಜಾಗೃತಿ ಜಾಥಾ ಆರಂಭವಾಯಿತು. ಹಿಂದೂ ಸುರಕ್ಷಾ ಸಮಿತಿ ಸಂಚಾಲಕ ಬಿ.ಅಮೃತ್ ರಾಜ್ ನೇತೃತ್ವದಲ್ಲಿ ಆರಂಭಗೊಂಡ ಜಾಥಾದಲ್ಲಿ ಸಹಸ್ರಾರು ಸಂಖ್ಯೆಯ ಹಿಂದೂ ಕಾರ್ಯಕರ್ತರು ಕೇಸರಿ ಶಾಲು ಹಾಕಿಕೊಂಡು ಕೇಸರಿ ಧ್ವಜ, ಭಗವದ್ ಧ್ವಜ ಹಿಡಿದು ಭಾಗವಹಿಸುವ ಮೂಲಕ ಗಮನ ಸೆಳೆದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ, ಎಂ.ಪಿ. ಅಪ್ಪಚ್ಚುರಂಜನ್ ಮುಖಂಡರಾದ ಎಂ.ವಿ. ವಿಜಯ್, ಬಿ.ಬಿ.ಭಾರತೀಶ್ ಮತ್ತಿತರರು ಮೆರವಣಿಗೆಯಲ್ಲಿ ಪಾಲ್ಗೊಂಡು ಕಾರ್ಯಕರ್ತರಿಗೆ ಹುರುಪು ತುಂಬಿದರು. ಜಾಥಾದಲ್ಲಿ ಜೈ ಶ್ರೀರಾಮ್', ಭಾರತ್ ಮಾತಾ ಕೀ ಜೈ' ಘೋಷಣೆಗಳು ಮುಗಿಲು ಮುಟ್ಟಿದವು.

ನಿಸರ್ಗಧಾಮದಿಂದ ಆರಂಭವಾದ ಜಾಥಾವು ಪಟ್ಟಣದ ಮುಖ್ಯರಸ್ತೆಯ ಮೂಲಕ ಗಣಪತಿ ದೇವಸ್ಥಾನದವರೆಗೆ ಸಾಗಿ, ಬಳಿಕ ಕಾರು ನಿಲ್ದಾಣದಲ್ಲಿ ಬೃಹತ್ ಪ್ರತಿಭಟನಾ ಸಭೆಯಾಗಿ ಪರಿವರ್ತನೆಗೊಂಡಿತು.

ಬೃಹತ್ ಬೆಂಬಲ: ಹಿಂದೂ ಜಾಗರಣ ವೇದಿಕೆ, ಬಜರಂಗದಳ, ವಿಶ್ವ ಹಿಂದೂ ಪರಿಷತ್, ವಿವಿಧ ಸಂಘಟನೆಗಳು ಸೇರಿದಂತೆ 20ಕ್ಕೂ ಹೆಚ್ಚು ಹಿಂದೂಪರ ಸಂಘಟನೆಗಳ ಕಾರ್ಯಕರ್ತರು, ಮಹಿಳೆಯರು, ಯುವಕರು ಜಾಥಾದಲ್ಲಿ ಪಾಲ್ಗೊಂಡಿದ್ದರು.

ನಿಸರ್ಗಧಾಮ ಟೂರಿಸ್ಟ್ ಸೆಂಟರ್ ಬಂದ್ ಮಾಡಿ ಎಲ್ಲಾ ಕಾರ್ಮಿಕರು ಜಾಥಾದಲ್ಲಿ ಪಾಲ್ಗೊಂಡು ಬೆಂಬಲ ಸೂಚಿಸಿದರು.

ಸ್ವಯಂಪ್ರೇರಿತ ಬಂದ್: ಜಾಗೃತಿ ಜಾಥಾದ ಹಿನ್ನೆಲೆಯಲ್ಲಿ ಅರ್ಧ ದಿನ ಪಟ್ಟಣದ ವರ್ತಕರು ಸ್ವಯಂಪ್ರೇರಣೆಯಿಂದ ಅಂಗಡಿ ಮುಂಗಟ್ಟುಗಳನ್ನು ಸಂಪೂರ್ಣ ಬಂದ್ ಮಾಡಿ ಬೆಂಬಲ ಸೂಚಿಸಿದ್ದರು.

ಬಿಗಿ ಬಂದೋಬಸ್ತ್: ಯಾವುದೇ ಅಹಿತಕರ ಘಟನೆ ನಡೆಯದಂತೆ ಜಿಲ್ಲಾ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಕೈಗೊಂಡಿತ್ತು. ಹೆಚ್ಚುವರಿ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿತ್ತು.

ನೀರು ವಿತರಣೆ: ಜಾಥಾದಲ್ಲಿ ಪಾಲ್ಗೊಂಡಿರುವ ಹಿಂದೂ ಕಾರ್ಯಕರ್ತರಿಗೆ ಎನ್ನಿಸಿ ಕೇಂದ್ರ ಕಾರ್ಯಕರ್ತರು ಕುಡಿಯುವ ನೀರಿನ ಬಾಟಲ್ ವಿತರಣೆ ಮಾಡಿದರು.

ಕಾರು ನಿಲ್ದಾಣದ ವೇದಿಕೆಯಲ್ಲಿ ನಡೆದ ಜಾಗೃತಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ, ಹಿಂದು ಜಾಗರಣ ವೇದಿಕೆ ದಕ್ಷಿಣ ಕರ್ನಾಟಕ ಪ್ರಾಂತ ಸಹ ಸಂಚಾಲಕರು ಸತೀಶ್ ದಾವಣಗೆರೆ, ಜಾತಿ, ಮತ, ಪಕ್ಷ, ಪ್ರಾಂತ ಬೇಧ ಮರೆತು ಹಿಂದೂಗಳು ಒಂದಾದರೆ ಮಾತ್ರ ಮತಾಂತರಕ್ಕೆ ಕಡಿವಾಣ ಹಾಕಬಹುದು. ಹಿಂದೂ ಸಮಾಜ ಉಳಿದಿರುವುದೇ ಮಹಿಳೆಯರಿಂದ ಪ್ರತಿ ಕುಟುಂಬದ ಹೆಣ್ಣು ಮಕ್ಕಳ ಬಗ್ಗೆ ಪೋಷಕರು ಜಾಗೃತಿ ವಹಿಸಬೇಕು. ಮಕ್ಕಳಿಗೆ ಭಗವದ್ಗೀತೆ, ರಾಮಾಯಣ, ದೇಶದ ಹಿರಿಮೆ ಹೇಳುವ ಕತೆ ಹೇಳಬೇಕು. 1995ರಲ್ಲೇ ಕೊಡಗಿನಲ್ಲಿ ಲವ್ ಜಿಹಾದ್ ಶುರುವಾಗಿದೆ. ವೀರ ಸೇನಾನಿಗಳ ನಾಡಿನಲ್ಲಿ ಇಂತಹ ಹುನ್ನಾರ ಹೇಗೆ ಶುರುವಾಯಿತು ಎನ್ನುವ ಬಗ್ಗೆ ಪ್ರತಿಯೊಬ್ಬರೂ ಚಿಂತಿಸಬೇಕು ಎಂದರು.

ಲವ್ ಜಿಹಾದ್ ಎಂಬುದು ಎಲ್ಲರೂ ಅಂದುಕೊಂಡಷ್ಟು ಸುಲಭ ಅಲ್ಲ. ನಾವೆಲ್ಲರೂ ಹಿಂದೂ, ನಾವೆಲ್ಲಾ ಒಂದು, ನಾವೆಲ್ಲಾ ಬಂಧು ಎಂಬ ಮನೋಭಾವ ಪ್ರತಿಯೊಬ್ಬರಲ್ಲೂ ಬರಬೇಕು ಎಂದರು.

ಈ ಸಂದರ್ಭ ಮುಖಂಡರಾದ ಚಿಲ್ಲನ ಗಣಿಪ್ರಸಾದ್, ವಸಂತ ರೈ, ಚಂದ್ರಶೇಖರ ಹೇರೂರು, ಜ್ಯೋತಿ ಕುದುಪಜೆ, ಪ್ರಶಾಂತ್, ಹಿಂದೂ ಜಾಗರಣ ವೇದಿಕೆ ಮಂಜುನಾಥ್ ಮತ್ತಿತರರು ಭಾಗವಹಿಸಿದ್ದರು.

ಭೂಮಿ ಖರೀದಿ ತಡೆಗೆ ಕಾನೂನು ಜಾರಿಗೆ ತರದಿದ್ದರೆ ಕೊಡಗಿನ ಮೂಲ ಸಂಸ್ಕೃತಿ ಮರೆ

ಕೊಡಗು-ಕಾವೇರಿ ಸಂರಕ್ಷಣಾ ವೇದಿಕೆ ಆತಂಕ



ಸುದ್ದಿಗೋಷ್ಠಿಯಲ್ಲಿ ನಿವೃತ್ತ ಕರ್ನಲ್ ಸಿ.ಪಿ. ಮುತ್ತಣ್ಣ ಮಾತನಾಡಿದರು.

ಮಡಿಕೇರಿ, ಜೂ.30– ಕೊಡಗಿನಲ್ಲಿ ಹೊರ ಭಾಗದವರು ಭೂಮಿ ಖರೀದಿಸುವುದನ್ನು ತಡೆಯಲು ಹೊಸ ಕಾನೂನು ಜಾರಿಗೆ ಸರಕಾರ ಮುಂದಾಗಬೇಕು. ಇಲ್ಲವಾದಲ್ಲಿ ಮುಂದಿನ 10 ವರ್ಷಗಳಲ್ಲಿ ಕೊಡಗು ಜಿಲ್ಲೆಯ ಭೌಗೋಳಿಕ ಚಿತ್ರಣ ಬದಲಾಗುವುದರ ಜೊತೆಗೆ ಇಲ್ಲಿನ ಮೂಲ ಸಂಸ್ಕೃತಿಯೇ ಮರೆಯಾಗಲಿದೆ ಎಂದು ಕೊಡಗು ಹಾಗೂ ಕಾವೇರಿ ಸಂರಕ್ಷಣಾ ವೇದಿಕೆ ಆತಂಕ ವ್ಯಕ್ತಪಡಿಸಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೊಡಗು ಹಾಗೂ ಕಾವೇರಿ ಸಂರಕ್ಷಣಾ ವೇದಿಕೆ ಸಂಚಾಲಕ ನಿವೃತ್ತ ಕರ್ನಲ್ ಸಿ.ಪಿ. ಮುತ್ತಣ್ಣ, ಇತ್ತೀಚೆಗೆ ಬಲ್ಲಮಾವಟ್ಟಿ ಗ್ರಾಮದ ಶ್ರೀ 'ಇಗ್ಗುತ್ತಪ್ಪ ದೇವಸ್ಥಾನದ ಬಳಿಯ ಮಲ್ಲ ಕುಂದ್'ನಲ್ಲಿ ಜಿಲ್ಲೆಯ ಹೊರ ಭಾಗದ ವ್ಯಕ್ತಿಯೊಬ್ಬರು ದೊಡ್ಡ ಪ್ರಮಾಣದ ಭೂಮಿಯನ್ನು ಖರೀದಿಸಿದ್ದಾರೆ. ಈ ಬೆಟ್ಟ ಪವಿತ್ರ ನೆಲೆಯಾಗಿದ್ದು, ಅಲ್ಲಿ ಕಾಮಗಾರಿ ನಡೆಸುವ ಸಂದರ್ಭ ವಿರೋಧಗಳು ವ್ಯಕ್ತವಾಗಿದೆ. ಬಳಿಕ ಭೂಮಿಯಲ್ಲಿ ಪ್ರಸ್ತುತ ಸ್ಥಳದಲ್ಲಿ ಯಾವುದೇ ಕಾಮಗಾರಿಗಳಲ್ಲಿ ತೊಡಗುವುದಿಲ್ಲ ಎಂದು ಭೂಮಿ ಖರೀದಿದಾರರು ಭರವಸೆ ನೀಡಿದ್ದಾರೆ. ಆದರೆ ಮುಂದಿನ ದಿನಗಳಲ್ಲಿ ಹೊರ ರಾಜ್ಯದ ಮಂದಿ ಜಿಲ್ಲೆಯ ದೇವರಕಾಡು, ಸಹಿತ ಪವಿತ್ರ ಸ್ಥಳಗಳನ್ನು ಖರೀದಿಸಿ ಇಂತಹ ಕಾಮಗಾರಿ ನಡೆಸುವ ಆತಂಕವಿದೆ ಎಂದು ಆತಂಕ ವ್ಯಕ್ತಪಡಿಸಿದರು. ಸೋಮವಾರಪೇಟೆ ತಾಲೂಕಿನ ಹಮ್ಮಿಯಾಲ ವ್ಯಾಪ್ತಿಯಲ್ಲಿ ಪಂಜಾಬ್, ಹರಿಯಾಣ ಮೂಲದವರು ಜಾಗ ಖರೀದಿ ಮಾಡಿದ್ದಾರೆ. ಇದರಿಂದ ಇಲ್ಲಿನ ಜನರ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ಬರಲಿದೆ ಎಂದು ಹೇಳಿದರು.


ಭೂ ಕಾನೂನು ಜಾರಿಗೆ ಆಗ್ರಹ: ಹೊರಗಿನವರು ಭೂಮಿ ಖರೀದಿಸುವುದನ್ನು ತಡೆಯಲು ಮತ್ತು ಜಮ್ಮಾ ಅಲ್ಲದ ಮತ್ತು ಕೊಡಗಿನ ಸ್ಥಳೀಯ ಸಮುದಾಯಗಳಿಗೆ ಸೇರದ ಜನರಿಗೆ ಭೂಮಿ ಮಾರಾಟ ಮಾಡುವುದನ್ನು ತಡೆಯುವ ಕಾನೂನು ಜಾರಿ ಅತ್ಯಂತ ಅಗತ್ಯವಾಗಿದೆ. ಈ ಕುರಿತು ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ. ಮಂತರ್ ಗೌಡ ಸಂಸದರಾದ ಯದುವೀರ್ ಅವರುಗಳು ತುರ್ತು ಕ್ರಮ ಕೈಗೊಳ್ಳಬೇಕು. ದೇಶದ ಈಶಾನ್ಯ ರಾಜ್ಯಗಳಾದ ಮಿಜೋರಾಂ, ನಾಗಾಲ್ಯಾಂಡ್, ಮಣಿಪುರ, ತ್ರಿಪುರ ಮತ್ತು ಅರುಣಾಚಲ ಪ್ರದೇಶ, ಹಿಮಾಲಯ ಪ್ರದೇಶ, ಉತ್ತರಾಖಂಡದ ಹಲವಾರು ಜಿಲ್ಲೆಗಳಲ್ಲಿ ಇಂತಹ ಕಾನೂನು ಜಾರಿಯಲ್ಲಿದೆ. ರಾಜ್ಯ ಸರಕಾರ ಕೂಡ ಕೊಡಗಿಗೂ ಇಂತಹ ಕಾನೂನು ಜಾರಿಗೆ ತರಲು ಮುಂದಾಗಬೇಕು ಎಂದು ಆಗ್ರಹಿಸಿದರು. ಈಗಾಗಲೇ ಜಿಲ್ಲೆಯ ಬೃಹತ್ ಹೋಂಸ್ಟೇಗಳು, ರೆಸಾರ್ಟ್‌ಗಳು ಹೊರ ಭಾಗದವರ ಮಾಲೀಕತ್ವದಲ್ಲಿದೆ. ಇದರಿಂದ ಜಿಲ್ಲೆಯ ಮೂಲ ಸಂಸ್ಕೃತಿ ಮರೆಯಾಗುತ್ತಿದೆ. ಕೊಡಗು ಮತ್ತು ಕಾವೇರಿ ನದಿಯನ್ನು ರಕ್ಷಿಸಲು ಜಮ್ಮಾ ಹೊಂದಿರುವವರು ಮತ್ತು ಸ್ಥಳೀಯ ಸಮುದಾಯಗಳ ಜನರೊಂದಿಗೆ ಮಾತ್ರ ಭೂಮಿ ವ್ಯವಹಾರ ನಡೆಸಬೇಕೆಂದು ಅವರು ಮನವಿ ಮಾಡಿದರು.

ಜಿಲ್ಲಾಡಳಿತ ಗಮನಿಸಲಿ: ಕೊಡಗು ಗುಡ್ಡಗಾಡು ಪ್ರದೇಶವಾಗಿದ್ದು ಇಲ್ಲಿ ಪ್ರತ್ಯೇಕ ಸಂಸ್ಕೃತಿ, ಪದ್ಧತಿ, ಆಚಾರ ವಿಚಾರಗಳಿವೆ. ಜಮ್ಮಾ ಭೂಮಿ ಉಳಿವಿಗಾಗಿಯೇ 'ಜಮ್ಮಾ ಹಿಡುವಳಿ' ನೀಡಲಾಗಿದೆ. 1966ರ ಭೂಕಂದಾಯ ದಾಖಲೆಗಳ ಪ್ರಕಾರ ಮಲ್ಮ ಕುಂದ್ ಪ್ರದೇಶವನ್ನು 'ಜಮ್ಮಾ ಮಲೆ' ಎಂದು ಉಲ್ಲೇಖಿಸಲಾಗಿದೆ. ಆ ಭೂಮಿಯ ದಾಖಲೆಗಳನ್ನು ಬದಲಾವಣೆ ಮಾಡಿ ಆರ್‌ಟಿಸಿ ದಾಖಲಾತಿ ತಿದ್ದುಪಡಿ ಮಾಡುವ ಮೂಲಕ ಜಾಗ ಮಾರಾಟ ಮಾಡಿ ಕಾನೂನು ಉಲ್ಲಂಘನೆ ಮಾಡಲಾಗಿದೆ. ಈ ವಿಚಾರವನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಬೇಕು ಎಂದು ಕನ್ನಿ ಕಾವೇರಿ ಸೇವಾ ಟ್ರಸ್ಟ್ ಕಾರ್ಯದರ್ಶಿ ಮಲ್ಚೀರ ಶಾನ್ ಬೋಪಯ್ಯ ಆಗ್ರಹಿಸಿದರು.

ಈಗಾಗಲೇ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯಾಗದೇ ಪರಿಸ್ಥಿತಿ ಹದಗೆಟ್ಟಿದೆ. ಇದರಿಂದ ಕರ್ನಾಟಕ ಮಾತ್ರವಲ್ಲದೇ ಕೇರಳ, ತಮಿಳುನಾಡು ರಾಜ್ಯಗಳು ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಪರಿತಪಿಸುವ ಪರಿಸ್ಥಿತಿ ಎದುರಾಗುತ್ತದೆ. ತಕ್ಷಣವೇ ಸರಕಾರ ಕೊಡಗಿನಲ್ಲಿ ಭೂಮಿ ಖರೀದಿ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಹೊಸ ಕಾನೂನು ರೂಪಿಸುವ ಅಗತ್ಯವಿದೆ. ಇದಕ್ಕೆ ಕೊಡಗು ಜಿಲ್ಲೆಯ ಎಲ್ಲಾ ಮೂಲ ನಿವಾಸಿಗಳು ಬೆಂಬಲ ಸೂಚಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆ ಸದಸ್ಯ ರಾಯ್ ಬೋಪಣ್ಣ, ಪುಚ್ಚಿಮಂಡ ಅಪ್ಪಯ್ಯ, ಸಿ.ಕೆ.ಬೋಪಯ್ಯ ಉಪಸ್ಥಿತರಿದ್ದರು.

ಟಿಪ್ಪರ್ ಹರಿದು ಪಾದಚಾರಿ ಸಾವು



ವಿರಾಜಪೇಟೆ, ಜೂ.30– ಟಿಪ್ಪರ್ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಪಾದಚಾರಿ ಸಾವನ್ನಪ್ಪಿರುವ ಘಟನೆ ವಿರಾಜಪೇಟೆ ನಗರ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ವಿರಾಜಪೇಟೆಯ ಕೆ.ಬೋಯಿಕೇರಿ ಗ್ರಾಮದ ನಿವಾಸಿ ವಿಜೇಂದ್ರ (52) ದುರಂತದಲ್ಲಿ ಸಾವನ್ನಪ್ಪಿರುವವರು. ಸಂಜೆ ಚಿಕ್ಕಪೇಟೆ ಕಡೆಯಿಂದ ಕೆ.ಬೋಯಿಕೇರಿ ಮುಖ್ಯ ರಸ್ತೆಯಲ್ಲಿ ತೂರಾಡುತ್ತ ನಡೆದು ಹೋಗುತ್ತಿದ್ದ ಸಂದರ್ಭ ಚಾಲಕ ಇದನ್ನು ತಪ್ಪಿಸಲು ಸಾಕಷ್ಟು ಪ್ರಯತ್ನಿಸಿದ್ದಾರೆ. ಅಗ ವಿಜೇಂದ್ರ ಆಯತಪ್ಪಿ ಕೆಳಗೆ ಬಿದ್ದಿದ್ದಾರೆ. ಈ ವೇಳೆ ಟಿಪ್ಪರ್ ಲಾರಿ ತಲೆಯ ಮೇಲೆ ಹರಿದು ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ವಿರಾಜಪೇಟೆ ನಗರ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಬಳಿಕ ಮೃತ ವಿಜೇಂದ್ರ ತಂಗಿ ಪ್ರೇಮ ಅವರು ನೀಡಿದ ದೂರನ್ನು ಆದರಿಸಿ ಠಾಣಾಧಿಕಾರಿ ಪ್ರಮೋದ್ ಕುಮಾರ್ ಅವರು ಪ್ರಕರಣ ದಾಖಲಿಸಿಕೊಂಡು ಟಿಪ್ಪರ್ ವಶಪಡಿಸಿಕೊಂಡು ಚಾಲಕನನ್ನು ಬಂಧಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮೃತ ದೇಹವನ್ನು ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ಶವಗಾರದಲ್ಲಿರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾವೇರಿ ನದಿ ತೀರದಲ್ಲಿ ಕಾವೇರಿ ಆರತಿ



ಮಡಿಕೇರಿ, ಜೂ.30– ಹುಣ್ಣಿಮೆಯ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಭಾಗಮಂಡಲ ವಲಯದ ವತಿಯಿಂದ ನಾಪೋಕ್ಲುವಿನಲ್ಲಿ ಜೀವನದಿ ಕಾವೇರಿಗೆ 26ನೇ ಮಹಾ ಆರತಿಯನ್ನು ಅರ್ಪಿಸಲಾಯಿತು. ನಾಪೋಕ್ಲು ಸಮೀಪದ ಕೊಟ್ಟಮುಡಿ ಸೇತುವೆ ಬಳಿ ಕಾವೇರಿ ನದಿ ತಟದಲ್ಲಿ ಆರತಿ ಬೆಳಗಿ ಉತ್ತಮ ಮಳೆ, ಬೆಳೆಗಾಗಿ ಪ್ರಾರ್ಥನೆ ಸಲ್ಲಿಸಲಾಯಿತು.

ಧರ್ಮಸ್ಥಳ ಸಂಘದ ಮೇಲ್ವಿಚಾರಕ ಸಂತೋಷ್ ಮಾತನಾಡಿ, ಪವಿತ್ರ ನದಿ ಕಾವೇರಿಯ ಸ್ವಚ್ಛತೆಯನ್ನು ಕಾಪಾಡಿ ಸಂರಕ್ಷಿಸುವುದು ನಮ್ಮೆಲ್ಲರ ಹೊಣೆಯಾಗಿದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಾವೇರಿ ನದಿಗೆ ಆರತಿ ಬೆಳಗುವ ಕಾರ್ಯಕ್ರಮವನ್ನು ಆಯೋಜಿಸುತ್ತಾ ಜನರಿಗೆ ನದಿಯ ಸ್ವಚ್ಛತೆಯ ಅರಿವು ಮೂಡಿಸುತ್ತಾ ಬಂದಿದ್ದೇವೆ. ಸಾರ್ವಜನಿಕರು ಕೂಡ ತಮ್ಮ ವ್ಯಾಪ್ತಿಯಲ್ಲಿರುವ ನದಿ ಮೂಲಗಳಿಗೆ ತ್ಯಾಜ್ಯಗಳನ್ನು ಸುರಿಯದೆ ಅದರ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಧರ್ಮಸ್ಥಳ ಸಂಘದ ನಾಪೋಕ್ಲು ಒಕ್ಕೂಟದ ಸೇವಾ ಪ್ರತಿನಿಧಿ ಉಮಾ ಲಕ್ಷ್ಮಿ, ಸಂಘದ ಸದಸ್ಯರಾದ ದಿಲೀಶ್, ಶಂಕರ, ಮಾಯಿಲಪ್ಪ, ರಮ್ಯ, ಪ್ರಾರ್ಥನ್, ರಶ್ಮಿ, ವಿಕಾಸ್, ಕೃಷ್ಣ, ಸುರೇಶ್ ಇದ್ದರು.

ಜು.3ರಂದು ಮಡಿಕೇರಿ ಉಪಲೋಕಾಯುಕ್ತರ ಭೇಟಿ

ಮಡಿಕೇರಿ ಜೂ.30– ಗೌರವಾನ್ವಿತ ನ್ಯಾಯಮೂರ್ತಿ ಹಾಗೂ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ಅವರು ಜು.3ರಂದು ಮಡಿಕೇರಿಗೆ ಪ್ರವಾಸ ಕಾರ್ಯಕ್ರಮ ಕೈಗೊಂಡಿದ್ದಾರೆ.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜು.3 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.30 ಗಂಟೆವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 5.30 ಗಂಟೆವರೆಗೆ ಕೊಡಗು ಜಿಲ್ಲೆಗೆ ಸಂಬಂಧಪಟ್ಟಂತೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದ ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ಕಾನೂನು ರೀತ್ಯಾ ವಿಚಾರಣೆ ನಡೆಸಲಿದ್ದಾರೆ.

ಚಾ.ನಗರದಲ್ಲಿ ಕೆಂಪೇಗೌಡ ಜಯಂತಿ ಆಚರಣೆ

ನಾಡಪ್ರಭು ಕೆಂಪೇಗೌಡರ ಜನಪರ ಆಡಳಿತ ಇಂದಿಗೂ ಮಾದರಿಯಾಗಿದೆ: ಶಾಸಕ ಸಿ.ಪುಟ್ಟರಂಗಶೆಟ್ಟಿ



ಚಾಮರಾಜನಗರದಲ್ಲಿ ಕೆಂಪೇಗೌಡ ಜಯಂತಿಯನ್ನು ಶಾಸಕ ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಚಾಮರಾಜನಗರ, ಜೂ.30– ನವ ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಅವರ ಜನಪರ ಆಡಳಿತ ಇಂದಿಗೂ ಮಾದರಿಯಾಗಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು

ನಗರದ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ನಾಡಪ್ರಭು ಶ್ರೀ ಕೆಂಪೇಗೌಡ ಅವರ 517ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇಡೀ ವಿಶ್ವದಲ್ಲೇ ಪ್ರಸಿದ್ಧಿಯಾಗಿರುವ ಬೆಂಗಳೂರು ಕೆಂಪೇಗೌಡ ಅವರ ಕನಸಿನ ನಗರವಾಗಿದೆ. ಆಗಿನ ಕಾಲದಲ್ಲಿ ಅತ್ಯಂತ ಸುಭಿಕ್ಷತೆಯಿಂದ ಕೂಡಿದ್ದ ವಿಜಯನಗರ ಸಾಮ್ರಾಜ್ಯದ ಮಾದರಿಯಲ್ಲಿ ಬೆಂಗಳೂರನ್ನು ಕಟ್ಟುವ ಕನಸು ಕಂಡು ಎಲ್ಲಾ ವರ್ಗಗಳ ಜನರಿಗೂ ಅವರವರ ಕುಲಕಸುಬಿಗೆ ಅನುಗುಣವಾಗಿ ಸಮಾನ ಅವಕಾಶಗಳನ್ನು ಕಲ್ಪಿಸಿಕೊಟ್ಟ ಕೆಂಪೇಗೌಡರ ಜನಪರ ಆಡಳಿತ ಇಂದಿಗೂ ಮಾದರಿಯಾಗಿದೆ ಎಂದರು.

ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ, ಅಭಿವೃದ್ಧಿಗೆ ಅನೇಕ ದೂರದೃಷ್ಟಿ ಯೋಜನೆಗಳನ್ನು ಅನುಷ್ಠಾನ ಮಾಡಿದ ಕೆಂಪೇಗೌಡರ ಬೆಂಗಳೂರು ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಪ್ರೇರಣಾಶಕ್ತಿಯಾಗಿದೆ. ಸಮಾನ ನೀರು ಹಂಚಿಕೆ ಯೋಜನೆ ಇಂದಿಗೂ ಪ್ರಸ್ತುತವಾಗಿದೆ. ಅವರ ಜೀವನ ಆದರ್ಶಗಳನ್ನು ನಾವೆಲ್ಲರೂ ಸ್ಮರಿಸಬೇಕಾಗಿದೆ ಎಂದು ತಿಳಿಸಿದರು.

ಕಾಡಾ ಅಧ್ಯಕ್ಷರಾದ ಪಿ.ಮರಿಸ್ವಾಮಿ ಅವರು ಮಾತನಾಡಿ ಕೆಂಪೇಗೌಡ ಅವರು ಚಿಕ್ಕ ವಯಸ್ಸಿನಲ್ಲಿಯೇ 64 ವಿದ್ಯೆಗಳನ್ನು ಕರಗತ ಮಾಡಿಕೊಂಡ ಪರಾಕ್ರಮಯಾಗಿದ್ದರು. ವಿಜಯನಗರ ಸಾಮಂತ ರಾಜರಾಗಿದ್ದ ಕೆಂಪೇಗೌಡ ಅಲ್ಲಿನ ವೈಭವವನ್ನು ಕಂಡು ಅಂತಹುದೇ ಸಮೃದ್ಧ ನಾಡು ಕಟ್ಟುವ ಇರಾದೆ ಹೊಂದಿದ್ದರು. ಅಭಿವೃದ್ಧಿಪರ ಆರ್ಥಿಕ ನೀತಿ ಜಾರಿ ಮಾಡಿದ್ದ ಕೆಂಪೇಗೌಡ ಅವರು ಕುಡಿಯುವ ನೀರು ಹಾಗೂ ವ್ಯವಸಾಯಕ್ಕೆ ಅನುಕೂಲವಾಗುವಂತೆ ಕೆರೆ–ಕಟ್ಟೆ ಕಟ್ಟಿಸಿ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ಬೆಂಗಳೂರು ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ ಎಂದರು.

ಜಿಲ್ಲಾಧಿಕಾರಿ ಶ್ರೀರೂಪ ಮಾತನಾಡಿ, ಅತ್ಯಂತ ವ್ಯವಸ್ಥಿತವಾಗಿ ಆಧುನಿಕ ಮಾದರಿಯಲ್ಲಿ ನಗರ ನಿರ್ಮಾಣ ಮಾಡುವಲ್ಲಿ ಕೇಂಪೇಗೌಡ ಅವರು ಅವಿಸ್ಮರಣೀಯ ವ್ಯಕ್ತಿಯಾಗಿದ್ದಾರೆ. ಯಾವುದೇ ಜಾತಿ, ಭೇದ ವಿಲ್ಲದೇ ಧರ್ಮಸಹಿಷ್ಣು ಆಡಳಿತ ನೀಡಿ ಎಲ್ಲರಿಗೂ ಸಮಾನವಕಾಶ ಕಲ್ಪಿಸಿದ್ದರು. ಅವರ ಆಡಳಿತ ನಮ್ಮೆಲ್ಲರಿಗೂ ಮಾದರಿಯಾಗಿದೆ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷರಾದ ಎಚ್.ವಿ. ಚಂದ್ರು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು ಹಾಗೂ ಸಮಾಜದ ಮುಖಂಡರಾದ ಪುಟ್ಟಸ್ವಾಮಿಗೌಡ ಅವರು ಮಾತನಾಡಿ ನಾಡಪ್ರಭು ಕೆಂಪೇಗೌಡರ ಜೀವನ ಸಾಧನೆಗಳನ್ನು ಸ್ಮರಿಸಿದರು.

ಇದೇ ವೇಳೆ ನಾಡಪ್ರಭು ಕೆಂಪೇಗೌಡರ ಕುರಿತು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದ್ದ ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಗೌರವಿಸಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ರಾಜು, ಮೈಸೂರಿನ ಸಾಹಿತಿಗಳಾದ ಟಿ.ಸತೀಶ್ ಜವರೇ ಗೌಡ, ಚಿನ್ನಮುತ್ತು, ಪಣ್ಯದಹುಂಡಿ ರಾಜು, ಸೋಮಶೇಖರ್, ನಾಗೇಂದ್ರ, ಮಹೇಶ್ ಗೌಡ, ಚಿನ್ನತಾಯಮ್ಮ, ಚಾ.ರಂ. ಶ್ರೀನಿವಾಸ ಗೌಡ ಉಪಸ್ಥಿತರಿದ್ದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ



ಹಸಿರು ಸೇನೆ ವತಿಯಿಂದ ಯಳಂದೂರಿನಲ್ಲಿ ಪ್ರತಿಭಟನೆ ನಡೆಯಿತು.

ಯಳಂದೂರು ಜೂ.30– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಯಿತು.

ಪಟ್ಟಣದ ನಾಡಮೇಗಲಮ್ಮ ದೇವಸ್ಥಾನದ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆಯಲ್ಲಿ ಬಸ್ ನಿಲ್ದಾಣ, ಕೆ.ಕೆ ರಸ್ತೆ ಮೂಲಕ ತಾಲೂಕು ಕಚೇರಿಗೆ ತೆರಳಿ ಪ್ರತಿಭಟನೆ ನಡೆಸಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಯಳಂದೂರು ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು. ತಾಲೂಕಿನಲ್ಲಿರುವ ಕೆರೆಗಳ ಹೂಳು ತೆಗೆದು ಮಳೆ ನೀರು ಸಂಗ್ರಹಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಅಕ್ರಮ ಗಣಿಗಾರಿಕೆಯನ್ನು ಸಂಪೂರ್ಣವಾಗಿ ತಡೆಗಟ್ಟಬೇಕು ಎಂದು ಒತ್ತಾಯಿಸಿದರು. ಅಲ್ಲದೆ ಬಿಆರ್‌ಟಿ ವ್ಯಾಪ್ತಿಯಲ್ಲಿನ ಅಕ್ರಮ ರೆಸಾರ್ಟ್‌ಗಳನ್ನು ತೆರವುಗೊಳಿಸಬೇಕು. ಸಫಾರಿ ಹಾಗೂ ರೆಸಾರ್ಟ್‌ಗಳಿಗೆ ಸಂಬಂಧಿಸಿದ ಅಕ್ರಮ ಚಟುವಟಿಕೆಗಳನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ತಾಲೂಕಿನಲ್ಲಿ ವಿದ್ಯುತ್ ಸರಬರಾಜಿನಲ್ಲಿ ಆಗುತ್ತಿರುವ ಏರಿಳಿತವನ್ನು ಸರಿಪಡಿಸಿ, ಸಡಿಲವಾಗಿರುವ ವಿದ್ಯುತ್ ತಂತಿಗಳು ಹಾಗೂ ಜೋತುಬಿದ್ದ ವಿದ್ಯುತ್ ವ್ಯವಸ್ಥೆಯನ್ನು ತಕ್ಷಣ ದುರಸ್ತಿಗೊಳಿಸುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಅಧ್ಯಕ್ಷೀಯ ಮಂಡಳಿ ಸದಸ್ಯ ಹೊನ್ನೂರು ಪ್ರಕಾಶ್ ಇದ್ದರು.

ಜು.16ರಿಂದ ರಾಷ್ಟ್ರೀಯ ಸಮ್ಮೇಳನ

ಚಾಮರಾಜನಗರ, ಜೂ.30– ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಎಕ್ಸ್‌ಪ್ಲೋರಿಂಗ್ ನೇಚರ್ಸ್ ಫಾರ್ಮಸಿ : ಪೊಟೆಂಶಿಯಲ್ಸ್ ಆಫ್ ಮೆಡಿಸಿನಲ್ ಅಂಡ್ ಆರೊಮೆಟಿಕ್ ಪ್ಲಾಂಟ್ಸ್ ಫಾರ್ ಹೆಲ್ತ್, ಲವ್ಲಿಹುಡ್ಸ್, ಬಯೋ ಎಕಾನಾಮಿ ಅಂಡ್ ಕನ್ಸರ್‌ವೇಶನ್ ವಿಷಯ ಕುರಿತು ಜು.16ರಿಂದ 18ರವರೆಗೆ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಬೆಂಗಳೂರಿನ ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಲಾಗಿದೆ. ಈ ಸಮ್ಮೇಳನದ ಕೇಂದ್ರ ವಿಷಯದ ಮೇಲೆ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸಗಳನ್ನು ನೀಡಲಿದ್ದಾರೆ.

ಸಮ್ಮೇಳನದಲ್ಲಿ ಸ್ನಾತಕೋತ್ತರ ವಿಜ್ಞಾನ, ಆಯುರ್ವೇದ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಯುವ ವಿಜ್ಞಾನಿಗಳು ಭಾಗವಹಿಸಬಹುದಾಗಿದೆ. ಯುವ ವಿಜ್ಞಾನಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ತಮ್ಮ ಸಂಶೋಧನಾ ಪ್ರಬಂಧವನ್ನು (ರಿಸರ್ಚ್ ಪೇಪರ್) ಸಹ ಮಂಡಿಸಲು ಅವಕಾಶ ಕಲ್ಪಿಸಲಾಗಿದೆ.

ಕೈಗಾರಿಕಾ ಪ್ರದೇಶದಲ್ಲಿ ಎಸ್‌ಐಆರ್ ಕುರಿತು ಜಾಗೃತಿ



ವಿಶೇಷ ಸಮಗ್ರ ಪರಿಷ್ಕರಣೆ ಜಾಗೃತಿ ಕಾರ್ಯಕ್ರಮ ನಡೆಯಿತು.

ಚಾಮರಾಜನಗರ, ಜೂ.30– ತಾಲೂಕಿನ ಬದನಗುಪ್ಪೆ–ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಇಂದು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಜಾಗೃತಿ ಕಾರ್ಯಕ್ರಮ ನಡೆಯಿತು.

ಬದನಗುಪ್ಪೆ–ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಗಾರ್ಮೆಂಟ್ಸ್, ಕಾರ್ಖಾನೆ, ಸಣ್ಣ ಮತ್ತು ಕಿರು ಉದ್ದಿಮೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಹಾಗೂ ಮಾಲೀಕರಿಗೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್ ಅವರ ನೇತೃತ್ವದಲ್ಲಿ ಅರಿವು ಮೂಡಿಸಲಾಯಿತು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರೂ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಉತ್ತೇಜಿಸಲಾಯಿತು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಇಂದಿನಿಂದ ಜುಲೈ 29 ರವರೆಗೆ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಮನೆ ಮನೆಗೆ ಭೇಟಿ ನೀಡಲಿದ್ದಾರೆ. ಪ್ರತಿ ಮತದಾರರಿಗೆ ಗಣತಿ ನಮೂನೆ (ಎನ್ಯುಮಿರೇಶನ್ ಫಾರ್ಮ್) ವಿತರಿಸಲಿದ್ದಾರೆ. ಇದನ್ನು ಭರ್ತಿ ಮಾಡಿ ನೀಡಬೇಕು ಎಂದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಪ್ರಕ್ರಿಯೆ ಕುರಿತು ವೇಳಾಪಟ್ಟಿಯ ಅಂಶಗಳ ಬಗ್ಗೆ ಅರಿವು ಮೂಡಿಸುವ ಭಿತ್ತಿ ಫಲಕಗಳನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು.


ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಜಿಲ್ಲಾ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ದೊರೈರಾಜು, ಸಹಾಯಕ ನಿರ್ದೇಶಕರಾದ ವಿಜಯ್‌ಕುಮಾರ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ಜಾಗೃತಿ

ಚಾಮರಾಜನಗರ, ಜೂ.30– ಜಿಲ್ಲಾ ಪೊಲೀಸ್ ಇಲಾಖೆಯ ವತಿಯಿಂದ ಮಂಗಳವಾರ ಪಟ್ಟಣದ ಬ್ರೈಟ್ ವಿದ್ಯಾಸಂಸ್ಥೆಯಲ್ಲಿ "ಮಾದಕ ವಸ್ತುಗಳ ದುರುಪಯೋಗ ಮತ್ತು ಅಕ್ರಮ ಸಾಗಾಣಿಕೆ ವಿರೋಧಿ ಅಂತಾರಾಷ್ಟ್ರೀಯ ದಿನ–2026" ಅಂಗವಾಗಿ ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ದುಷ್ಪರಿಣಾಮ, ವ್ಯಸನದಿಂದ ಉಂಟಾಗುವ ಆರೋಗ್ಯ ಹಾಗೂ ಸಾಮಾಜಿಕ ಸಮಸ್ಯೆಗಳು, ಅಕ್ರಮ ಮಾದಕ ವಸ್ತುಗಳ ಸಾಗಾಣಿಕೆಯನ್ನು ತಡೆಗಟ್ಟುವಲ್ಲಿ ಸಾರ್ವಜನಿಕರ ಪಾತ್ರ ಸೇರಿದಂತೆ ವಿವಿಧ ವಿಷಯಗಳ ಕುರಿತು ಅರಿವು ಮೂಡಿಸಲಾಯಿತು.

ವಿದ್ಯಾರ್ಥಿಗಳು ಮಾದಕ ವ್ಯಸನದಿಂದ ದೂರವಿದ್ದು, ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು. ಮಾದಕ ವಸ್ತುಗಳ ಮಾರಾಟ ಅಥವಾ ಬಳಕೆ ಕುರಿತು ಮಾಹಿತಿ ದೊರೆತಲ್ಲಿ ತಕ್ಷಣ ಪೊಲೀಸ್ ಇಲಾಖೆಗೆ ತಿಳಿಸುವಂತೆ ಅಧಿಕಾರಿಗಳು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ಇಲಾಖೆಯ ಅಧಿಕಾರಿಗಳು, ಬ್ರೈಟ್ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

'ಕಾವೇರಿ'2.0 ಪೇಪರ್‌ಲೆಸ್ ನೋಂದಣಿಯಲ್ಲಿ ಲೋಪದೋಷ



ಸುದ್ದಿಗೋಷ್ಠಿಯಲ್ಲಿ ಧರ್ಮರಾಜ್ ವಿ.ಏಕಬೋಟೆ ಮಾತನಾಡಿದರು.

ಚಾಮರಾಜನಗರ, ಜೂ.30– ಕಂದಾಯ ಇಲಾಖೆಯಿಂದ 'ಕಾವೇರಿ' 2.0 ತಂತ್ರಾಂಶದ ಮೂಲಕ ಜಾರಿಗೊಂಡಿರುವ ಪೇಪರ್‌ಲೆಸ್ ಡಿಜಿಟಲ್ ನೋಂದಣಿ ವ್ಯವಸ್ಥೆ ಹಲವು ಲೋಪದೋಷಗಳಿಂದ ಕೂಡಿದ್ದು, ಆಸ್ತಿ ಮಾರಾಟಗಾರರು ಹಾಗೂ ಖರೀದಿದಾರರಿಗೆ ಅನೂಕೂಲವಾಗುವ ಹಾಗೇ ಇದನ್ನು ಸರ್ಕಾರ ಜಾರಿಗೆ ತರಬೇಕು ಎಂದು ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರವಾನಿಗೆ ಪಡೆದ (ದಸ್ತು) ಪತ್ರ ಬರಹಗಾರರ ಒಕ್ಕೂಟ ಆಗ್ರಹಿಸಿದೆ.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ಧರ್ಮರಾಜ್.ವಿ. ಏಕಬೋಟೆ, ಆಸ್ತಿ ನೋಂದಣಿಯ ಬಳಿಕ ದಾಖಲೆಗಳು ಕೇವಲ ಡಿಜಿಟಲ್ ಲಾಕರ್‌ನಲ್ಲಿ ಉಳಿಯುವುದರಿಂದ ವಾರಸುದಾರರಿಗೆ ಮಾಹಿತಿ ಲಭ್ಯವಾಗದೇ ಆಸ್ತಿ ವಿವಾದಗಳು ಉಂಟಾಗುವ ಸಾಧ್ಯತೆ ಇದೆ ಎಂದರು.

ನೋಂದಣಿ ವೇಳೆ ಭೌತಿಕ ಸಹಿಗೆ ಅವಕಾಶವಿಲ್ಲದಿರುವುದರಿಂದ ಹಿರಿಯ ನಾಗರೀಕರು, ರೈತರು ಹಾಗೂ ಅನಕ್ಷರಸ್ಥರು ವಂಚನೆಗೆ ಒಳಗಾಗುವ ಅಪಾಯ ಹೆಚ್ಚಾಗಿದೆ. ದಸ್ತಾವೇಜು ತಯಾರಿಸುವ ಪತ್ರ ಬರಹಗಾರರಿಗೆ ಭೌತಿಕ ಅಥವಾ ಡಿಜಿಟಲ್ ಸಹಿ ಮಾಡುವ ಅವಕಾಶವಿಲ್ಲದಿರುವುದರಿಂದ ಸಾರ್ವಜನಿಕರಿಗೆ ಅಗತ್ಯ ಕಾನೂನು ಮಾರ್ಗದರ್ಶನ ಸಿಗುತ್ತಿಲ್ಲ. ಬ್ಯಾಂಕ್‌ಗಳಲ್ಲಿ ದಾಖಲೆಗಳನ್ನು ಅಡಮಾನ ಇಟ್ಟು ಸಾಲ ಪಡೆಯುವ ಪ್ರಕ್ರಿಯೆಯ ಮೇಲೂ ಈ ವ್ಯವಸ್ಥೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಪೇಪರ್‌ಲೆಸ್ ವ್ಯವಸ್ಥೆಯಿಂದ ಭೂ ಮಾಫಿಯಾ ಹಾಗೂ ಸೈಬರ್ ವಂಚಕರಿಗೆ ಅನುಕೂಲವಾಗುವ ಸಾಧ್ಯತೆ ಇದೆ. ನೋಂದಣಿ ಪ್ರಕ್ರಿಯೆಯಲ್ಲಿ ಹಲವು ಬಾರಿ ಒಟಿಪಿ ಬಳಕೆ ಕಡ್ಡಾಯಗೊಳಿಸಿರುವುದರಿಂದ ಸಾರ್ವಜನಿಕರಲ್ಲಿ ಗೊಂದಲ ಮತ್ತು ಅಪನಂಬಿಕೆ ಉಂಟಾಗುತ್ತಿದೆ ಎಂದು ಆರೋಪಿಸಿದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಜೂ.30– ಕೊಳ್ಳೇಗಾಲ ತಾಲೂಕು ಸಮಾಜ ಕಲ್ಯಾಣ ಇಲಾಖೆಯಿಂದ 2026–27ನೇ ಸಾಲಿಗೆ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ರಾಜ್ಯ ವಿದ್ಯಾರ್ಥಿ ವೇತನದ ಪೋರ್ಟಲ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ವೆಬ್‌ಸೈಟ್ https://ssp.prematric.karnataka.gov.in ನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಜು.12 ಹಾಗೂ ವೆಬ್‌ಸೈಟ್ https://ssp.postmatric.karnataka.gov.in ನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಮಣಿಪಾಲ್ ಆಸ್ಪತ್ರೆಯಲ್ಲಿ ಒಂದೇ ತಿಂಗಳಲ್ಲಿ ಮೂವರಿಗೆ ಯಶಸ್ವಿ ಯಕೃತ್ ಕಸಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಣಿಪಾಲ್ ಆಸ್ಪತ್ರೆಯ ತಜ್ಞವೈದ್ಯ ಡಾ.ಜಯಂತ್ ರೆಡ್ಡಿ ಮಾತನಾಡಿದರು.

ಮೈಸೂರು, ಜೂ.30(ಜಿಎ) – ಮಣಿಪಾಲ್ ಆಸ್ಪತ್ರೆಗೆ ಅಂಗಾಂಗ ಕಸಿ ಅಳವಡಿಕೆ ಪರವಾನಗಿ ದೊರೆತ ಒಂದು ತಿಂಗಳಿನಲ್ಲಿ ಮೂವರು ರೋಗಿಗಳಿಗೆ ಯಶಸ್ವಿಯಾಗಿ ಯಕೃತ್ ಕಸಿ ಮಾಡಲಾಗಿದೆ ಎಂದು ಆಸ್ಪತ್ರೆಯ ತಜ್ಞ ವೈದ್ಯ ಡಾ.ಜಯಂತ್ ರೆಡ್ಡಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರ ಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಔಷಧಿ ಕೆಲಸ ಮಾಡದಿದ್ದಾಗ ಯಕೃತ್ ಕಸಿಯೊಂದೇ ರೋಗಿಯ ಜೀವ ಉಳಿಸಲು ಇರುವ ಮಾರ್ಗವಾಗಿದೆ. ಇದು ನಿಜಕ್ಕೂ ಸವಾಲಿನ ಕೆಲಸವಾಗಿದೆ. ತಮ್ಮ ಆಸ್ಪತ್ರೆಗೆ ಬಂದ ಮಧ್ಯ ವಯಸ್ಸಿನ ಓರ್ವ ರೋಗಿಗೆ ಆತನ ದೇಹದಲ್ಲಿನ ರೋಗ ನಿರೋಧಕ ವ್ಯವಸ್ಥೆ ಆತನ ದೇಹದ ಅಂಗಗಳ ಮೇಲೆ ಆಕ್ರಮಣ ನಡೆಸಿದ ಕಾರಣ ಯಕೃತ್ ಸಮಸ್ಯೆಯಿಂದ ಬಳಲುವಂತಾಗಿತ್ತು ಎಂದರು. ಇವರಿಗೆ ಅದೃಷ್ಟವೆಂಬಂತೆ ಓರ್ವ ದಾನಿ ಸಹ ಸಿಕ್ಕರು. ಹೀಗಾಗಿ ಮಿದುಳು ನಿಷ್ಕ್ರಿಯ ವೇಳೆ ಆತನ ಕುಟುಂಬದವರು ಅಂಗಾಂಗ ದಾನ ಮಾಡಲು ಸಮ್ಮತಿಸಿದ್ದ ಕಾರಣ ತಮ್ಮ ಆಸ್ಪತ್ರೆಗೆ ಬಂದಿದ್ದ ಈ ರೋಗಿಗೆ ಅನುಕೂಲವಾಯಿತು. ತಮ್ಮ ಆಸ್ಪತ್ರೆ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆಗೆ ಪರವಾನಗಿ ಪಡೆದಿರುವ ಕಾರಣ ಹಾಗೂ ಉತ್ತಮ ವೈದ್ಯಕೀಯ ತಂಡ ಇರುವುದರಿಂದಾಗಿ ಈ ಮೊದಲು ಬೆಂಗಳೂರು, ಚೆನ್ನೈ ಮೊದಲಾದ ಕಡೆಗಳಿಗೆ ಹೋಗಬೇಕಾಗಿದ್ದ ರೋಗಿಗಳಿಗೆ ಇದು ತಪ್ಪಿದಂತಾಗಿದೆ. ಸೂಕ್ತ ಚಿಕಿತ್ಸೆ ಇಲ್ಲಿಯೇ ದೊರಕುವಂತಾಗಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಡಾ.ಉಪೇಂದ್ರ ಶೆಣೈ, ಡಾ.ಆರ್. ನಿಶ್ಚಂತ್, ಡಾ.ಸತೀಶ್‌ರಾವ್, ಡಾ.ವಾಸುದೇವ್, ಆಸ್ಪತ್ರೆ ನಿರ್ದೇಶಕ ಸಂದೀಪ್ ಪಟೇಲ್ ಉಪಸ್ಥಿತರಿದ್ದರು.

ಕೆಂಪೇಗೌಡರ ಜಯಂತಿ ಆಚರಣೆ...



ಮೈಸೂರಿನ ಸರ್.ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸಂಘದ ಕಚೇರಿಯಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ಈ ವೇಳೆ ಅಧ್ಯಕ್ಷ ಜಯನಗರ ಮಹೇಶ್, ಖಜಾಂಚಿ ರವಿಕುಮಾರ್, ನಿರ್ದೇಶಕರಾದ ಚಂದ್ರೇಗೌಡ, ಜಯನಗರ ಕುಮಾರ್, ಕೃಷ್ಣ ಉಪಸ್ಥಿತರಿದ್ದರು.

ಖ್ಯಾತ ಚಿತ್ರ ಕಲಾವಿದ ಕೆ.ಟಿ. ಶಿವಪ್ರಸಾದ್ ಇನ್ನಿಲ್ಲ



ಬೆಂಗಳೂರು: ನಾಡಿನ ಹೆಮ್ಮೆಯ ಹಿರಿಯ ಚಿತ್ರ ಕಲಾವಿದ ಕೆ.ಟಿ. ಶಿವಪ್ರಸಾದ್ ನಿಧನರಾಗಿದ್ದಾರೆ. ಅವರಿಗೆ 78 ವರ್ಷ ವರ್ಷ ವಯಸ್ಸಾಗಿತ್ತು.

ಅನಾರೋಗ್ಯದ ಹಿನ್ನೆಲೆಯಲ್ಲಿ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ರೈತ ಹಾಗೂ ದಲಿತ ಚಳವಳಿಯಲ್ಲಿ ಗುರುತಿಸಿಕೊಂಡಿದ್ದ ಕೆ. ಟಿ. ಶಿವಪ್ರಸಾದ್ ಹಾಸನ ಜಿಲ್ಲೆಯ ಕಾರ್ಲೆಯ ಖ್ಯಾತ ಉದ್ಯಮಿ ಎಲ್. ಟಿ. ಕಾರ್ಲೆ ಅವರ ಪುತ್ರರಾಗಿದ್ದಾರೆ.

1947ರಲ್ಲಿ ಕೊಡಗಿನ ಮಡಿಕೇರಿ (ಮರ್ಕಾರ) ತಾಲೂಕಿನ ಬಡ ಕೃಷಿ ಕುಟುಂಬವೊಂದರಲ್ಲಿ ಜನಿಸಿದ ಶಿವಪ್ರಸಾದ್ ಅವರಿಗೆ ಬಾಲ್ಯದಿಂದಲೇ ಚಿತ್ರಕಲೆ ಆಸಕ್ತಿ ಇತ್ತು ಆದರೆ ಆ ಕಾಲದಲ್ಲಿ ಚಿತ್ರಕಲೆಗೆ ಅಷ್ಟಾಗಿ ಮನ್ನಣೆ ಇರದ ಕಾರಣ, ಕುಟುಂಬದ ಇಚ್ಛೆಯಂತೆ ಅವರು ಇಂಜಿನಿಯರಿಂಗ್ ಕಾಲೇಜು ಸೇರಬೇಕಾಯಿತು.

ಆದರೆ ಕಲೆಯ ಮೇಲಿದ್ದ ಅದಮ್ಯ ಒಲವಿನಿಂದಾಗಿ ಇಂಜಿನಿಯ ರಿಂಗ್ ಅಧ್ಯಯನವನ್ನು ಅರ್ಧಕ್ಕೇ ಬಿಟ್ಟು, ಮುಂಬೈನ ಪ್ರತಿಷ್ಠಿತ 'ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್' ಸೇರಿದರು. ಅಲ್ಲಿ 1973ರಲ್ಲಿ ಚಿತ್ರಕಲೆಯಲ್ಲಿ ಡಿಪ್ಲೊಮಾ ಪದವಿ ಪಡೆದರು. ನಂತರದ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡರು.

ಬ್ರಿಟನ್‌ನ ಶ್ರೇಷ್ಠ ಮಾಡರ್ನಿಸ್ಟ್ ಲುಸಿಯನ್ ಫ್ರಾಯ್ಡ್ ಅವರಿಗೆ ಹೋಲಿಸಲ್ಪಡುತ್ತಿದ್ದ ಕೆ.ಟಿ. ಶಿವಪ್ರಸಾದ್ ಅವರ ಕಲಾಕೃತಿಗಳು ದೇಶ–ವಿದೇಶಗಳಲ್ಲಿ ಅಪಾರ ಪ್ರಶಂಸೆ ಗಳಿಸಿವೆ. 1976 ರಿಂದ ಬೆಂಗಳೂರು, ಮೈಸೂರು, ಮುಂಬೈ ಮತ್ತು ನವದೆಹಲಿಗಳಲ್ಲಿ ಇವರ ಹಲವು ಏಕವ್ಯಕ್ತಿ ಪ್ರದರ್ಶನಗಳು ನಡೆದಿವೆ. ಮುಂಬೈನ ಜಹಾಂಗೀರ್ ಆರ್ಟ್ ಗ್ಯಾಲರಿ, ಚೆನ್ನೈನ ಸಾಕ್ಷಿ ಗ್ಯಾಲರಿ ಹಾಗೂ ನವದೆಹಲಿಯ ಆರ್ಟ್ ಟುಡೇಗಳಲ್ಲಿ ಇವರ ಕಲಾ ಪ್ರದರ್ಶನಗಳು ಕಲಾ ರಸಿಕರ ಮನಗೆದ್ದಿದ್ದವು.

ಜೊತೆಗೆ ಭೋಪಾಲ್ ಬಿನ್ನಾಲೆ (1988), ಬಾಂಬೆ ಆರ್ಟ್ ಸೊಸೈಟಿ ಶತಮಾನೋತ್ಸವ ಪ್ರದರ್ಶನ (1989) ಹಾಗೂ ಹಾಂಗ್‌ಕಾಂಗ್ ಗ್ಯಾಲರಿಗಳಲ್ಲೂ (1996) ಇವರ ಕಲಾಕೃತಿಗಳು ಪ್ರದರ್ಶನಗೊಂಡಿದ್ದವು. 1996ರಲ್ಲೇ ಜಹಾಂಗೀರ್ ಆರ್ಟ್ ಗ್ಯಾಲರಿಯಲ್ಲಿ ನಡೆದ ಸಮಕಾಲೀನ ಭಾರತೀಯ ಕಲಾವಿದರ ಪ್ರದರ್ಶನದಲ್ಲೂ ಭಾಗವಹಿಸಿದ್ದರು.

ಪ್ರಶಸ್ತಿ ಪುರಸ್ಕಾರಗಳು: ಕಲಾ ಜಗತ್ತಿಗೆ ಇವರು ನೀಡಿದ ಮಹೋನ್ನತ ಕೊಡುಗೆಯನ್ನು ಗೌರವಿಸಿ ಕರ್ನಾಟಕ ಸರ್ಕಾರವು 2001ರಲ್ಲಿ ಇವರಿಗೆ ಪ್ರತಿಷ್ಠಿತ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಿತ್ತು.

ಮುಂಗಾರು ವೈಫಲ್ಯ ಹಿನ್ನೆಲೆ

ಕೆಆರ್‌ಎಸ್ ಜಲಾಶಯದಲ್ಲಿ ದಾಖಲೆ ಮಟ್ಟದಲ್ಲಿ ನೀರು ಕುಸಿತ



ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೃಷ್ಣರಾಜ ಸಾಗರ ಜಲಾಶಯದ ನೀರಿನ ಪ್ರಮಾಣ 80 ಅಡಿಗೆ ಕುಸಿದಿರುವುದರಿಂದ ಜಲಾಶಯ ಬರಿದಾದಂತೆ ಭಾಸವಾಗುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ.30(ಎಂಟಿವೈ, ಬಿಸಿಟಿ, ಎಜಿ)– ಕಾವೇರಿ ಕಣಿವೆಯಲ್ಲಿ ಪೂರ್ವ ಮುಂಗಾರು ಹಾಗೂ ಮುಂಗಾರು ಮಳೆ ಕೈಕೊಟ್ಟ ಹಿನ್ನೆಲೆಯಲ್ಲಿ ಕನ್ನಡನಾಡಿನ ಜೀವನದಿ ಕಾವೇರಿ ನದಿಯಲ್ಲಿ ನೀರಿನ ಹರಿವು ಗಣನೀಯ ಪ್ರಮಾಣದಲ್ಲಿ ಕುಸಿತ ಕಂಡಿದ್ದು, ಕೃಷ್ಣರಾಜಸಾಗರ (ಕೆಆರ್‌ಎಸ್) ಜಲಾಶಯದಲ್ಲಿ ನೀರಿನ ಮಟ್ಟ ತಳ ಸೇರುವ ಆತಂಕ ಎದುರಾಗಿದೆ.

ಮುಂಗಾರು ಆರಂಭವಾಗಿ ತಿಂಗಳು ಕಳೆದಿದ್ದರೂ ಕಾವೇರಿ ನದಿಗೆ ಜೀವಕಳೆ ತರುತ್ತಿದ್ದ ಕೊಡಗು ಜಿಲ್ಲೆ ಸೇರಿದಂತೆ ಕಾವೇರಿ ಕೊಳ್ಳದಲ್ಲಿ ಸಾಂಪ್ರದಾಯಿಕ ಮಳೆಯೂ ಆಗದ ಹಿನ್ನೆಲೆಯಲ್ಲಿ ನದಿಯಲ್ಲಿ ನೀರಿನ ಪ್ರಮಾಣ ಕ್ಷೀಣಿಸಿದೆ. ಸಾಮಾನ್ಯವಾಗಿ ಮೇ ಅಂತ್ಯದಿಂದ ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಾಗಬೇಕಾಗಿತ್ತು.

ಅಲ್ಲದೆ, ಜೂನ್ ತಿಂಗಳಲ್ಲಿ ಒಳಹರಿವು 20 ಸಾವಿರದಿಂದ 40 ಸಾವಿರ ಕ್ಯುಸೆಕ್ ವರೆಗೆ ಇರುತ್ತಿತ್ತು. ಆದರೆ, 124.80 ಅಡಿ ಇರುವ ಕೆಆರ್‌ಎಸ್ ಜಲಾಶಯದಲ್ಲಿ ಪ್ರಸ್ತುತ 80.85 ಅಡಿ ನೀರಿದೆ. 49.452 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯವುಳ್ಳ ಜಲಾಶಯದಲ್ಲಿ ಇದೀಗ 11.165 ಟಿಎಂಸಿ ನೀರಿದೆ. ಅದರಲ್ಲಿ 2.786 ಟಿಎಂಸಿ ಲೈವ್ ಸ್ಟೋರೇಜ್ ಆಗಿದೆ. ಅಲ್ಲದೆ, ಜಲಾಶಯಕ್ಕೆ ಒಳಹರಿವು ಕೇವಲ 618 ಕ್ಯುಸೆಕ್ ಆಗಿದೆ. ಕುಡಿಯುವ ನೀರು ಹಾಗೂ ನಾಲೆಗಳಿಗೆ ಒಟ್ಟು 795 ಕ್ಯುಸೆಕ್ ನೀರನ್ನು ಜಲಾಶಯದಿಂದ ಹರಿಸಲಾಗುತ್ತಿದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಮೈಸೂರು, ಬೆಂಗಳೂರು, ಮಂಡ್ಯ ಸೇರಿದಂತೆ ಸುತ್ತ ಮುತ್ತಲಿನ ಗ್ರಾಮಗಳಿಗೆ ಪೂರೈಸುತ್ತಿರುವ ಕುಡಿಯುವ ನೀರಿಗೂ ಹಾಹಾಕಾರ ಬರುವ ಆತಂಕ ನಿರ್ಮಾಣವಾಗಿದೆ.

ಕಳೆದ ವರ್ಷ ತುಂಬಿ ತುಳುಕಿತ್ತು: ಕಳೆದ ವರ್ಷ ಕೊಡಗು ಜಿಲ್ಲೆಯಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಜೂನ್ ಆರಂಭದಿಂದಲೇ ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಾಗಿತ್ತು. ಹಾಗಾಗಿ ಜೂನ್ ಅಂತ್ಯದ ವೇಳೆಗೆ ಜಲಾಶಯ ಭರ್ತಿಯಾಗಿ, ಭಾರೀ ಪ್ರಮಾಣದ ನೀರನ್ನು ನದಿಗೆ ಬಿಡಲಾಗಿತ್ತು. ಆದರೆ, ಈ ವರ್ಷ ಬರಗಾಲದ ಪರಿಸ್ಥಿತಿ ತಲೆದೂರಿರುವುದರಿಂದ ಕಾವೇರಿ ನದಿಯಲ್ಲಿ ಒಳಹರಿವು ಮಾತ್ರ ವಲ್ಲದೆ, ಜಲಾಶಯದಲ್ಲೂ ನೀರಿನ ಪ್ರಮಾಣ ಗಣನೀಯವಾಗಿ ಕುಸಿತ ಕಂಡಿದೆ. ಕಳೆದ 20 ವರ್ಷಗಳ ಅವಧಿಯನ್ನು ಅವಲೋಕಿಸಿದರೆ ಈ ವರ್ಷ ಜೂನ್ ತಿಂಗಳಲ್ಲಿ ಅತೀ ಕಡಿಮೆ ಒಳಹರಿವು ಇರುವ ದಾಖಲೆ ನಿರ್ಮಾಣವಾಗಿದೆ. ಜೂನ್ ತಿಂಗಳಲ್ಲಿ ಕೇವಲ 1.37 ಟಿಎಂಸಿ ನೀರು ಕೆಆರ್‌ಎಸ್ ಜಲಾಶಯಕ್ಕೆ ಹರಿದು ಬಂದಿದ್ದರೆ, ಕಳೆದ ವರ್ಷ ಅತೀ ಹೆಚ್ಚು 38.4 ಟಿಎಂಸಿಗಿಂತಲೂ ಹೆಚ್ಚಿನ ನೀರು ಸಂಗ್ರಹದ ದಾಖಲೆ ನಿರ್ಮಾಣವಾಗಿತ್ತು.



47.311 ಟಿಎಂಸಿ (123.25 ಅಡಿ)–2025
11.23 ಟಿಎಂಸಿ (81.00 ಅಡಿ) –2026
73,811 ಕ್ಯುಸೆಕ್ ಒಳಹರಿವು –28.06.2025
530 ಕ್ಯುಸೆಕ್ ಒಳಹರಿವು–28.06.2026

ಶೇ.42ರಷ್ಟು ಮಳೆ ಕೊರತೆ

ಮೈಸೂರು,ಜೂ.30(ಎಂಟಿವೈ)– ದೇಶದಲ್ಲಿಯೇ ಈ ಬಾರಿ ಅತ್ಯಂತ ಕಡಿಮೆ ಮಳೆಯಾಗಿದೆ. 126 ವರ್ಷಗಳಲ್ಲಿ ಜೂನ್ ತಿಂಗಳಲ್ಲಿ ಮೂರನೆ ಬಾರಿಗೆ ಇಷ್ಟು ಕಡಿಮೆ ಮಳೆಯಾಗಿದೆ. ಈ ಬಾರಿ ಕೇವಲ 92.1 ಮಿ.ಮೀ ಮಾನ್ಸೂನ್ ಮಳೆ ಬಿದ್ದಿದ್ದು, ಶೇ.42ರಷ್ಟು ಮಳೆ ಕೊರತೆ ಉಂಟಾಗಿದೆ.

ಈ ಬಾರಿ ಮಾನ್ಸೂನ್ ಮಳೆ ದೇಶದಾದ್ಯಂತ ದುರ್ಬಲಗೊಂಡಿದ್ದು, ನಿರೀಕ್ಷಿಸಿದ ಪ್ರಮಾಣದಲ್ಲಿ ಮಳೆಯಾಗಿಲ್ಲ. ಜೂ.29 ರವರೆಗೆ ದೇಶದಲ್ಲಿ ಕೇವಲ 92.1 ಮಿಮೀ ಮಳೆ ದಾಖಲಾಗಿದೆ. ಇದರಿಂದ ಸಾಂಪ್ರದಾಯಿಕ ಮಳೆಯಲ್ಲಿ ಶೇ.42ರಷ್ಟು ಕೊರತೆಯಾಗಿದೆ. 1901 ರಿಂದ 2026ರವರೆಗೂ ಜೂನ್ ತಿಂಗಳ ಮಳೆ ಪ್ರಮಾಣವನ್ನು ಅವಲೋಕಿಸಿದಾಗ ಮೂರು ವರ್ಷ ಮಾತ್ರ ಶೇ.100 ಮಿ.ಮೀ ಗಿಂತ ಕಡಿಮೆ ಮಳೆಯಾಗಿದೆ. 2009ರಲ್ಲಿ ದೇಶದಲ್ಲಿ ಕೇವಲ 87.5 ಮಿ.ಮೀ ಮಳೆಯಾಗಿತ್ತು. 1905ರಲ್ಲಿ 92.3 ಮಿ.ಮೀ ಮಳೆ ಬಂದಿತ್ತು. ಆದರೆ, ಈ ಬಾರಿ 92.1 ಮಿ.ಮೀ ಮಳೆಯಾಗಿದ್ದು, ಜೂನ್ ತಿಂಗಳಲ್ಲಿ ದೇಶದಲ್ಲೇ ಅತಿ ಕಡಿಮೆ ಪ್ರಮಾಣದ ಮಳೆಯಲ್ಲಿ ಮೂರನೇ ಸ್ಥಾನಪಡೆದಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ಭಾರತೀಯ ಹವಾಮಾನ ಇಲಾಖೆಯ ದಾಖಲೆಗಳ ಪ್ರಕಾರ, ಜೂನ್‌ನಲ್ಲಿ ಕೇವಲ ಎರಡು ವರ್ಷದಲ್ಲಿ ಮಾತ್ರ 100 ಮಿ.ಮೀ ಗಿಂತ ಕಡಿಮೆ ಮಳೆಯಾಗಿದೆ. 2014(93ಮಿ.ಮೀ) ಮತ್ತು 1926 (97.4 ಮಿ.ಮೀ)ರಲ್ಲಿ ಜೂನ್‌ನಲ್ಲಿ ಕಡಿಮೆ ಮಳೆಯಾಗಿರುವ ಬಗ್ಗೆ ವರದಿಯಾಗಿದೆ. ಆದರೆ, 1902ರಲ್ಲಿ 109 ಮಿ.ಮೀ, 1912ರಲ್ಲಿ 106.8 ಮಿ.ಮೀ ಮತ್ತು 1923ರಲ್ಲಿ 101.7 ಮಿಮೀ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಜಲಾಶಯಕ್ಕೆ ಪ್ರಸ್ತುತ 618 ಕ್ಯುಸೆಕ್ ಒಳಹರಿವಿದೆ. 2009ರಲ್ಲಿ 547 ಕ್ಯುಸೆಕ್, 2019ರಲ್ಲಿ 655 ಕ್ಯುಸೆಕ್ ಒಳಹರಿವಿತ್ತು. 2024ರಲ್ಲಿ 13,437 ಕ್ಯುಸೆಕ್, 2015ರಲ್ಲಿ 36,510 ಕ್ಯುಸೆಕ್, 2013ರಲ್ಲಿ 23,867 ಕ್ಯುಸೆಕ್, 2011ರಲ್ಲಿ 11,483 ಕ್ಯುಸೆಕ್, ಕಳೆದ ವರ್ಷ 73,811 ಕ್ಯುಸೆಕ್ ನೀರು ಈ ವೇಳೆ ಜಲಾಶಯಕ್ಕೆ ಹರಿದು ಬಂದಿತ್ತು.

ಸಂಗ್ರಹ ಸಾಮರ್ಥ್ಯ ಕುಗ್ಗಿಸಿದ ಹೂಳು: ಜಲಾಶಯದಲ್ಲಿ ವರ್ಷದಿಂದ ವರ್ಷಕ್ಕೆ ಹೂಳು ಹೆಚ್ಚಾಗುತ್ತಿದ್ದು, ಇದರಿಂದ ಜಲಾಶಯದ ನೀರಿನ ಸಂಗ್ರಹ ಪ್ರಮಾಣ ಕುಗ್ಗಿಸುತ್ತಿದೆ. ಕಳೆದ ಹಲವು ವರ್ಷಗಳಿಂದಲೂ ರೈತರೂ ಸೇರಿದಂತೆ ಸಂಘ ಸಂಸ್ಥೆಗಳು ಕೆಆರ್‌ಎಸ್ ಜಲಾಶಯದಲ್ಲಿ ತುಂಬಿರುವ ಹೂಳು ತೆಗೆಸುವಂತೆ ಆಗ್ರಹಿಸುತ್ತಿದ್ದರೂ, ಇದುವರೆಗೂ ಹೂಳೆತ್ತಲು ಯಾವುದೇ ಕ್ರಮ ಕೈಗೊಳ್ಳದ ಕಾರಣ ಜಲಾಶಯದಲ್ಲಿ ಸಂಗ್ರಹವಾಗುವ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ. 2016 ಮತ್ತು 2023ರವರೆಗೆ ಜಲಾಶಯದ ಹೂಳು ಮತ್ತು ಡೆಡ್ ಸ್ಟೋರೇಜ್ ಮಟ್ಟ 4.401 ಟಿಎಂಸಿ ಪ್ರಮಾಣದಲ್ಲಿತ್ತು ಎಂದು ಕಾವೇರಿ ನೀರಾವರಿ ನಿಗಮದ ದಾಖಲೆಯಲ್ಲಿ ನಮೂದಾಗಿದೆ.

ಆದರೆ, 2024 ರಲ್ಲಿ 8.179 ಟಿಎಂಸಿ, 2025ರಲ್ಲಿ 8.379 ಟಿಎಂಸಿ ಹಾಗೂ ಈ ವರ್ಷ (2026ರಲ್ಲಿ) 8.424 ಟಿಎಂಸಿಯಷ್ಟು ಹೂಳು ಮತ್ತು ಡೆಡ್ ಸ್ಟೋರೇಜ್ ಮಟ್ಟ ಏರಿಕೆಯಾಗಿದೆ. ಕಳೆದ 3 ವರ್ಷದಲ್ಲಿ ಹೂಳು ಸಂಗ್ರಹದಿಂದ ಅಣೆಕಟ್ಟಿನ ಡೆಡ್ ಸ್ಟೋರೇಜ್ 4.023 ಟಿಎಂಸಿ ಹೆಚ್ಚಾಗಿದೆ. ಇದು ಜಲಾಶಯದ ನೀರಿನ ಪ್ರಮಾಣ ಕಡಿಮೆ ಮಾಡಿದೆ.

ಕರ್ನಾಟಕ ಎಂಜಿನಿಯರಿಂಗ್ ಸಂಶೋಧನಾ ಕೇಂದ್ರ (ಕೆಇಆರ್‌ಎಸ್)ವು 2023ರಲ್ಲಿ ಹೈಡ್ರೋಗ್ರಾಫಿಕ್ ತಂತ್ರ ಬಳಸಿ ನಡೆಸಿದ ಇಂಟೆಗ್ರೇಟೆಡ್ ಬ್ಯಾಥಿಮೆಟ್ರಿಕ್ ಸಮೀಕ್ಷೆ(ಐಬಿಎಸ್)ಯಲ್ಲಿ 1932ರಿಂದ 2.34 ಟಿಎಂಸಿ ಪ್ರಮಾಣದ ಹೂಳು ಜಲಾಶಯದಲ್ಲಿ ಸಂಗ್ರಹವಾಗಿದೆ ಎಂದು ಪತ್ತೆ ಮಾಡಿತ್ತು.

ನೈಪುಣ್ಯ ಶಿಕ್ಷಣ ಸಂಸ್ಥೆಯಲ್ಲಿ ವಿದ್ಯಾರ್ಥಿ ಪದಗ್ರಹಣ



ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆರ್.ಟಿ ನಗರ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿ ಪ್ರತಿಜ್ಞಾ ವಿಧಿ ಸಮಾರಂಭ ಮಂಗಳವಾರ ನಡೆಯಿತು.

ಮೈಸೂರು,ಜೂ.30–ಪ್ರತಿ ಮಕ್ಕಳಲ್ಲೂ ನಾಯಕತ್ವದ ಗುಣ ಬೆಳೆಸಿ, ಗುರಿ ಸಾಧಿಸುವ ಮನೋಬಲ ತುಂಬುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಶಿಕ್ಷಣ ಸಂಸ್ಥೆಗಳ ಚಟುವಟಿಕೆಗಳ ಪ್ರಮುಖ ಭಾಗವಾಗಬೇಕಿದೆ ಎಂದು ಮಹಾರಾಣಿ ಮಹಿಳಾ ವಿಶ್ವವಿದ್ಯಾನಿಲಯದ ದೈಹಿಕ ವಿಭಾಗದ ನಿರ್ದೇಶಕಿ ಶ್ರೀಮತಿ ಡಾ. ಡಿ.ರಮಣಿ ಕರೆ ನೀಡಿದ್ದಾರೆ.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆರ್.ಟಿ ನಗರ ಕ್ಯಾಂಪಸ್‌ನಲ್ಲಿ ಮಂಗಳವಾರ ನಡೆದ ವಿದ್ಯಾರ್ಥಿ ಪ್ರತಿಜ್ಞಾ ವಿಧಿ ಸಮಾರಂಭದಲ್ಲಿ ಧ್ವಜ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಕ್ರಿಯಾಶೀಲತೆಯಲ್ಲಿ ಬದ್ಧತೆ ಹೆಚ್ಚಿಸಲು ನಾಯಕತ್ವದ ಗುಣ ಪ್ರೋತ್ಸಾಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸಂಘಟನೆ, ಸಹಭಾಗಿತ್ವ ಹಾಗೂ ರಚನಾತ್ಮಕ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳೇ ಆಯೋಜಿಸುವಂತೆ ಸೂಕ್ತ ಮಾರ್ಗದರ್ಶನ ನೀಡಬೇಕು. ವಿಶ್ವದ ಮುಂಚೂಣಿ ರಾಷ್ಟ್ರಗಳಲ್ಲಿ ಭಾರತ ಅಗ್ರಸ್ಥಾನದತ್ತ ಮುನ್ನುಗ್ಗುತ್ತಿದ್ದು ಈ ಸಂದರ್ಭದಲ್ಲಿ ಭವಿಷ್ಯತ್ತಿನ ಜವಾಬ್ದಾರಿಯುತ ಪ್ರಜೆಗಳನ್ನು ರೂಪಿಸುವುದು ಶಿಕ್ಷಣ ಸಂಸ್ಥೆಗಳ ಆದ್ಯ ಕರ್ತವ್ಯವಾಗಿದ್ದು, ಹಿಂದೆಂದಿಗಿಂತಲೂ ಇಂದು ರಾಷ್ಟ್ರೀಯ ಸಮರ್ಪಣಾ ಗುಣ ಭವಿಷ್ಯತ್ತಿನ ಮಕ್ಕಳು ರೂಢಿಸಿಕೊಳ್ಳುವಂತಾಗಲು ಶಿಸ್ತು, ಸಂಯಮ ಮೈಗೂಡಿಸಿಕೊಳ್ಳುವಂತೆ ಪ್ರೇರಣಾದಾಯಕ ಕಾರ್ಯಕ್ರಮಗಳು ಶಿಕ್ಷಣ ಚಟುವಟಿಕೆಯ ಭಾಗವಾಗಬೇಕು. ನಾಯಕತ್ವವೆಂದರೆ ಅಧಿಕಾರವಲ್ಲ, ಸೇವೆ. ವಿದ್ಯಾರ್ಥಿ ನಾಯಕರು ಆತ್ಮವಿಶ್ವಾಸ, ವಿನಯ ಮತ್ತು ಜವಾಬ್ದಾರಿಯಿಂದ ಮುನ್ನಡೆಯಬೇಕು ಎಂದು ಅವರು ಕರೆ ನೀಡಿದರು.

ದೇಶ ಬೆಳೆದಂತೆ ಸವಾಲುಗಳೂ ಅಷ್ಟೇ ಪ್ರಮಾಣದಲ್ಲಿ ಎದುರಾಗುತ್ತವೆ. ಈ ನಿಟ್ಟಿನಲ್ಲಿ ಭಾರತೀಯರು ತಮ್ಮ ಮಕ್ಕಳಿಗೆ ದೇಶಕಟ್ಟುವ ರಾಷ್ಟ್ರ ಪ್ರೇಮವನ್ನು ಪ್ರೇರೇಪಿಸಲು ಬೆಂಬಲವಾಗಿ ನಿಲ್ಲಬೇಕೆಂದು ಇದೇ ಸಂದರ್ಭದಲ್ಲಿ ಹೇಳಿದರು.

ಪ್ರತಿಜ್ಞಾ ವಿಧಿ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದಕಗಳನ್ನು ತೊಡಿಸಿ, ಪ್ರತಿಜ್ಞಾನುಡಿಗಳನ್ನು ಬೋಧಿಸಿ, ವಿವಿಧ ಹುದ್ದೆಗಳನ್ನು ನೀಡಿ ಜವಾಬ್ದಾರಿಯನ್ನು ವಹಿಸಲಾಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಸಿಬಿಎಸ್‌ಇ ಪಠ್ಯಕ್ರಮದ ಪ್ರಾಂಶುಪಾಲ ಬಿ.ಆರ್. ಗುರುಪ್ರಸಾದ್ (ಸಿಬಿಎಸ್‌ಇ), ಐಸಿಎಸ್‌ಇ ಪಠ್ಯಕ್ರಮದ ಪ್ರಾಂಶುಪಾಲೆ ಶ್ರೀಮತಿ ಕೆ.ಎಸ್ ದೇಚಮ್ಮ, ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಕನ್ನಡ ಪರಿಚಾರಕ ಪಂಡಿತ ಪ.ನಾಗರಾಜಯ್ಯ ಸ್ಮರಣ ಸಂಪುಟ ಕೃತಿ ಲೋಕಾರ್ಪಣೆ



ಹಿರಿಯ ಪತ್ರಕರ್ತ ನಾ.ಮಹಾವೀರ ಪ್ರಸಾದ್ ಸಂಪಾದಿಸಿರುವ ಕನ್ನಡ ಪರಿಚಾರಕ ಪಂಡಿತ ಪ.ನಾಗರಾಜಯ್ಯ ಸ್ಮರಣ ಸಂಪುಟ ಕೃತಿಯನ್ನು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಮಂಗಳವಾರ ಬಿಡುಗಡೆಗೊಳಿಸಿದರು.

ಮೈಸೂರು, ಜೂ.30(ಜಿಎ)–ಮೈಸೂರಿನ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಸಂವಹನ ಪ್ರಕಾಶನ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ನಾ.ಮಹಾವೀರ ಪ್ರಸಾದ್ ಸಂಪಾದಿಸಿರುವ ಕನ್ನಡ ಪರಿಚಾರಕ ಪಂಡಿತ ಪ.ನಾಗರಾಜಯ್ಯ ಸ್ಮರಣ ಸಂಪುಟ ಕೃತಿಯನ್ನು ಹಿರಿಯ ಸಾಹಿತಿ ಸಿ.ಪಿ. ಕೃಷ್ಣಕುಮಾರ್ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ವಿದ್ಯೆ, ವಿದ್ವತ್ತು ವಿನಯವನ್ನು ಕಲಿಸಬೇಕು ಎನ್ನುವ ಮಾತಿಗೆ ಸಾಕ್ಷಿಯಾಗಿದ್ದವರು ಪಂ.ನಾಗರಾಜಯ್ಯ. ಜೈನ ಸಾಹಿತ್ಯದಲ್ಲಿ ವಿದ್ವಾಂಸರಾಗಿದ್ದರು ಅವರ ಅತಿಶಯ ವಾದ ವಿನಯವನ್ನು ಕೃತಿಯು ವ್ಯಕ್ತಪಡಿಸಲಿದೆ ಎಂದರು.

ಕೆಲವರು ತಂದೆ–ತಾಯಿ ಮಾಡಿದ ಸಾಧನೆಯ ಕೆಲಸಗಳನ್ನು ಹಾಳು ಮಾಡುತ್ತಾರೆ. ಆದರೆ, ಕೆಲವರು ಪುನರುತ್ಥಾನಗೊಳಿಸುವರು. ಕೃತಿಯನ್ನು ಹೊರ ತರುವ ಮೂಲಕ ನಾ.ಮಹಾವೀರ ಪ್ರಸಾದ್ ತಮ್ಮ ಪಿತೃ ಋಣವನ್ನು ಯಶಸ್ವಿಯಾಗಿ ತೀರಿಸಿದ್ದಾರೆ. ಅವರ ಈ ಕಾರ್ಯ ಪುನರ್ ಉತ್ಥಾನದ ಕಾರ್ಯವಾಗಿದೆ ಎಂದು ತಿಳಿಸಿದರು.

ಪಂ.ನಾಗರಾಜಯ್ಯ ಅವರು ನನಗಿಂತ 17 ವರ್ಷ ಹಿರಿಯರು. ನಮ್ಮದು ಗುರು–ಶಿಷ್ಯ ಪರಂಪರೆ ಅವರು ನನಗೆ ಸಣ್ಣ ಪುಟ್ಟ ಕೆಲಸಗಳನ್ನು ಬಿಟ್ಟು ದೊಡ್ಡ ಕೆಲಸಗಳನ್ನು ಮಾಡಿ ಎನ್ನುತ್ತಿದ್ದರು. ನಾನು ಮಾಡಿರುವುದು ದಡ್ಡ ಕೆಲಸವೇ ಹೊರತು ದೊಡ್ಡ ಕೆಲಸವಲ್ಲ. ಇಲ್ಲಿಯವರೆಗೂ ನಾನು ದೊಡ್ಡ ಕೆಲಸ ಮಾಡಿಲ್ಲ. ನಾಗರಾಜಯ್ಯ ಅವರ ಆತ್ಮ ನನ್ನನ್ನು ಕ್ಷಮಿಸಲಿ. ಜೈನ ಧರ್ಮದ ಸಮಗ್ರ ಸಂಪುಟ ರಚನೆಯಲ್ಲಿ ನನಗೆ ಉಪಕಾರ ಮಾಡಿದ್ದರು ಎಂದು ಸ್ಮರಿಸಿದರು.

ಪುಸ್ತಕದ ಕುರಿತು ವಿದ್ವಾಂಸ ಡಾ.ಕೆ.ಅನಂತ ರಾಮು ಮಾತನಾಡಿ, ಪಂ.ನಾಗರಾಜಯ್ಯ ಅವರ ಸಂಸ್ಮರಣ ಸಂಪುಟವನ್ನು ಅವರ ಪುತ್ರ ಬಹಳ ಶ್ರಮ ಪಟ್ಟು ಶ್ರದ್ಧೆ, ಭಕ್ತಿಯ ಮೂಲಕ ಹೊರತಂದಿದ್ದಾರೆ. ಇದರಿಂದ ಪಂ.ನಾಗರಾಜಯ್ಯ ಅವರ ಸಮಗ್ರ ಪರಿಚಯ ಕೃತಿಯಲ್ಲಿ ಸಿಗಲಿದೆ. 42 ಲೇಖನಗಳು ಪುಸ್ತಕದಲ್ಲಿವೆ ಲೇಖಕರು ತುಂಬು ಹೃದಯದಿಂದ ನಾಗರಾಜಯ್ಯ ಅವರ ಬಹುಮುಖ ಪ್ರತಿಭೆಯನ್ನು ಎತ್ತಿ ಹಿಡಿಯಲಿದೆ ಎಂದರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ದಿಗಂಬರ ಜೈನ ಸಮಾಜದ ಅಧ್ಯಕ್ಷಎಂ.ಆರ್.ಸುನೀಲ್‌ಕುಮಾರ್, ಪದ್ಮಶ್ರೀ ಮಹಿಳಾ ಸಮಾಜದ ಅಧ್ಯಕ್ಷೆ ನಂದಿನಿ ಸಂಜಯ್, ಲೇಖಕ ನಾ.ಮಹಾವೀರ ಪ್ರಸಾದ್, ಸಂವಹನ ಪ್ರಕಾಶನದ ಲೋಕಪ್ಪ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 1 ಜುಲೈ 2026

ಕೆ.ಆರ್.ನಗರದಲ್ಲಿ ಎಸ್ಐಆರ್ ಪ್ರಕ್ರಿಯೆಗೆ ಚಾಲನೆ



ಕೆ.ಆರ್.ನಗರದಲ್ಲಿ ಎಸ್ಐಆರ್‌ಗೆ ಚಾಲನೆ ನೀಡಲಾಯಿತು.

ಕೆ.ಆರ್.ನಗರ, ಜೂ.30– ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ವಿಶೇಷ ಸಮಗ್ರಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಗೆ ಪಟ್ಟಣದ ಪುರಸಭೆ ವ್ಯಾಪ್ತಿಯ 5ನೇ ವಾರ್ಡ್‌ನ ಮತಗಟ್ಟೆ ಸಂಖ್ಯೆ 189ರಲ್ಲಿ ತಹಸೀಲ್ದಾರ್ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿ ಜಿ.ಸುರೇಂದ್ರ ಮೂರ್ತಿ ಮಂಗಳವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ತಹಸೀಲ್ದಾರ್ ಜಿ.ಸುರೇಂದ್ರ ಮೂರ್ತಿ ಮಾತನಾಡಿ, ಜೂ.30ರಿಂದ ಜು.29ರವರೆಗೆ ಬೂತ್ ಮಟ್ಟದ ಅಧಿಕಾರಿಗಳು ಮತದಾರರ ಮನೆ ಮನೆಗೆ ಭೇಟಿ ನೀಡಿ ಮತದಾರರ ಮಾಹಿತಿ ಸಂಗ್ರಹಿಸಲಿದ್ದಾರೆ. ಮತದಾರರಿಗೆ ಎನ್ಯುಮರೇಷನ್ ಫಾರಂ ಭರ್ತಿ ಮಾಡಲು ಹಾಗೂ ಇತರೆ ಸಂಬಂಧಿತ ಸಹಕಾರ ನೀಡಲು ಪಟ್ಟಣದ ಪುರಸಭೆ ಹಾಗೂ ಪ್ರತಿ ಗ್ರಾಪಂ ಮತ್ತು ವಾರ್ಡ್ ಕಚೇರಿಗಳಲ್ಲಿ ಒಟ್ಟು 252 ಮತಗಟ್ಟೆಗಳ ಬಿಎಲ್‌ಓಗಳು ಮನೆ ಮನೆಗೆ ಭೇಟಿ ನೀಡಲಿದ್ದಾರೆ. ಹಾಗಾಗಿ ಪ್ರತಿಯೊಬ್ಬರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಬಿಎಲ್‌ಓಗಳು ಮನೆಗಳಿಗೆ ಭೇಟಿ ನೀಡಿ ಎನ್ಯುಮರೇಷನ್ ಫಾರಂ ತಲುಪಿಸಿ, ಮತದಾರರಿಂದ ದೃಢೀಕರಿಸಿಕೊಂಡು ಸಹಿ ಪಡೆದು ವಾಪಸ್ ತರಲಿದ್ದಾರೆ. ಮತದಾರರು ನಮೂನೆ ಸ್ವೀಕರಿಸಿ, ಪರಿಶೀಲಿಸಿ ಕಡ್ಡಾಯವಾಗಿ ಬಿಎಲ್‌ಓಗಳಿಗೆ ವಾಪಸ್ ನೀಡಬೇಕು. ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ 2,20,922 ಮತದಾರರಿದ್ದು ಪ್ರತಿಯೊಬ್ಬ ಮತದಾರರ ಮನೆಗೂ ಬಿಎಲ್‌ಓಗಳು ಭೇಟಿ ನೀಡಿ ಎನ್ಯುಮರೇಷನ್ ಫಾರಂ ನೀಡಲಿದ್ದಾರೆ. ಕಡ್ಡಾಯವಾಗಿ ಫಾರಂ ಭರ್ತಿ ಮಾಡಿ ಜು.29ರೊಳಗೆ ವಾಪಸ್ ನೀಡಬೇಕು. ಇಲ್ಲದಿದ್ದರೆ ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟು ಹೋಗುವ ಸಾಧ್ಯತೆ ಇರುತ್ತದೆ ಎಂದು ತಿಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಜಿ.ಎಸ್.ರಮೇಶ್, ನಿಲಯ ಮೇಲ್ವಿಚಾರಕ ಲೋಕೇಶ್, ಶಿರೇಸ್ತೆದಾರ ಮಹದೇವ ಸ್ವಾಮಿ, ಪುರಸಭೆ ಆರ್‌ಐ ರಘು, 5ನೇ ವಾರ್ಡ್ ನಿವಾಸಿಗಳು ಹಾಜರಿದ್ದರು.

ಮಾದಕ ವಸ್ತುಗಳ ಬಗ್ಗೆ ವಿದ್ಯಾರ್ಥಿಗಳು ಜಾಗೃತರಾಗಿ

ವೃತ್ತ ನಿರೀಕ್ಷಕ ಪ್ರಸನ್ನಕುಮಾರ್ ಸಲಹೆ



ಸರಗೂರಲ್ಲಿ ಕಾನೂನು ಅರಿವು ಶಿಬಿರ ನಡೆಯಿತು

ಸರಗೂರು, ಜೂ.30– ಮಾದಕ ವಸ್ತುಗಳ ಸೇವನೆಯಿಂದ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದರೊಂದಿಗೆ ಸಮಾಜದಲ್ಲಿ ಅಹಿತಕರ ಘಟನೆ ನಡೆಯಲು ಕಾರಣವಾಗಲಿದೆ. ಹೀಗಾಗಿ ಮಾದಕ ವಸ್ತುಗಳ ಬಗ್ಗೆ ವಿದ್ಯಾರ್ಥಿಗಳು ಜಾಗೃತರಾಗಬೇಕು ಎಂದು ಸರಗೂರು ಪೊಲೀಸ್ ವೃತ್ತ ನಿರೀಕ್ಷಕ ಪ್ರಸನ್ನಕುಮಾರ್ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಸರಗೂರು ಪೊಲೀಸ್ ಇಲಾಖೆಯಿಂದ ಅಂತರ ರಾಷ್ಟ್ರೀಯ ಮಾದಕದ್ರವ್ಯ ವಿರೋಧಿ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 'ತೆರೆದ ಮನೆ' ಕಾರ್ಯಕ್ರಮದಡಿ ವಿದ್ಯಾರ್ಥಿಗಳಿಗೆ ಕಾನೂನು ಅರಿವು ಶಿಬಿರದಲ್ಲಿ ಅವರು ಮಾತನಾಡಿದರು.

ಸಮಾಜದ ಯುವ ಸಮುದಾಯ ಮಾದಕ ವಸ್ತುಗಳ ಸೇವನೆಯಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದೆ. ಅಲ್ಲದೇ ಸಮಾಜವನ್ನು ಅಧೋಗತಿಗೆ ತಂದೊಡ್ಡುತ್ತಿದೆ. ಮಾದಕ ವಸ್ತುಗಳ ವ್ಯಾಪಾರ ಎಷ್ಟು ಅಪಾಯಕಾರಿಯೋ ಅದರ ಬಳಕೆಯೂ ಅಷ್ಟೇ ಅಪಾಯಕಾರಿಯಾಗಿದೆ. ಯುವಕರು ಮಾದಕ ವಸ್ತುಗಳ ಸೇವನೆಗೆ ತುತ್ತಾಗುತ್ತಿರುವುದು ಆತಂಕದ ಬೆಳವಣಿಗೆ. ಮಾದಕ ದ್ರವ್ಯ ವ್ಯಸನಿಯಾದ ವ್ಯಕ್ತಿಯನ್ನು ಕುಟುಂಬ ತ್ಯಜಿಸುತ್ತದೆ. ಸಮಾಜವೂ ತಿರಸ್ಕರಿಸುತ್ತದೆ ಎಂದರು.

ಮಾದಕ ವಸ್ತುಗಳ ಬಗ್ಗೆ ವಿದ್ಯಾರ್ಥಿಗಳು ಜಾಗೃತರಾಗಬೇಕು. ಮಾದಕ ವಸ್ತುಗಳ ಮಾರಾಟ ಹಾಗೂ ಸೇವನೆ ಕಂಡಲ್ಲಿ ಪೊಲೀಸರಿಗೆ ಮಾಹಿತಿ ನೀಡಬೇಕು. ತಪ್ಪು ನಿರ್ಧಾರದಿಂದಾಗಿ ವ್ಯಸನಿಗಳಾಗಿ ಜೀವನ ಹಾಳು ಮಾಡಿಕೊಳ್ಳಬೇಡಿ. ಯುವಕರು ಮಾದಕ ದ್ರವ್ಯಗಳ ವ್ಯಸನಿಗಳಾಗದೆ ಸಮಾಜಕ್ಕೆ ಒಳಿತನ್ನು ಬಯಸುವ ವ್ಯಕ್ತಿಗಳಾಗಿ ಹೊರಹೊಮ್ಮಬೇಕು ಎಂದು ಸಲಹೆ ನೀಡಿದರು.

ಮಾದಕ ದ್ರವ್ಯ ಬಳಕೆಯ ಅಡ್ಡ ಪರಿಣಾಮಗಳು ಸಮಾಜದ ಮೇಲಾಗುವ ದುಷ್ಪರಿಣಾಮ, ಹದಗೆಡುವ ಕುಟುಂಬ ವ್ಯವಸ್ಥೆ, ಹಣಕಾಸಿನ ಸಮಸ್ಯೆ ಸೇರಿದಂತೆ ಇನ್ನಿತರ ವಿಷಯಗಳ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿದರು.

ಇದೇ ವೇಳೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ರಾಜ್ಯ ಸರ್ಕಾರದಿಂದ ನಡೆದ ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಸ್ತುಗಳ ವಿರೋಧಿ 2026ರ ಕಾರ್ಯಕ್ರಮದ ನೇರ ಪ್ರಸಾರವನ್ನು ವಿದ್ಯಾರ್ಥಿಗಳು ವೀಕ್ಷಣೆ ಮಾಡಿದರು. ಕಾಲೇಜು ಪ್ರಾಂಶುಪಾಲ ಡಾ.ಮಧುಸೂದನ್, ಪ್ರಾಧ್ಯಾಪಕರಾದ ದಯಾನಂದ್, ಯೋಗೀತಾ, ಡಾ.ತಿಮ್ಮಯ್ಯ, ದೀಪ, ವೃಂದಾ, ಯತೀಶ್, ಪ್ರಭುಸ್ವಾಮಿ, ಮಂಜುಳಾದೇವಿ ಸೇರಿದಂತೆ ಪೊಲೀಸ್ ಸಿಬ್ಬಂದಿ ಹಾಜರಿದ್ದರು.

ಬೆಟ್ಟದಪುರ ಮಠದ ಆಸ್ತಿ ಉಳಿಸುವಲ್ಲಿ

ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ಹೋರಾಟ ಸ್ಮರಣೀಯ

ಮಾದಳ್ಳಿ ಉಕ್ಕಿನಕಂತೆ ಮಠದ ಸಾಂಬ ಸದಾಶಿವ ಸ್ವಾಮೀಜಿ



ಕಾರ್ಯಕ್ರಮವನ್ನು ವಿವಿಧ ಮಠಾಧೀಶರು ಉದ್ಘಾಟಿಸಿದರು.

ಬೆಟ್ಟದಪುರ, ಜೂ.30– ಮಠದ ಆಸ್ತಿ ಉಳಿವಿಗೆ ಬೆಟ್ಟದಪುರದ ಕನ್ನಡ ಮಠದ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ಅವರ ಅವಿರತ ಹೋರಾಟ ಸ್ಮರಣೀಯ ಎಂದು ಮಾದಳ್ಳಿ ಉಕ್ಕಿನಕಂತೆ ಮಠದ ಸಾಂಬ ಸದಾಶಿವ ಸ್ವಾಮೀಜಿ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಸ್ವತಂತ್ರ ಸಾಲಿಲಾಖ್ಯ ವಿರಕ್ತ ಮಠ ಮತ್ತು ಕನ್ನಡ ಮಠದಲ್ಲಿ ಹಮ್ಮಿಕೊಂಡಿದ್ದ ಶ್ರೀಚಿಕ್ಕವೀರ ದೇಶಿಕೇಂದ್ರ ಸ್ವಾಮೀಜಿಗಳ 97ನೇ ಗಣಾರಾಧನೆ ಹಾಗೂ ಶ್ರೀಚನ್ನವೀರ ದೇಶಿಕೇಂದ್ರ ಸ್ವಾಮೀಜಿಗಳ 45ನೇ ಗಣಾರಾಧನೆ, ಕನ್ನಡ ಮಠದ 217ನೇ ಸ್ಥಾಪನೆ ವರ್ಷಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದೇಹ ದಂಡಿಸುವ ಜೊತೆಗೆ ಕಾಯಕ ನಿಷ್ಠೆಯ ಮೂಲಕ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮಠದ ಆಸ್ತಿ ಉಳಿಸಲು ಅವರು ಮಾಡಿದ ಹೋರಾಟ ಎಂದಿಗೂ ಮರೆಯಲು ಸಾಧ್ಯವಿಲ್ಲ. ಇವರ ಜಾಗದಲ್ಲಿ ಬೇರೆ ಯಾರಿದ್ದರೂ ಇವರಷ್ಟು ಕಾನೂನು ಹೋರಾಟ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಮಠದ ಆಸ್ತಿ ಉಳಿಸುವ ಮೂಲಕ ದೊಡ್ಡ ಸಾಧನೆ ಮಾಡಿದ್ದಾರೆ. ಗುರುಗಳು ಮಾಡಿದ ಆಸ್ತಿಯು ಅವರ ಸ್ವಂತಕ್ಕೆ ಬಳಸುವುದಿಲ್ಲ. ಅದನ್ನು ಭಕ್ತರಿಗೆ, ಸಾರ್ವಜನಿಕರಿಗೆ ಬಿಟ್ಟು ಹೋಗುತ್ತಾರೆ. ಇದನ್ನು ಅರ್ಥ ಮಾಡಿಕೊಳ್ಳಬೇಕು. ಆದ್ದರಿಂದ ಮಠದ ಉಳಿವಿಗೆ, ಸ್ವಾಮೀ ಜಿಯ ಸಾಮಾಜಿಕ ಕಾರ್ಯಗಳಿಗೆ ನೀವು ಅವರೊಂದಿಗೆ ಕೈ ಜೋಡಿಸಬೇಕು ಎಂದರು.

ಮಾಗಡಿ ತಾಲೂಕು ಗುಂಸಂದ್ರ ಮಠದ ಚಂದ್ರಶೇಖರ ಸ್ವಾಮೀಜಿ ಮಾತನಾಡಿ, ಈ ಭಾಗದಲ್ಲಿ ಕನ್ನಡ ಮಠ ಶ್ರೇಷ್ಠವಾಗಿದೆ. ಅಲ್ಲದೇ ಭಕ್ತರಿಗೆ ಸ್ವಾಮೀಜಿಗಳೇ ಆಸ್ತಿಯಾಗಿದ್ದಾರೆ. ಮಠಗಳು ಸಾಮಾಜಿಕ ಧ್ಯೇಯದಲ್ಲಿ ನಡೆಯುತ್ತಿವೆ. ರೈತರ, ಕಾರ್ಮಿಕರ ಹಾಗೂ ಬಡವರ ಕೆಲಸ ಮಾಡುತ್ತಿವೆ. ಈ ಮಠವು ವಿಶೇಷ ಭಕ್ತ ಪರಂಪರೆ ಹೊಂದಿದೆ. ಮಠದಿಂದ ಭಕ್ತರು ದೂರವಾಗದೇ ಬಾಂಧವ್ಯ ಹೊಂದಬೇಕು ಎಂದರು.

ಈ ವೇಳೆ ಬೆಟ್ಟದಪುರದ ಪ್ರಮುಖ ಬೀದಿಗಳಲ್ಲಿ ಹಿರಿಯ ಶ್ರೀಗಳ ಭಾವಚಿತ್ರವನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು.

ಕಾರ್ಯಕ್ರಮವನ್ನು ಅರಮೇರಿ ಕಳಂಚಿ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಉದ್ಘಾಟಿಸಿದರು. ಈ ವೇಳೆ ಸರಗೂರು ಬಿಡುಗಲು ಮಠದ ಮಹಾದೇವ ಸ್ವಾಮೀಜಿ, ಕಲ್ಮಟ್ಟದ ಸದಾಶಿವ ಸ್ವಾಮೀಜಿ, ಹಾಸನದ ತಣ್ಣೀರು ಹಳ್ಳ ಮಠದ ಶ್ರೀವಿಜಯಕುಮಾರ ಸ್ವಾಮೀಜಿ, ಮಾಯಗೌಡನಹಳ್ಳಿ ಗ್ರಾಮದ ಶ್ರೀಗಳು ಸೇರಿದಂತೆ ವಿವಿಧ ಮಠಾಧೀಶರು, ಶ್ರೀಶರಣೆ ಜಯದೇವ ತಾಯಿ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಪರಮೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಹೊಲದಪ್ಪ, ಕೊಡಗು ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷ ಶಿವಪ್ಪ, ಹರಳಲ್ಲಿ ವೇದಮೂರ್ತಿ, ಶ್ರೀಕಂಠ ಆರಾಧ್ಯ, ಬೆಟ್ಟದಪುರ ಹೋಬಳಿ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೂರ್ಗಲ್ ಶಿವಕುಮಾರಸ್ವಾಮಿ, ಬೆಟ್ಟದಪುರ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಶಿವದೇವ್ ಇನ್ನಿತರರಿದ್ದರು.

> ಶ್ರೀಮಠವು ಹಲವು ವರ್ಷಗಳಿಂದ ಸಾಂಸ್ಕೃತಿಕ ಪರಿಸರ, ಕನ್ನಡದ ಉಳಿವಿಗಾಗಿ ಹಲವು ಕಾರ್ಯಕ್ರಮಗಳನ್ನು ಮಾಡಿಕೊಂಡು ಬರುತ್ತಿದ್ದು, ಮುಂದೆಯೂ ಹೆಚ್ಚಿನ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.
> –ಶ್ರೀಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ಸಾಲಿಲಾಖ್ಯಾ ಮತ್ತು ಕನ್ನಡ ಮಠ.

ಕೆ.ಆರ್.ನಗರ ಪತ್ರಕರ್ತರ ಸಂಘಕ್ಕೆ

ಪದಾಧಿಕಾರಿಗಳು, ನಿರ್ದೇಶಕರು ಅವಿರೋಧ ಆಯ್ಕೆ



ಪಂಡಿತ್ ನಾಟಿಕರ್



ಮಧು

ಚುಂಚನಕಟ್ಟೆ, ಜೂ.30– ಕೆ.ಆರ್.ನಗರ ತಾಲೂಕು ಪತ್ರಕರ್ತರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಐವರು ಪದಾಧಿಕಾರಿಗಳು, ಏಳು ಮಂದಿ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಕಾಶಿನಾಥ್ ತಿಳಿಸಿದ್ದಾರೆ.

ಸಂಘದ ಅಧ್ಯಕ್ಷರಾಗಿ ಪಂಡಿತ್ ನಾಟಿಕರ್, ಪ್ರಧಾನ ಕಾರ್ಯದರ್ಶಿಯಾಗಿ ನಾಗೇಶ್, ಉಪಾಧ್ಯಕ್ಷರಾಗಿ ಚುಂಚನಕಟ್ಟೆ ಮಧು, ಖಜಾಂಚಿಯಾಗಿ ಎಸ್.ಯೋಗಾನಂದ, ಕಾರ್ಯದರ್ಶಿಯಾಗಿ ಸಿ.ಸಿ.ಮಹದೇವ್ ಆಯ್ಕೆಯಾಗಿದ್ದು, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಎ.ಚೈತನ್ಯ, ರಾಮಕೃಷ್ಣೇಗೌಡ, ಕೆ.ಆರ್.ಶ್ರೀನಿವಾಸ್, ಜಿ.ಕೆ.ನಾಗಣ್ಣ, ಹೆಚ್.ಎಲ್.ಆನಂದ, ಎಂ.ಎಸ್.ರವಿ ಕುಮಾರ್, ಮಹಮದ್ ಸಬೀರ್‌ಖಾನ್ ಆಯ್ಕೆಯಾಗಿದ್ದಾರೆ. ನೂತನ ಆಡಳಿತ ಮಂಡಳಿ ಪದಾಧಿಕಾರಿಗಳು ಮತ್ತು ನಿರ್ದೇಶಕರನ್ನು ಜಿಲ್ಲಾ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ನಾರಾಯಣ್, ಖಜಾಂಚಿ ಎನ್.ಸುರೇಶ್, ನಿರ್ದೇಶಕರಾದ ಸೋಮಶೇಖರ್, ಎಸ್.ಕವಿತಾ, ತಾಲೂಕು ಸಂಘದ ನಿಕಟಪೂರ್ವ ಅಧ್ಯಕ್ಷ ವಿನಯ್, ಪ್ರಧಾನ ಕಾರ್ಯದರ್ಶಿ ಭೇರ್ಯ ಮಹೇಶ್ ಅಭಿನಂದಿಸಿದ್ದಾರೆ.

ವೃದ್ಧೆ ನಾಪತ್ತೆ



ತಿ.ನರಸೀಪುರ, ಜೂ.30– ವೃದ್ಧೆ ನಾಪತ್ತೆಯಾಗಿರುವ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಟ್ಟಣದ ಇಂದಿರಾ ಕಾಲೋನಿ ನಿವಾಸಿ ಗೌರಮ್ಮಣ್ಣಿ(80) ನಾಪತ್ತೆಯಾದವರು. ಈಕೆ ಜೂ.14ರಂದು ಬೆಳಗ್ಗೆ 6.30ರಲ್ಲಿ ಮನೆಯಿಂದ ಹೊರ ಹೋದವರು ಇದುವರೆಗೂ ಮನೆಗೆ ಆಗಮಿಸಿಲ್ಲ. ಹೀಗಾಗಿ ಅವರನ್ನು ಹುಡುಕಿ ಕೊಡುವಂತೆ ಗೌರಮ್ಮಣ್ಣಿ ಅವರ ಪುತ್ರಿ ಸುಲೋಚನಮ್ಮಣ್ಣಿ ತಿ.ನರಸೀಪುರ ಠಾಣೆಗೆ ದೂರು ನೀಡಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಮೊ. 9108216861 ಅಥವಾ ದೂ.08227--261227 ಅನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಯುವ ಸಮುದಾಯ ಆರೋಗ್ಯಕರ ಜೀವನ ರೂಪಿಸಿಕೊಳ್ಳಿ



ಬಾಲಕಿಯರ ಸರ್ಕಾರಿ ಪಿಯು ಕಾಲೇಜಿನಲ್ಲಿ ಸ್ವಾಸ್ಥ್ಯ ಸಂಕಲ್ಪ ಜಾಗೃತಿ ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ಕೋಟೆ, ಜೂ.30– ಯುವ ಸಮುದಾಯ ಮಾದಕ ವಸ್ತುಗಳಿಂದ ದೂರ ವಿದ್ದು, ಆರೋಗ್ಯಕರ ಹಾಗೂ ಶಿಸ್ತಿನ ಜೀವನ ರೂಪಿಸಿಕೊಳ್ಳಬೇಕು ಎಂದು ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯ ಸ್ವಾಮಿ ಮಾಸ್ಟರ್ ಸಲಹೆ ನೀಡಿದರು.

ಪಟ್ಟಣದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸ್ವಾಸ್ಥ್ಯ ಸಂಕಲ್ಪ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಯುವ ಸಮುದಾಯವನ್ನು ಗುರಿಯಾಗಿಸಿಕೊಂಡು ಮಾದಕ ವಸ್ತುಗಳ ಬಳಕೆ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ವಿದ್ಯಾರ್ಥಿಗಳು ತಪ್ಪು ಸ್ನೇಹ ಹಾಗೂ ದುಶ್ಚಟಗಳಿಂದ ದೂರವಿದ್ದು ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಕರೀಗೌಡ ಮಾತನಾಡಿ, ವಿದ್ಯಾರ್ಥಿನಿಯರಲ್ಲಿ ಆರೋಗ್ಯ ಜಾಗೃತಿ ಹಾಗೂ ಸಾಮಾಜಿಕ ಹೊಣೆಗಾರಿಕೆ ಬೆಳೆಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಮಾದಕ ವ್ಯಸನದ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತಾಲೂಕಿನ ಆಡಳಿತ ಪ್ರಬಂಧಕ ಪುನೀತ್, ಹೆಚ್.ಡಿ. ಕೋಟೆ ವಲಯದ ಮೇಲ್ವಿಚಾರಕಿ ಚೈತ್ರಾ, ಸೇವಾ ಪ್ರತಿನಿಧಿ ಸ್ವಾಮಿ, ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಹೆಣ್ಣು ಮಕ್ಕಳ ಸುರಕ್ಷತೆ, ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಆಗ್ರಹಿಸಿ

ತಿ.ನರಸೀಪುರದಲ್ಲಿ ಜೈ ಕನ್ನಡಾಂಬೆ ಮಹಾಸೇನೆಯಿಂದ ಪ್ರತಿಭಟನೆ



ಜೈ ಕನ್ನಡಾಂಬೆ ಮಹಾಸೇನೆ ಸದಸ್ಯರು ಪ್ರತಿಭಟನೆ ನಡೆಸಿದರು.

ತಿ.ನರಸೀಪುರ, ಜೂ.30– ಮಹಿಳೆಯರು, ಹೆಣ್ಣು ಮಕ್ಕಳು ಹಾಗೂ ವಯೋವೃದ್ಧರ ಮೇಲಿನ ದೌರ್ಜನ್ಯ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಿ, ಸಮಾಜದಲ್ಲಿ ಮಹಿಳೆಯರಿಗೆ ಸುರಕ್ಷಿತ ವಾತಾವರಣ ಕಲ್ಪಿಸಬೇಕೆಂದು ಆಗ್ರಹಿಸಿ ಜೈ ಕನ್ನಡಾಂಬೆ ಮಹಾ ಸೇನೆ ತಾಲೂಕು ಘಟಕದಿಂದ ಮಂಗಳವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ ಜಮಾಯಿಸಿದ ಸಂಘಟನೆಯ ಮುಖಂಡರು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ತಾಲೂಕು ಕಚೇರಿ, ಪುರಸಭೆ, ಪೊಲೀಸ್ ಠಾಣೆ ಹಾಗೂ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಅಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಜೈ ಕನ್ನಡಾಂಬೆ ಮಹಾಸೇನೆ ತಾಲೂಕು ಅಧ್ಯಕ್ಷೆ ಶೋಭಾ ಮಾತನಾಡಿ, ರಾಜ್ಯ ಹಾಗೂ ಜಿಲ್ಲೆಯಲ್ಲಿ ಮಹಿಳೆಯರು, ಮಕ್ಕಳು ಮತ್ತು ವಯೋವೃದ್ಧರ ಮೇಲಿನ ದೌರ್ಜನ್ಯ ಪ್ರಕರಣ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಮಹಿಳೆಯರ ಸುರಕ್ಷತೆ ಖಾತ್ರಿ ಪಡಿಸುವುದು ಸರ್ಕಾರದ ಮೊದಲ ಆದ್ಯತೆಯಾಗಬೇಕು. ದೌರ್ಜನ್ಯ ಎಸಗುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ತಾಲೂಕಿನಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಕಿರುಕುಳ ಪ್ರಕರಣ ಬೆಳಕಿಗೆ ಬರುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಸಮರ್ಪಕ ಗಮನ ಹರಿಸುತ್ತಿಲ್ಲ. ಇಂತಹ ನಿರ್ಲಕ್ಷ್ಯದಿಂದ ತಪ್ಪಿತಸ್ಥರ ಧೈರ್ಯ ಹೆಚ್ಚಾಗುತ್ತಿದೆ. ಮಹಿಳೆಯರು ಹಾಗೂ ಮಕ್ಕಳಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ತಾಲೂಕು ಆಡಳಿತ ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.


ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಶೋಭಾ ಮಾತನಾಡಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಮಹಿಳೆಯರಿಗೆ ಅಗತ್ಯ ಆರೋಗ್ಯ ಸೇವೆಗಳು ಸಮರ್ಪಕವಾಗಿ ದೊರೆಯುತ್ತಿಲ್ಲ. ಮಹಿಳೆಯರು, ಹೆಣ್ಣು ಮಕ್ಕಳು ಹಾಗೂ ವಯೋವೃದ್ಧರ ಮೇಲೆ ನಡೆಯುತ್ತಿರುವ ದೈಹಿಕ ಮತ್ತು ಮಾನಸಿಕ ದೌರ್ಜನ್ಯ ಪ್ರಕರಣಗಳನ್ನು ಆಡಳಿತ ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಶೃತಿ ಮಾತನಾಡಿದರು. ಪ್ರತಿಭಟನೆ ಬಳಿಕ ತಾಲೂಕು ಕಚೇರಿಯಲ್ಲಿ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಹಾಗೂ ಪುರಸಭೆ, ಪೊಲೀಸ್ ಠಾಣೆ, ಸಾರ್ವಜನಿಕ ಆಸ್ಪತ್ರೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ ಪ್ರತಿಭಟನಾಕಾರರು, ಮಹಿಳೆಯರು, ಮಕ್ಕಳು ಹಾಗೂ ವಯೋವೃದ್ಧರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ನಿಯಂತ್ರಿಸಲು ವಿಶೇಷ ಕಾರ್ಯಪಡೆ ರಚಿಸುವುದು. ಮಹಿಳಾ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡುವುದು ಹಾಗೂ ಮಾದಕ ವಸ್ತುಗಳ ಮಾರಾಟ ಮತ್ತು ಬಳಕೆಯನ್ನು ಕಟ್ಟುನಿಟ್ಟಾಗಿ ತಡೆಯುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ರಾಜ್ಯ ಸಂಸ್ಥಾಪಕ ಎಸ್.ಸತೀಶ್, ಕೋಶಾಧ್ಯಕ್ಷ ಹರೀಶ್, ಇಂದುಮತಿ, ರಮೇಶ್, ಸುರೇಶ್, ಗಿರೀಶ್, ಗೋಪಾಲ್, ಮಲ್ಲೇಶ್, ತಾಲೂಕು ಘಟಕದ ಅಧ್ಯಕ್ಷ ಎಂ. ಮಾದೇಶ್, ಉಪಾಧ್ಯಕ್ಷ ಕೃಷ್ಣ, ನಂದೀಶ್, ಸುಭಾಷ್, ರಾಮು, ರವಿ, ಮಹಿಳಾ ಘಟಕದ ಗೌರವಾಧ್ಯಕ್ಷೆ ಸುಶೀಲಮ್ಮ, ಸಹಪ್ರಧಾನ ಕಾರ್ಯದರ್ಶಿ ಕಾಂಚನ, ಕಾರ್ಯದರ್ಶಿ ಬಿ.ಮಂಜುಳಾ, ಸಹ ಕಾರ್ಯದರ್ಶಿ ಸಹನ, ಸಂಘಟನಾ ಕಾರ್ಯದರ್ಶಿ ಸವಿತಾ, ಸೌಮ್ಯ, ಸನ್ನಿಧಿ, ವಸಂತ, ಮಾನ್ವಿತ ಮತ್ತಿತರರಿದ್ದರು.

ಅಂಬೇಡ್ಕರ್ ಭವನಕ್ಕೆ ಭೂಮಿ, ಹಣ ಮಂಜೂರು

ಸರ್ಕಾರಕ್ಕೆ ದಲಿತ ಮುಖಂಡ ಆನಂದಸ್ವಾಮಿ ಅಭಿನಂದನೆ



ಸುದ್ದಿಗೋಷ್ಠಿಯಲ್ಲಿ ಹರಿಹರ ಆನಂದಸ್ವಾಮಿ ಮಾತನಾಡಿದರು.

ಹುಣಸೂರು, ಜೂ.30– ಅಂಬೇಡ್ಕರ್ ಭವನ ನಿರ್ಮಾಣಕ್ಕೆ 1.10 ಎಕರೆ ಭೂಮಿ ಹಾಗೂ 2 ಕೋಟಿ ರೂ. ಬಿಡುಗಡೆ ಮಾಡಿರುವ ಕಾಂಗ್ರೆಸ್ ಸರ್ಕಾರಕ್ಕೆ ದಲಿತ ಮುಖಂಡ ಹರಿಹರ ಆನಂದಸ್ವಾಮಿ ಅಭಿನಂದನೆ ಸಲ್ಲಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಮುಖನಹಳ್ಳಿ ಸರ್ವೇ ನಂ.30ರಲ್ಲಿ ಅಂಬೇಡ್ಕರ್ ಭವನಕ್ಕೆ 1.10 ಎಕರೆ ಭೂಮಿ ಮಂಜೂರು ಮಾಡಲು ಶ್ರಮಿಸಿರುವ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ವಕೀಲ ಪುಟ್ಟರಾಜು ಮಾತನಾಡಿ, ಕಳೆದ 15 ವರ್ಷದಿಂದ ದಲಿತ ಸಮುದಾಯದ ಒತ್ತಾಸೆ ಮೇರೆಗೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ ಪರಿಶ್ರಮದಿಂದ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಭೂಮಿ ಹಾಗೂ ಹಣ ಬಿಡುಗಡೆಯಾಗಿರುವುದು ನಮ್ಮ ಹೋರಾಟಕ್ಕೆ ಸಿಕ್ಕ ಫಲವಾಗಿದೆ ಎಂದರು.

ಬಿಳಿಕೆರೆ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಬಸವರಾಜು ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಬನ್ನಿಕುಪ್ಪೆ ಚಿಕ್ಕಸ್ವಾಮಿ ಇದ್ದರು.

ಸನ್ಮಾನ....



ಮೈಸೂರು ತಾಲೂಕಿನ ಜಯಪುರ ಪೊಲೀಸ್ ಠಾಣೆ ಸೇರಿದಂತೆ ವಿವಿಧೆಡೆ ಸೇವೆ ಸಲ್ಲಿಸಿ ನಿವೃತ್ತರಾದ ಎಸ್.ಕೆ.ಕೃಷ್ಣಶೆಟ್ಟಿ ಮತ್ತು ಅವರ ಪತ್ನಿ ಎ.ನೇತ್ರಾವತಿ ಅವರನ್ನು ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸನ್ಮಾನಿಸಿ ಬೀಳ್ಕೊಟ್ಟರು.

ಪ್ರತಿಯೊಬ್ಬರೂ ಕೆಂಪೇಗೌಡರನ್ನು ಸ್ಮರಿಸಬೇಕು



ಹುಣಸೂರಲ್ಲಿ ಕೆಂಪೇಗೌಡ ಜಯಂತಿ ನಡೆಯಿತು.

ಹುಣಸೂರು, ಜೂ.30– ಸರ್ವ ಜನಾಂಗದ ಶ್ರೇಯಸ್ಸಿಗೆ ತಮ್ಮ ಬದುಕು ಮೀಸಲಿಟ್ಟು ಬೃಹತ್ ನಗರ ಸ್ಥಾಪಿಸಿ ವಿಶ್ವ ಮಾನವರಾದ ಕೆಂಪೇಗೌಡರನ್ನು ಪ್ರತಿಯೊಬ್ಬರೂ ಸ್ಮರಿಸಬೇಕು ಎಂದು ನಗರಸಭೆ ಮಾಜಿ ಸದಸ್ಯ ಶ್ರೀನಾಥ್ ತಿಳಿಸಿದರು.

ನಗರದ ದಾವಣಿ ಬೀದಿ ಮುಖ್ಯ ವೃತ್ತದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯಲ್ಲಿ ಮಾತನಾಡಿದ ಅವರು, ಎಲ್ಲಾ ಸಮುದಾಯಗಳಿಗೂ 65 ಪೇಟೆಗಳು, ನೂರಾರು ಕೆರೆ, ಕಟ್ಟೆಗಳು, ಊರುಗಳ ಕಾವಲಿಗೆ ನಾಲ್ಕು ದಿಕ್ಕುಗಳಿಗೂ ಗೋಪುರ ನಿರ್ಮಿಸಿದ ಅವರ ತತ್ವಾದರ್ಶಗಳು ನಮಗೆ ದಾರಿದೀಪ ಎಂದರು.

ನಾಡಪ್ರಭು ಕೆಂಪೇಗೌಡ ಯುವಪಡೆ ಸಂಸ್ಥಾಪಕ ನಿರ್ದೇಶಕ ವೆಂಕಟೇಶ್ ಮಾತನಾಡಿ, ಕೆಂಪೇಗೌಡರ ಸಾಧನೆ ಗುರುತಿಸಿ ಸರ್ಕಾರ ಜಯಂತಿ ಆಚರಿಸುವ ಮುನ್ನವೇ ಹುಣಸೂರಲ್ಲಿ ಅದ್ಧೂರಿಯಾಗಿ ಕೆಂಪೇಗೌಡರ 500ನೇ ಜಯಂತಿ ಆಚರಿಸುವ ಮೂಲಕ ಸರ್ಕಾರ ಗುರ್ತಿಸುವಂತೆ ಮಾಡಿದ ಕೀರ್ತಿ ಹುಣಸೂರು ಜನತೆ ಹಾಗೂ ಒಕ್ಕಲಿಗ ಯುವ ಪಡೆಗೆ ಸಲ್ಲುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಯಜಮಾನ್ ಕೆಂಪನಿಂಗೇಗೌಡ, ಪುಟ್ಟಗಂಗೇಗೌಡ, ವಕೀಲ ಸುಧಾಕರ್, ಪುನೀತ್, ಕಾಲೇಜು ಸೀನಣ್ಣ ಹರೀಶ್, ದಿನೇಶ್, ಹನಿ, ಲೋಕೇಶ್, ಡ್ರೈವರ್ ಅನಂತ್ ಇತರರಿದ್ದರು.

ವಿಶ್ವದ ಗಮನ ಸೆಳೆದ ಕೆಂಪೇಗೌಡರ ದೂರದೃಷ್ಟಿಯ ಯೋಜನೆಗಳು

ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಬಣ್ಣನೆ



ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜೂ.30– ನಾಡಪ್ರಭು, ಬೆಂಗಳೂರು ನಿರ್ಮಾತೃ ಕೆಂಪೇಗೌಡರು ಕೇವಲ ಒಂದು ನಗರವನ್ನು ಕಟ್ಟಿದ ಮಹಾನ್ ವ್ಯಕ್ತಿಯಲ್ಲ. ಜನಪರ ಆಡಳಿತ, ದೂರದೃಷ್ಟಿಯ ಅಭಿವೃದ್ಧಿ ಹಾಗೂ ಉತ್ತಮ ಸಮಾಜ ನಿರ್ಮಾಣಕ್ಕೆ ಅಡಿಪಾಯ ಹಾಕಿದ ಅಪರೂಪದ ನಾಯಕ ಎಂದು ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಬಣ್ಣಿಸಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಒಕ್ಕಲಿಗರ ಸಂಘದ ಸಂಯುಕ್ತಾಶ್ರಯದಲ್ಲಿ ಸೋಮವಾರ ನಡೆದ ನಾಡಪ್ರಭು, ಬೆಂಗಳೂರು ನಿರ್ಮಾತೃ ಕೆಂಪೇಗೌಡರ 517ನೇ ಜಯಂತಿಯಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ಕೆಂಪೇಗೌಡರು ತಮ್ಮ ಆಡಳಿತಾವಧಿಯಲ್ಲಿ ಕೇವಲ ಕೋಟೆ, ಅರಮನೆಗಳನ್ನು ನಿರ್ಮಿಸುವುದಕ್ಕೆ ಸೀಮಿತವಾಗದೇ ಜನರ ಜೀವನಮಟ್ಟ ಸುಧಾರಣೆಗೆ ಅಗತ್ಯವಾದ ಕೆರೆಗಳು, ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ, ದೇವಾಲಯಗಳು, ಮಾರುಕಟ್ಟೆಗಳು ಹಾಗೂ ವ್ಯಾಪಾರ ಕೇಂದ್ರಗಳನ್ನು ನಿರ್ಮಿಸುವ ಮೂಲಕ ಅಭಿವೃದ್ಧಿಯ ಹೊಸ ಪರಿಕಲ್ಪನೆಯನ್ನು ರೂಪಿಸಿದರು. ಅವರು ನಿರ್ಮಿಸಿದ ಬೆಂಗಳೂರಿನ ದೂರದೃಷ್ಟಿಯ ಯೋಜನೆಗಳು ಇಂದಿಗೂ ವಿಶ್ವದ ಗಮನ ಸೆಳೆಯುತ್ತಿವೆ. ಇಂತಹ ಮಹಾನ್ ವ್ಯಕ್ತಿತ್ವದ ಆದರ್ಶಗಳನ್ನು ಯುವ ಪೀಳಿಗೆಗೆ ಪರಿಚಯಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.

ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ವೈ.ಎಸ್.ರಾಮಸ್ವಾಮಿ ಮಾತನಾಡಿ, ಕೆಂಪೇಗೌಡರ ಜಯಂತಿ ಕೇವಲ ಒಂದು ಸಮುದಾಯದ ಹಬ್ಬವಲ್ಲ. ಅವರ ಆಡಳಿತ, ಸೇವೆ, ಅಭಿವೃದ್ಧಿ ಹಾಗೂ ಮಾನವೀಯ ಮೌಲ್ಯಗಳು ಇಡೀ ಸಮಾಜಕ್ಕೆ ಪ್ರೇರಣೆಯಾಗಿವೆ. ಸಮಾಜದ ಎಲ್ಲಾ ವರ್ಗದ ಜನರು ಅವರ ಆದರ್ಶಗಳನ್ನು ಅಳವಡಿಸಿಕೊಂಡಾಗ ಮಾತ್ರ ಜಯಂತಿ ಆಚರಣೆಗೆ ನಿಜವಾದ ಅರ್ಥ ಬರುತ್ತದೆ ಎಂದರು.

ವಿಜಯ ಸಂಜೆ ಪದವಿ ಕಾಲೇಜಿನ ಉಪ ಪ್ರಾಂಶುಪಾಲ ಶಾಂತರಾಜು ಪ್ರಧಾನ ಭಾಷಣ ಮಾಡಿದರು. ಇದಕ್ಕೂ ಮುನ್ನ ಬೆಳಗ್ಗೆ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ ಒಕ್ಕಲಿಗ ಸಮಾಜದ ಮುಖಂಡರು, ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ವಿಶೇಷ ಪೂಜೆ ಸಲ್ಲಿಸಿದರು. ಅಲಂಕೃತ ಬೆಳ್ಳಿ ರಥದಲ್ಲಿ ವಿರಾಜಮಾನವಾಗಿದ್ದ ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ನಡೆಸಿದ ನಂತರ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್ ಮೆರವಣಿಗೆಗೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ವಜ್ರೇಗೌಡ, ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಡಾ.ಮಲ್ಲಿಕಾರ್ಜುನ್, ಒಕ್ಕಲಿಗರ ಸಂಘದ ನಿರ್ದೇಶಕ ಮಂಜೇಶ್ ಗೌಡ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಉಪಾಧ್ಯಕ್ಷ ಮಹೇಶ್, ನುಗ್ಗಹಳ್ಳಿ ಕೊಪ್ಪಲು ಎನ್.ಎಂ.ರಾಮಚಂದ್ರ, ಪಿ.ಸ್ವಾಮಿನಾಥಗೌಡ, ಸಂದೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ರಾಜಣ್ಣ, ಇಂದ್ರೇಶ್, ಜೈಕುಮಾರ್, ತಿರುಮಕೂಡಲು ಲಕ್ಷ್ಮಣ, ಮಣಿಕಂಠರಾಜ್‌ಗೌಡ, ಸುನೀಲ್, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಶ್ರೀನಿವಾಸ್, ಲೈಲ್ಯಾಂಡ್ ರವಿ, ಯಜಮಾನ್ ಚಂದ್ರೇಗೌಡ, ಡೈರಿ ಶಿವಣ್ಣ, ಮಂಜು, ಶ್ರೀನಿವಾಸ್, ಇಓ ರಂಗಸ್ವಾಮಿ, ಸೆಸ್ಕಾಂ ಎಇಇ ವೀರೇಶ್, ಸಿಡಿಪಿಓ ಗೋವಿಂದ ರಾಜು, ಹಿಂದುಳಿದ ವರ್ಗದ ಕಲ್ಯಾಣಾಧಿಕಾರಿ ರಾಜಣ್ಣ, ಪುರಸಭಾ ಮುಖ್ಯಾಧಿಕಾರಿ ಸತೀಶ್ ಇತರರಿದ್ದರು.

> ಕೆಂಪೇಗೌಡರ ಆಡಳಿತದಲ್ಲಿ ಮಾನವೀಯ ಮೌಲ್ಯಗಳು, ಸಾಮಾಜಿಕ ಸಾಮರಸ್ಯ ಮತ್ತು ಜನಪರ ಚಿಂತನೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿತ್ತು. ಅಭಿವೃದ್ಧಿ ಎಂದರೆ ಕೇವಲ ಕಟ್ಟಡಗಳ ನಿರ್ಮಾಣವಲ್ಲ. ಜನರ ಬದುಕು ಉತ್ತಮಗೊಳ್ಳುವಂತೆ ಮೂಲ ಸೌಕರ್ಯ ಕಲ್ಪಿಸುವುದು ಎಂಬುದನ್ನು ಅವರು ತಮ್ಮ ಆಡಳಿತದ ಮೂಲಕ ತೋರಿಸಿಕೊಟ್ಟಿದ್ದಾರೆ. ಅವರ ದೂರದೃಷ್ಟಿಯ ಫಲವಾಗಿ ಬೆಂಗಳೂರು ಇಂದು ದೇಶದ ಆರ್ಥಿಕ, ತಾಂತ್ರಿಕ ಹಾಗೂ ಶಿಕ್ಷಣ ಕ್ಷೇತ್ರದ ಪ್ರಮುಖ ಕೇಂದ್ರವಾಗಿ ಬೆಳೆದಿದೆ. ಕೆಂಪೇಗೌಡರ ಜಯಂತಿಯನ್ನು ಆಚರಿಸುವ ಮೂಲಕ ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಬೇಕು.
> –ಆರ್.ಚೆಲುವರಾಜು, ಮೈಮುಲ್ ಮಾಜಿ ಅಧ್ಯಕ್ಷ.

ತಲಕಾಡು ಶ್ರೀ ಗೋವಿಂದಾನಂದ ಸರಸ್ವತಿ ಸ್ವಾಮಿಗಳ ಚಾತುರ್ಮಾಸ್ಯ ಧರ್ಮಪ್ರಚಾರದ ಪೂರ್ವಭಾವಿ ಸಭೆ


ಶ್ರೀಶಂಕರಾಚಾರ್ಯ ಭಾಗವತೀಯ ಜಗದ್ಗುರು ಶ್ರೀ ಗೋವಿಂದಾನಂದ ಸರಸ್ವತಿ ಸ್ವಾಮಿಗಳ 18ನೇ ಚಾತುರ್ಮಾಸ್ಯದ ಪೂರ್ವಭಾವಿ ಸಭೆಯಲ್ಲಿ ಶ್ರೀಗಳು ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು,ಜೂ.30– ಮೈಸೂರಿನ ಜಯನಗರದ ಶ್ರೀರಾಮಮಂದಿರದಲ್ಲಿ ಶ್ರೀಶಂಕರಾಚಾರ್ಯ ಭಾಗವತೀಯ ಜಗದ್ಗುರು ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿಗಳ 18ನೇ ಚಾತುರ್ಮಾಸ್ಯದ ಧರ್ಮ ಪ್ರಚಾರದ ಪೂರ್ವಭಾವಿ ಸಭೆ ನಡೆಸಲಾಯಿತು.

ಈ ವೇಳೆ ಚಾತುರ್ಮಾಸ್ಯದ ಪೋಸ್ಟರ್ ಬಿಡುಗಡೆ ಮಾಡಿದ ತಲಕಾಡು ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿ ಮಾತನಾಡಿ, ಆಷಾಢ ಶುದ್ಧ ಹುಣ್ಣಿಮೆ ವ್ಯಾಸ ಪೂರ್ಣಿಮೆಯಂದು ಚಾತುರ್ಮಾಸ್ಯ ವ್ರತ ಸಂಕಲ್ಪ ಮಾಡುವುದಾಗಿ ತಿಳಿಸಿದರು.

ಧರ್ಮ ರಕ್ಷಣೆಗಾಗಿ ಆಷಾಢ ಭಾದ್ರಪದ ಶ್ರಾವಣ ಮಾಸದ ಹುಣ್ಣಿಮೆಯವರೆಗೂ ಎರಡು ತಿಂಗಳು ನಿರಂತರವಾಗಿ ವಿವಿಧ ಹೋಮ ಹವನ, ವೇದ ಪ್ರವಚನ, ಅನ್ನದಾಸೋಹ, ಸಾಂಸ್ಕೃತಿಕ ಸಂಗೀತ ಮತ್ತು ಭಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಯುವಸಮುದಾಯ, ಮಹಿಳಾ ಸಂಘಗಳನ್ನ ಒಗ್ಗೂಡಿಸಿ, ಪ್ರತಿನಿತ್ಯ ವಿಷ್ಣು–ಶಿವ ಸಹಸ್ರನಾಮ, ರುದ್ರ ಪಾರಾಯಣದ ಮೂಲಕ ಧರ್ಮ ಜಾಗೃತಿ ಮೂಡಿಸಲಾಗುವುದು ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ತಲಕಾಡಿನ ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನಮ್ ಮಠವು ಶುಕ ಮಹರ್ಷಿಗಳಿಂದ ಸ್ಥಾಪಿತವಾಗಿ ಗಂಗರ ರಾಜಗುರುಪೀಠವಾಗಿತ್ತು ಎನ್ನುವ ಪ್ರತೀತಿಯಿದೆ. ಗತಕಾಲದ ವೈಭವ ಪರಂಪರೆ ಮತ್ತೊಮ್ಮೆ ಮರುಕಳಿಸುವಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡಿರುವ ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿಗಳ ಕಾರ್ಯ ಮಾದರಿಯಾಗಿದೆ. ಗಜಾರಣ್ಯ ಕ್ಷೇತ್ರವನ್ನ ಮತ್ತೊಮ್ಮೆ ವಿಜೃಂಭಿಸಲು ಆರಾಧ್ಯ ದೇವರಾದ ಬಾಲಕೃಷ್ಣ, ಗಣಪತಿ ಆದ್ಯಲಕ್ಷ್ಮಿ ದೇವಾಲಯ, ದಾಸೋಹ ಭವನ, ಗೋಶಾಲೆ, ಗುರುಭವನ, ಭಕ್ತಾಧಿಗಳಿಗೆ ವಸತಿನಿಲಯ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗಿದೆ ಎಂದು ಬಣ್ಣಿಸಿದರು.

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಮಾತನಾಡಿ, ಗೋಪಾಲನಂದ ಸರಸ್ವತಿ ಸ್ವಾಮಿಗಳ ನಂತರ 2009ರಲ್ಲಿ 85ನೇ ಪೀಠಾಧಿಪತಿಗಳಾಗಿ ಬಂದಂತಹ ಶ್ರೀ ಗೋವಿಂದಾನಂದ ಸರಸ್ವತಿ ಮಹಾಸ್ವಾಮಿಗಳು ಮಾಡಿರುವ ಸಾಧನೆಯನ್ನು ಒಮ್ಮೆಂವಾದರೂ ಕಣ್ತುಂಬಿಕೊಳ್ಳಬೇಕು. ಕೇವಲ ಒಂದು ಕೊಠಡಿಯ ಛತ್ರದಂತೆ ದುಃಸ್ಥಿತಿಯಲ್ಲಿದ್ದ ಸ್ಥಳವನ್ನು ಸಾಕಷ್ಟು ಸವಾಲುಗಳನ್ನು ಎದುರಿಸಿ, ಅಭಿವೃದ್ಧಿಪಡಿಸಿದ್ದಾರೆ. ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನಮ್ ಮಠದ ಗತವೈಭವ ಮರುಕಳಿಸುವಂತೆ ಮಾಡಿದ್ದಾರೆ. ನೆರೆ ರಾಜ್ಯಗಳಾದ ತಮಿಳುನಾಡು, ಕೇರಳ, ಆಂಧ್ರಪ್ರದೇಶ, ತೆಲಂಗಾಣದಲ್ಲೂ ಮಠದ ಸಾವಿರಾರು ಭಕ್ತವೃಂದವಿದೆ ಎಂದು ತಿಳಿಸಿದರು.

ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ಧರ್ಮ ರಕ್ಷಣೆಗಾಗಿ ಪ್ರತಿಯೊಬ್ಬರು ಗುರುಗಳ ಮಾತುಗಳನ್ನ ಕೇಳಿ, ನಡೆಯಬೇಕು. ಇತಿಹಾಸ, ಪರಂಪರೆ ಅರಿತು ಸಂಸ್ಕಾರ–ಸಂಸ್ಕೃತಿಯೊಂದಿಗೆ ಸಮಾಜದಲ್ಲಿ ಆರೋಗ್ಯಕರ ವಾತಾವರಣ ಕಾಣಬಹುದು. ವ್ಯಾಸ ಪೂರ್ಣಿಮೆ ಮತ್ತು ಉಪಾಕರ್ಮದಲ್ಲಿ ಗುರುಗಳಿಗೆ ಸಲ್ಲಿಸುವ ಗುರುಭಕ್ತಿ ನಮ್ಮ ಜೀವನದ ಉಜ್ವಲ ಭವಿಷ್ಯಕ್ಕೆ ಶಕ್ತಿತುಂಬುತ್ತದೆ ಎಂದು ಹೇಳಿದರು.

ವಿಪ್ರ ಮಹಿಳಾ ಸಂಗಮದ ಅಧ್ಯಕ್ಷೆ ಡಾ.ಲಕ್ಷ್ಮೀದೇವಿ ಮಾತನಾಡಿ ತಲಕಾಡಿನಲ್ಲಿ ಗೋವಿಂದಾನಂದ ಸರಸ್ವತಿ ಸ್ವಾಮಿಗಳ ಚಾತುರ್ಮಾಸ್ಯ ವ್ರತದಲ್ಲಿ ಮಹಿಳಾ ಭಜನಾ ಮಂಡಳಿಯಿಂದ ವಿಷ್ಣು–ಲಲಿತಾ ಸಹಸ್ರನಾಮ, ಶಿವ ಸಹಸ್ರನಾಮ ರುದ್ರ ಪಾರಾಯಣ ನಡೆಸಲಾಗವುದು. ಭಕ್ತರಿಗೆ ಸಾರಿಗೆ ಮತ್ತು ವಸತಿ ಪ್ರಸಾದ ವ್ಯವಸ್ಥೆ ಮಾಡಿದ್ದು, ಆಸಕ್ತ ಭಜನಾ ಮಂಡಳಿಗಳು (ಮೊ.ಸಂ.78290 67769) ಸಂಪರ್ಕಿಸಬಹುದು ಎಂದರು.

ಸಭೆಯಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಂಪ್ರಸಾದ್, ಸೌಭಾಗ್ಯ ಮೂರ್ತಿ, ವಿದ್ವಾನ್ ಅಂಬಾಪ್ರಸಾದ್, ಅಗಸ್ತ್ಯ ಸೊಸೈಟಿ ನಿರ್ದೇಶಕ ವಿಕ್ರಂ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಹೊಯ್ಸಳ ಕರ್ನಾಟಕ ಸಂಘದ ನಿರ್ದೇಶಕ ರಂಗನಾಥ್ ಸುಬ್ಬರಾವ್, ಮಠದ ಆಡಳಿತಾಧಿಕಾರಿ ವಿಜಯ ಕುಮಾರ್, ಶ್ರೀ ರಾಮಾನುಜ ಸೊಸೈಟಿ ನಿರ್ದೇಶಕ ಟಿ.ಎಸ್.ಅರುಣ್, ವಿಪ್ರಜಾಗೃತಿ ವೇದಿಕೆ ಅಧ್ಯಕ್ಷ ಮುಳ್ಳೂರು ಸುರೇಶ್, ಗ್ರಾಜ್ಯುಯೇಟ್ ಬ್ಯಾಂಕ್ ನಿರ್ದೇಶಕಿ ವರಲಕ್ಷ್ಮಿ, ಜಯನಗರ ರಾಮಮಂದಿರ ಕಾರ್ಯದರ್ಶಿ ಅರುಣ್ ಶರ್ಮ, ಶೃತಿ, ಹರೀಶ್, ಆಶುಶಯನ, ಗಣೇಶ್, ನಾಗಭೂಷಣ್, ಪ್ರಶಾಂತ್, ವಿಶ್ವನಾಥ್, ಮಿರ್ಲೆ ಪಣೀಶ್, ಸುಚೀಂದ್ರ, ಮಂಜುನಾಥ್, ಪ್ರದೀಪ್, ರಘು, ವನಜ, ಅಂಜನ್, ಸುಬ್ಬಣ್ಣ, ಮುರಳಿ, ಭದ್ರಿ, ವೆಂಕಟೇಶ್ ರಾವ್, ಶೇಷಾಚಲ ಮತ್ತಿತರರು ಭಾಗವಹಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಅಂಗಿಕಾರನ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಬಲರಾಮನ ಆ ದಿನಗಳು (ಕ)	4 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ವೆಲ್‌ಕಮ್ ಟು ದಿ ಜಂಗಲ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
ಬಲರಾಮ(ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾನ್ ಸಿಟಿ (ತ)	4 ಪ್ರದರ್ಶನಗಳು
ಸಂಗಂ	
ವೆಲ್‌ಕಮ್ ಟು ದಿ ಜಂಗಲ್ (ಹಿ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ) + ಒಕ್ಕಡು (ತೆ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರೈತರ ಮಕ್ಕಳಿಗೆ ಹೆಣ್ಣು ಕೊಡಿ (ಕ) + ಕಾಲಘಟ್ಟ (ಕ)	2+2 ಪ್ರದರ್ಶನಗಳು

ಮೈಸೂರು ಬೇಸಿಗೆ ರೇಸ್

6ನೇ ದಿನ, ಬುಧವಾರ, 1–7–2026

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ರಿಪಬ್ಲಿಕನ್ ಪ್ಲೇಟ್ ಡಿII–1200 ಮೀ. ರೇಟೆಡ್ (00 ರಿಂದ 25). ಮ.2.00ಕ್ಕೆ
1. ಟ್ರಂಪ್ ಬೇಬಿ 2. ಆರ್‌ಮಾಮೆಂಟ್

II. ಕೊಡ್ಲಿ ಪ್ಲೇಟ್–1400 ಮೀ. ರೇಟೆಡ್ (20 ರಿಂದ 45). ಮ.2.30ಕ್ಕೆ
1 ವಾಲ್ವರ್ 2. ಐರನ್ ಕಿಂಗ್

III. ರಿಪಬ್ಲಿಕನ್ ಪ್ಲೇಟ್ ಡಿI–1200 ಮೀ. ರೇಟೆಡ್ (00 ರಿಂದ 25). ಮ.3.00ಕ್ಕೆ
1 ಲಾರ್ಡ್ಸ್ ಗ್ರೇಸ್ 2 ಐ ಲೈಕ್ ಟೂ ಹೂ ಹಾ

IV. ರಿಸೌಂಡ್ ಪ್ಲೇಟ್ ಡಿII–1200 ಮೀ. ರೇಟೆಡ್ (40 ರಿಂದ 65). ಮ.3.30ಕ್ಕೆ
1. ಲೇಡಿ ಲಯನ್ 2. ಫಾಲ್ಕನ್ ಫ್ಯೂರಿ

V. ಸ್ಟೀವರ್ಡ್ಸ್ ಟ್ರೋಫಿ–1400 ಮೀ. ರೇಟೆಡ್ (80 ಮತ್ತು ಮೇಲ್ವರ್ಗ). ಸಂ.4.00ಕ್ಕೆ
1. ಎಫಿಕೆಸಿ 2. ಸ್ಟಿಲ್ ಐ ರೈಸ್

VI. ಹಿರಿಯೂರು ಪ್ಲೇಟ್–1600 ಮೀ. (ರೇಟೆಡ್ 20 ರಿಂದ 45). ಸಂ.4.30ಕ್ಕೆ
1. ಸ್ಟಾರ್ ಆಫ್ ಲೈಟ್ 2. ಇಸಾ ಬೆಲ್ಲಾ

VII. ರಿಸೌಂಡ್ ಪ್ಲೇಟ್ ಡಿI–1200 ಮೀ. ರೇಟೆಡ್ (40 ರಿಂದ 65). ಸಂ5.00ಕ್ಕೆ
1. ಸಿಲ್ವರ್ ಕ್ವೆಸ್ಟ್ 2. ಮಾರ್ಕ್ ಒನ್

ದಿನದ ಅತ್ಯುತ್ತಮ	ಸಿಲ್ವರ್ ಕ್ವೆಸ್ಟ್
ಡಬ್ಬಲ್	ಎಫಿಕೆಸಿ, ಸ್ಟಾರ್ ಆಫ್ ಲೈಟ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	2, 3 ಮತ್ತು 4
II ಟ್ರಿಬಲ್	5, 6 ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಬಿಸಿ

ಉಚಿತ ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.30– ಮೈಸೂರಿನ ವಿಜಯನಗರದಲ್ಲಿರುವ ರಾಜ್ಯ ಒಕ್ಕಲಿಗರ ಸಂಘದ ವಿದ್ಯಾರ್ಥಿನಿಯರ ಉಚಿತ ವಸತಿ ನಿಲಯಕ್ಕೆ 2026–27ನೇ ಸಾಲಿನ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿನಿಯರು ಸಂಘದ ಕಚೇರಿಯಲ್ಲಿ ಅರ್ಜಿ ಪಡೆದು, ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಬಹುದು ಎಂದು ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ.ಮಂಚೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.ಸಂ.9481940921 ಅನ್ನು ಸಂಪರ್ಕಿಸಬಹುದು.

ಇಂದಿನಿಂದ ಡೀಸೆಲ್ ಮೇಲಿನ ನಿರ್ಬಂಧ ತೆರವುಗೊಳಿಸಿದ ಕೇಂದ್ರ ಸರ್ಕಾರ

ನವದೆಹಲಿ: ದೇಶದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಪೂರೈಕೆ ಪರಿಸ್ಥಿತಿ ಸುಧಾರಿಸಿರುವ ಹಿನ್ನೆಲೆಯಲ್ಲಿ, ವಾಣಿಜ್ಯ, ಕೈಗಾರಿಕಾ ಹಾಗೂ ಸಾಂಸ್ಥಿಕ ಬಳಕೆದಾರರಿಗೆ ಚಿಲ್ಲರೆ ಪೆಟ್ರೋಲ್ ಬಂಕ್‌ಗಳಿಂದ ಇಂಧನ ಖರೀದಿಸಲು ವಿಧಿಸಲಾಗಿದ್ದ ತಾತ್ಕಾಲಿಕ ನಿರ್ಬಂಧಗಳನ್ನು ಕೇಂದ್ರ ಸರ್ಕಾರ ಜುಲೈ 1ರಿಂದ ಹಿಂತೆಗೆದುಕೊಳ್ಳುವುದಾಗಿ ಘೋಷಿಸಿದೆ.

ಈ ನಿರ್ಧಾರದಿಂದ ವಾಣಿಜ್ಯ, ಕೈಗಾರಿಕಾ ಹಾಗೂ ಸಾಂಸ್ಥಿಕ ಬಳಕೆದಾರರು ಮತ್ತೆ ಸಾಮಾನ್ಯ ಪೆಟ್ರೋಲ್ ಬಂಕ್‌ಗಳಿಂದ ಪೆಟ್ರೋಲ್ ಮತ್ತು ಡೀಸೆಲ್ ಖರೀದಿಸಬಹುದಾಗಿದೆ. ಜೊತೆಗೆ, ಒಂದು ವಾಹನಕ್ಕೆ ದಿನಕ್ಕೆ ಗರಿಷ್ಠ 200 ಲೀಟರ್ ಡೀಸೆಲ್ ಮಾತ್ರ ಮಾರಾಟ ಮಾಡಬೇಕೆಂಬ ಮಿತಿಯನ್ನೂ ಸರ್ಕಾರ ರದ್ದುಪಡಿಸಿದೆ.

ಜೂನ್ 29ರಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಹೊರಡಿಸಿದ ಆದೇಶದಲ್ಲಿ, ದೇಶದ ಇಂಧನ ಪೂರೈಕೆ ಪರಿಸ್ಥಿತಿಯನ್ನು ಸಮಗ್ರವಾಗಿ ಪರಿಶೀಲಿಸಿದ ಬಳಿಕ ಈ ತಾತ್ಕಾಲಿಕ ನಿಯಮಗಳು ಇನ್ನು ಮುಂದೆ ಅಗತ್ಯವಿಲ್ಲ ಎಂಬ ನಿರ್ಧಾರಕ್ಕೆ ಬಂದಿರುವುದಾಗಿ ತಿಳಿಸಲಾಗಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಜಾರಿಗೊಳಿಸಿದ್ದ ಈ ಕ್ರಮಗಳು ತಮ್ಮ ಉದ್ದೇಶವನ್ನು ಯಶಸ್ವಿಯಾಗಿ ನೆರವೇರಿಸಿರುವ ಹಿನ್ನೆಲೆಯಲ್ಲಿ, ಅವುಗಳನ್ನು ಹಿಂಪಡೆಯಲಾಗಿದೆ ಎಂದು ಸ್ಪಷ್ಟಪಡಿಸಿದೆ.

ಮಧ್ಯಪ್ರಾಚ್ಯದಲ್ಲಿ ಉಂಟಾಗಿದ್ದ ಉದ್ವಿಗ್ನತೆ ಹಾಗೂ ಕಚ್ಚಾ ತೈಲ ಪೂರೈಕೆಯಲ್ಲಿನ ವ್ಯತ್ಯಯದಿಂದ ಜಾಗತಿಕ ಮಟ್ಟದಲ್ಲಿ ಇಂಧನ ಮಾರುಕಟ್ಟೆ ಅಸ್ಥಿರಗೊಂಡಿತ್ತು. ಇದರ ಪರಿಣಾಮವಾಗಿ ಭಾರತದಲ್ಲಿಯೂ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆಯ ಮೇಲೆ ಒತ್ತಡ ಹೆಚ್ಚಾಗುವ ಸಾಧ್ಯತೆ ಎದುರಾಗಿತ್ತು. ಚಿಲ್ಲರೆ ಗ್ರಾಹಕರಿಗೆ ಇಂಧನ ಕೊರತೆಯಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಕೇಂದ್ರ ಸರ್ಕಾರ ಜೂನ್ 12ರಂದು ತುರ್ತು ನಿರ್ಬಂಧಗಳನ್ನು ಜಾರಿಗೊಳಿಸಿತ್ತು.

ಆ ಸಂದರ್ಭದಲ್ಲಿ ವಾಣಿಜ್ಯ, ಕೈಗಾರಿಕಾ ಹಾಗೂ ಸಾಂಸ್ಥಿಕ ಬಳಕೆದಾರರು ಪೆಟ್ರೋಲ್ ಬಂಕ್‌ಗಳಿಂದ ನೇರವಾಗಿ ಇಂಧನ ಖರೀದಿಸುವುದನ್ನು ನಿಷೇಧಿಸಲಾಗಿತ್ತು. ಅವರು ತಮ್ಮದೇ ಗ್ರಾಹಕ ಪಂಪ್‌ಗಳ ಮೂಲಕ ಅಥವಾ ಬಲ್ಕ್ ಸರಬರಾಜಿನ ಮೂಲಕ ಇಂಧನ ಪಡೆಯುವಂತೆ ಸೂಚಿಸಲಾಗಿತ್ತು. ಅಲ್ಲದೆ, ವಾಹನದ ಇಂಧನ ಟ್ಯಾಂಕ್ ಅಥವಾ ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆ ಅನುಮೋದಿಸಿದ ಕಂಟೇನರ್‌ಗಳಿಗೆ ಮಾತ್ರ ಇಂಧನ ತುಂಬಲು ಅವಕಾಶ ನೀಡಲಾಗಿತ್ತು. ಒಂದು ವಾಹನ ಅಥವಾ ಗ್ರಾಹಕರಿಗೆ ದಿನಕ್ಕೆ 200 ಲೀಟರ್‌ಗಿಂತ ಹೆಚ್ಚು ಡೀಸೆಲ್ ಮಾರಾಟ ಮಾಡದಂತೆ ಎಲ್ಲಾ ಚಿಲ್ಲರೆ ಪೆಟ್ರೋಲ್ ಬಂಕ್‌ಗಳಿಗೆ ಸೂಚಿಸಲಾಗಿತ್ತು.

ಆದಿಲ್ ಪಾಷರ ಮೂರು ಕವನ ಸಂಕಲನ ಬಿಡುಗಡೆ


ಮೈಸೂರಿನ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಕವಿ ಆದಿಲ್ ಪಾಷ ಅವರ ಮೂರು ಕವನ ಸಂಕಲನಗಳನ್ನು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಬಿಡುಗಡೆಗೊಳಿಸಿದರು.

ಮೈಸೂರು, ಜೂ.30– ಕವಿ ಯಾವುದೇ ಒಂದು ಧರ್ಮವನ್ನು ವೈಭವೀಕರಿಸದೆ ಸಾಮರಸ್ಯದ ಸಾಹಿತ್ಯ ಕೃಷಿ ಮಾಡಬೇಕು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಹೇಳಿದರು.

ಸಿರಿಗನ್ನಡ ವೇದಿಕೆಯ ಮೈಸೂರು ನಗರ ಘಟಕ ಹಾಗೂ ಋಷಿ ಪ್ರಕಾಶನದ ವತಿಯಿಂದ ವಿಜಯನಗರದ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಕವಿ ಆದಿಲ್ ಪಾಷ ಅವರ 'ನೀ ನನ್ನ ಚೈತ್ರ', 'ಹರ್ಷೋತ್ಸವ' ಹಾಗೂ 'ಆದಿರಾಗ' ಕವನ ಸಂಕಲನಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಉತ್ತಮ ಕವಿಗೆ ಜಾತಿ, ಧರ್ಮ, ಭಾಷೆಯ ಮಿತಿ ಇರುವುದಿಲ್ಲ ಎಂದರು.

ಇಡೀ ವಿಶ್ವ ಯುದ್ಧದ ಭಯದಲ್ಲಿದೆ. ಯುದ್ಧಕಾಗಿ ಅಪಾರ ಹಣ ವ್ಯಯಿಸಲಾಗುತ್ತಿದೆ. ಎಲ್ಲಾ ದೇಶಗಳು ಯುದ್ಧ ಸಾಮಗ್ರಿಗಳನ್ನು ತಯಾರು ಮಾಡಲು ಬಳಸುವ ಹಣದಲ್ಲಿ ವಿಶ್ವದ ಒಂದು ಶತಮಾನದ ಬಡ ಜನರ ಅಗತ್ಯಗಳನ್ನು ಪೂರೈಸಬಹುದು. ವಿನಾಶ ಕಾರಿಯಾದ ಅಣುಬಾಂಬ್‌ಗಳ ತಯಾರಿಕೆಯಿಂದ ಜೀವಕುಲ ನಾಶವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.


ಸಾಹಿತಿ ಟಿ.ಸತೀಶ್ ಜವರೇಗೌಡ ಮಾತನಾಡಿ, ಕನ್ನಡ ಸಾಹಿತ್ಯಕ್ಕೆ ಮುಸ್ಲಿಂ ಸಾಹಿತಿಗಳ ಕೊಡುಗೆ ಅಪಾರ ಮತ್ತು ಅನನ್ಯ. ತಮ್ಮ ಸಮುದಾಯ ಮಾತ್ರವಲ್ಲದೆ ಇತರೆ ಸಮುದಾಯದ ಸಂವೇದನೆಗಳನ್ನು ಸಮರ್ಪಕ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಕನ್ನಡ ಸಾಹಿತ್ಯದ ಬಹುತ್ವದ ಬೇರುಗಳನ್ನು ಸುಭದ್ರಗೊಳಿಸಿದ್ದಾರೆ. ನಾಡಿನ ಸರ್ವಜನಾಂಗದ ತೋಟದಲ್ಲಿ ವೈಚಾರಿಕತೆ ಮತ್ತು ಸಾಮರಸ್ಯದ ಬೀಜಗಳನ್ನು ಬಿತ್ತುತ್ತಾ ಬಂದಿದ್ದಾರೆ ಎಂದು ಶ್ಲಾಘಿಸಿದರು.

ಸಂತ ಶಿಶುನಾಳ ಶರೀಫರ ಆದಿಯಾಗಿ ಬೊಳುವಾರು ಮಹಮ್ಮದ್ ಕುಂಞ, ಕೆ.ಎಸ್.ನಿಸಾರ್ ಅಹಮದ್, ಸಾರಾ ಅಬೂಬಕ್ಕರ್, ಭಾನು ಮುಷ್ತಾಕ್, ರಹಮತ್ ತರೀಕೆರೆ, ಅಬ್ಬಾಸ್ ಮೇಲಿನಮನಿ, ಡಿ.ಬಿ.ರಜಿಯಾ, ಬಿ.ಎಂ.ಹನೀಫ್, ಆರೀಫ್ ರಾಜಾ, ಫಾತಿಮಾ ರಲಿಯಾ, ಶಿ.ಜು.ಪಾಷ ಮೊದಲಾದ ಬರಹಗಾರರು ಕನ್ನಡ ಸಾಹಿತ್ಯವನ್ನು ಗಟ್ಟಿಗೊಳಿಸಿದ್ದಾರೆ. ಅದರಲ್ಲೂ ಭಾನು ಮುಷ್ತಾಕ್ ಅವರು ಕನ್ನಡಕ್ಕೆ ಮೊಟ್ಟ ಮೊದಲಿಗೆ ಬೂಕರ್ ಪ್ರಶಸ್ತಿ ತಂದುಕೊಡುವ ಮೂಲಕ ನಮ್ಮ ಸಾಹಿತ್ಯಕ್ಕೆ ಮತ್ತೊಮ್ಮೆ ಜಾಗತಿಕವಾಗಿ ಖ್ಯಾತಿ ತಂದುಕೊಟ್ಟಿದ್ದಾರೆ ಎಂದು ಬಣ್ಣಿಸಿದರು.

ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಎಂ.ಬಿ. ಸಂತೋಷ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. 'ನೀ ನನ್ನ ಚೈತ್ರ' ಕವನ ಸಂಕಲನ ಕುರಿತು ಹಿರಿಯ ಕಥೆಗಾರ ಡಾ.ಯಲ್ಲಪ್ಪ ಕೆ.ಕೆ.ಪುರ, 'ಹರ್ಷೋತ್ಸವ' ಕವನ ಸಂಕಲನ ಕುರಿತು ಸಾಹಿತಿ ಟಿ.ಸತೀಶ್ ಜವರೇಗೌಡ, 'ಆದಿರಾಗ' ಕವನ ಸಂಕಲನ ಕುರಿತು ಕವಯಿತ್ರಿ ಸೌಗಂಧಿಕಾ ಜೋಯಿಸ್ ಮಾತನಾಡಿದರು.

ವೇದಿಕೆಯಲ್ಲಿ ಡಯಟ್‌ನ ಹಿರಿಯ ಉಪನ್ಯಾಸಕಿ ಅಲ್ ಹುಸ್ನ, ಕೃತಿಕಾರ ಆದಿಲ್ ಪಾಷ(ಆದೀಶ), ಸಿರಿಗನ್ನಡ ವೇದಿಕೆಯ ನಗರ ಘಟಕ ಗೌರವಾಧ್ಯಕ್ಷ ಬಿ.ಬಾಲಕೃಷ್ಣಯ್ಯ, ಪ್ರಧಾನ ಕಾರ್ಯ ದರ್ಶಿ ಸಿ.ಎಸ್. ರಾಘವೇಂದ್ರ, ಜಂಟಿ ಕಾರ್ಯದರ್ಶಿಗಳಾದ ಮೊಹಮ್ಮದ್ ಹುಮಾಯೂನ್ ಮತ್ತು ಪರಮೇಶ್ ಕೆ.ಉತ್ತನಹಳ್ಳಿ ಉಪಸ್ಥಿತರಿದ್ದರು.

ಇಂದು ಮೈಸೂರಿಗೆ ಮಾಜಿ ಸಿಎಂ ಸಿದ್ದರಾಮಯ್ಯ



ಮೈಸೂರು,ಜೂ.30(ಪಿಎಂ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜು.1ರಂದು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಬೆಳಗ್ಗೆ 9ಕ್ಕೆ ಬೆಂಗಳೂರು ನಿರ್ಗಮಿಸುವ ಅವರು (ರಸ್ತೆ ಮೂಲಕ) ಬೆಳಗ್ಗೆ 11ಕ್ಕೆ ನಂಜನಗೂಡು ತಾಲೂಕಿನ ದೇವನೂರಿನಲ್ಲಿ ಶ್ರೀಗುರು ಮಲ್ಲೇಶ್ವರ ಮಹಾಸಂಸ್ಥಾನ ದಾಸೋಹ ಮಠದಿಂದ ಆಯೋಜಿಸಿರುವ ಮಹಾತ್ಮ ಶ್ರೀ ಗುರು ಮಲ್ಲೇಶ್ವರರ 127ನೇ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಬಳಿಕ ಸಂಜೆ 4ಕ್ಕೆ ಇಲ್ಲಿಂದ ನಿರ್ಗಮಿಸಿ ಸಂಜೆ 6.30ಕ್ಕೆ ಬೆಂಗಳೂರು ತಲುಪಲಿದ್ದಾರೆ.

ಅಭಿನಂದನೆ



ನೂತನ ವಿಧಾನ ಪರಿಷತ್ ಸದಸ್ಯ ಆರ್.ರಘು ಕೌಟಿಲ್ಯ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಅಭಿನಂದಿಸಿದರು. ಈ ವೇಳೆ ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್ ಗೌಡ, ಮುಖಂಡರಾದ ಎಸ್.ಕೆ.ದಿನೇಶ್, ಕಿರಣ್ ಮತ್ತಿತರರು ಉಪಸ್ಥಿತರಿದ್ದರು.

ಸಾಲು ಮರದ ತಿಮ್ಮಕ್ಕರ ಜನ್ಮ ದಿನಾಚರಣೆ


ಕರ್ನಾಟಕ ಪರಿಸರ ಸಂರಕ್ಷಣೆ ವೇದಿಕೆ ವತಿಯಿಂದ ಮೈಸೂರಿನ ಹೆಬ್ಬಾಳು ಬಸವನಗುಡಿ ಬಳಿ ದಿವಂಗತರಾದ ಸಾಲು ಮರದ ತಿಮ್ಮಕ್ಕನವರ 115ನೇ ಜನ್ಮ ದಿನವನ್ನು ಗಿಡ ನೆಡುವುದು ಹಾಗೂ ಅನ್ನ ಸಂತರ್ಪಣೆ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ನಗರ ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ವೇದಿಕೆಯ ಅಧ್ಯಕ್ಷ ದಿನೇಶ್, ಅರ್ಜುನ್, ಆನಂದ್, ಮಹೇಶ್, ಮನು, ಚಂದ್ರು, ದೀಪು, ಹರೀಶ್, ಪುಟ್ಟರಾಜು, ರಮೇಶ್, ಪವನ್, ಗುಂಡ ಮತ್ತಿತರರು ಪಾಲ್ಗೊಂಡಿದ್ದರು.

ಶರಣ ಶರಣೆಯರ ಹೃದಯಜಂಗಮ ಅಲ್ಲಮಪ್ರಭು

ಬಸವ ಜಯಂತಿಯಲ್ಲಿ ವಚನ ಕುಮಾರಸ್ವಾಮಿ ಅಭಿಮತ


ಬಸವಧರ್ಮ ಕೇಂದ್ರ ಚಾರಿಟಬಲ್ ಟ್ರಸ್ಟ್ ವತಿಯಿಂದ ಕೆ.ಆರ್.ಪೇಟೆ ತಾಲೂಕಿನ ಕಾಪನಹಳ್ಳಿ ಗವಿಮಠದ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರ ಕ್ಷೇತ್ರದಲ್ಲಿ ಬಸವ ಜಯಂತಿ ಹಮ್ಮಿಕೊಳ್ಳಲಾಗಿತ್ತು.

ಮೈಸೂರು, ಜೂ.30– ಸಕಲ ಶರಣ–ಶರಣೆಯರ ಹೃದಯಜಂಗಮ ಅಲ್ಲಮಪ್ರಭು ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ಬಸವಧರ್ಮ ಕೇಂದ್ರ ಚಾರಿಟಬಲ್ ಟ್ರಸ್ಟ್ ವತಿಯಿಂದ ಕೆ.ಆರ್.ಪೇಟೆ ತಾಲೂಕಿನ ಕಾಪನಹಳ್ಳಿ ಗವಿಮಠದ ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಉಪನ್ಯಾಸ ನೀಡಿ ಮಾತನಾಡಿದ ಅವರು, ಅಲ್ಲಮಪ್ರಭುಗಳ ವಚನಗಳು ಕೇವಲ ಸಾಹಿತ್ಯವಲ್ಲ, ಅವು ಮಾನವನನ್ನು ದೈವತ್ವದತ್ತ ಕೊಂಡೊಯ್ಯುವ ಬದುಕಿನ ದಿಕ್ಸೂಚಿಗಳಾಗಿವೆ ಎಂದರು.

ನೀರು ತನ್ನ ಪ್ರತಿಯೊಂದು ಹನಿಯಿಂದ ಜೀವಜಗತ್ತನ್ನು ಪೋಷಿಸುತ್ತದೆ. ಬೆಂಕಿ ತನ್ನ ಸಂಪೂರ್ಣ ಸ್ವರೂಪದಿಂದ ಉಷ್ಣ ಮತ್ತು ಬೆಳಕನ್ನು ನೀಡುತ್ತದೆ. ಗಾಳಿ ತನ್ನ ಎಲ್ಲ ದಿಕ್ಕುಗಳಿಂದ ಜೀವಿಗಳಿಗೆ ಉಸಿರಾಗಿ, ಚೈತನ್ಯವಾಗಿ ಕಾರ್ಯನಿರ್ವಹಿಸುತ್ತದೆ. ಇದೇ ರೀತಿ ಶರಣರು ತಮ್ಮನ್ನು ಸಂಪೂರ್ಣವಾಗಿ ದೇವರ ಕಾರ್ಯದೊಂದಿಗೆ ಸಮಾಜದ ಒಳಿತಿಗಾಗಿ ಸಮರ್ಪಿಸಿಕೊಂಡು ಬದುಕು ನಡೆಸಿದರು. ಅವರ ಜೀವನವೇ ದೇವರ ಪ್ರತಿರೂಪವಾಯಿತು ಎಂದು ವಿವರಿಸಿದರು.

ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಕಾಪನಹಳ್ಳಿ ಗವಿಮಠದ ಶ್ರೀ ಸ್ವತಂತ್ರ ಚೆನ್ನವೀರ ಸ್ವಾಮೀಜಿ, ಬಸವಣ್ಣನವರು ಸಮಾಜದಲ್ಲಿದ್ದ ಅಜ್ಞಾನ, ಅಸಮಾನತೆ ಮತ್ತು ಮೂಢನಂಬಿಕೆಗಳನ್ನು ಹೋಗಲಾಡಿಸಿ ಜನರನ್ನು ಜ್ಞಾನದ ಬೆಳಕಿನೆಡೆಗೆ ಕರೆದೊಯ್ದ ಮಹಾನ್ ಸಮಾಜ ಸುಧಾರಕರು. ಸಮಾಜ ತಿರಸ್ಕರಿಸಿದ್ದ ಮಹಿಳೆಯ ಮಾನವೀಯತೆ ಮತ್ತು ಭಕ್ತಿಯನ್ನು ಗುರುತಿಸಿ, ಆಕೆಯನ್ನು ಶರಣೆ ಸಂಕವ್ವೆಯನ್ನಾಗಿ ರೂಪಿಸಿದರು. ಜನ್ಮ, ಜಾತಿ, ವೃತ್ತಿಗಿಂತ ಗುಣ, ಜ್ಞಾನ ಮತ್ತು ಭಕ್ತಿಯೇ ಶ್ರೇಷ್ಠ ಎಂಬ ಮಾನದಂಡ ಎಂಬ ಬಸವಣ್ಣನವರ ಸಂದೇಶ ಎಂದಿಗೂ ಅನುಕರಣೀಯ ಎಂದರು.

ಬೆಂಗಳೂರು ಬಸವಧರ್ಮ ಕೇಂದ್ರದ ಅಧ್ಯಕ್ಷ ಬಸಮ್ಮಿಯ ನಾಗರಾಜು ಮಾತನಾಡಿ, ಬಸವಣ್ಣನವರ ಸಮಾನತೆ, ಕಾಯಕ, ದಾಸೋಹ ಮತ್ತು ಮಾನವೀಯತೆಯ ಸಂದೇಶವನ್ನು ಗ್ರಾಮೀಣ ಪ್ರದೇಶಗಳ ಪ್ರತಿಯೊಂದು ಮನೆಗೂ ತಲುಪಿಸುವ ಅಗತ್ಯವಿದೆ ಎಂದು ಹೇಳಿದರು. ಈ ನಿಟ್ಟಿನಲ್ಲಿ ಬಸವಧರ್ಮ ಕೇಂದ್ರ ಚಾರಿಟಬಲ್ ಟ್ರಸ್ಟ್ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಿರುಗಾವಲು ಗ್ರಾಮದ ವನ್ಯಜೀವಿ ಛಾಯಾಗ್ರಾಹಕ ಕೆ.ಜಿ.ಸಿದ್ಧಲಿಂಗ ಪ್ರಸಾದ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕೆ.ಆರ್.ಪೇಟೆ ತಾಲೂಕು ಘಟಕದ ಅಧ್ಯಕ್ಷ ಸುಜೇಂದ್ರ ಕುಮಾರ್, ನಾಗಮಂಗಲ ತಾಲೂಕು ಘಟಕದ ಅಧ್ಯಕ್ಷ ಎಂ.ಪರಮೇಶ್ವರ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕಟ್ಟೆಹಳ್ಳಿ ಬಸವ ಕೇಂದ್ರದ ಅಧ್ಯಕ್ಷ ಕೆ.ಟಿ.ಪ್ರಕಾಶ್, ಗವಿಮಠದ ಬಸವ ವಿಕಾಸ್, ಬೆಂಗಳೂರು ವಕೀಲೆ ಚಂದ್ರಕಲಾ, ಶರಣು ವಿಶ್ವವಚನ ಫೌಂಡೇಷನ್ ಕೇಂದ್ರೀಯ ಸಂಚಾಲಕ ವಿ.ಲಿಂಗಣ್ಣ, ಬಸವರಾಜು, ಅಂಬಿಗರ ಚೌಡಯ್ಯ ಸಂಘದ ಅಧ್ಯಕ್ಷ ನಂಜಯ್ಯ, ಗವಿಮಠದ ಬಸವರಾಜಸ್ವಾಮಿಗಳು ಮತ್ತು ಭಕ್ತರು ಉಪಸ್ಥಿತರಿದ್ದರು.

ತಮಿಳುನಾಡಿನಲ್ಲಿ ಇನ್ಮೇಲೆ ಎಲ್ಲಾ ಎಸಿ ಬಸ್‌ಗಳೇ!

ಸಾರಿಗೆ ಇಲಾಖೆಯಲ್ಲಿ ಸಿಎಂ ವಿಜಯ್ ಐತಿಹಾಸಿಕ ನಿರ್ಧಾರ



ಚೆನ್ನೈ: ತಮಿಳುನಾಡು ಸಿಎಂ ಆಗಿ ನಟ ಜೋಸೆಫ್ ವಿಜಯ್ ಅವರು ಅಧಿಕಾರ ವಹಿಸಿಕೊಂಡು ಎರಡು ತಿಂಗಳು ಪೂರ್ಣಗೊಳ್ಳುತ್ತಿದೆ. ವಿಜಯ್ ಅವರು ಸಿಎಂ ಆಗಿ ಅಧಿಕಾರ ವಹಿಸಿಕೊಳ್ಳುತ್ತಿದ್ದಂತೆ ಮಹತ್ವದ ನಿರ್ಧಾರಗಳನ್ನು ಕೈಗೊಂಡಿದ್ದರು. ಉಚಿತ ವಿದ್ಯುತ್, ರೈತರ ಸಾಲ ಮನ್ನಾ, ಮಹಿಳೆಯರಿಗೆ ಸರ್ಕಾರಿ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೇರಿದಂತೆ ಮಹತ್ವದ ನಿರ್ಧಾರಗಳನ್ನು ಕೈಗೊಂಡಿದ್ದರು. ಸದ್ಯ ಸಾರಿಗೆ ಇಲಾಖೆ ಕುರಿತಂತೆ ಸಿಎಂ ಮತ್ತೊಂದು ಮಹತ್ವದ ನಿರ್ಧಾರ ಕೈಗೊಂಡಿದ್ದು, ಜನರಿಗೆ ಉತ್ತಮ ಪ್ರಯಾಣ ಸೇವೆಯನ್ನು ನೀಡುವ ಗುರಿಯೊಂದಿಗೆ ಮುಂದಿನ ದಿನಗಳಲ್ಲಿ ಖರೀದಿ ಮಾಡುವ ಎಲ್ಲಾ ಬಸ್‌ಗಳು ಎಸಿ ಬಸ್‌ಗಳು ಇರಬೇಕು ಎಂದು ನಿರ್ಧಾರ ಕೈಗೊಂಡಿದ್ದಾರೆ.

ತಮಿಳುನಾಡು ಸರ್ಕಾರ ಮುಂದಿನ ದಿನಗಳಲ್ಲಿ ಖರೀದಿ ಮಾಡುವ ಎಲ್ಲಾ ಬಸ್ ಗಳು ಎಸಿ ಸೌಕರ್ಯವನ್ನು ಹೊಂದಿರಲಿದೆ. ಈ ಬಗ್ಗೆ ಸಿಎಂ ಸ್ಪಷ್ಟ ಆದೇಶವನ್ನು ನೀಡಿದ್ದಾರೆ. ಈ ಕುರಿತಂತೆ ತಮಿಳುನಾಡು ಸಾರಿಗೆ ಸಚಿವ ಪಾರ್ಥಿಮನ್ ಅವರು ಮಾಹಿತಿ ಹಂಚಿಕೊಂಡಿದ್ದಾರೆ.

ಈ ಬಗ್ಗೆ ಮಾತನಾಡಿರುವ ಸಚಿವ ಪಾರ್ಥಿಮನ್, ಜನರಿಗೆ ಉತ್ತಮ ಮತ್ತು ಹೆಚ್ಚು ಆರಾಮದಾಯಕ ಪ್ರಯಾಣವನ್ನು ಒದಗಿಸಲು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಆಧುನೀಕರಿಸಲು ಟಿವಿಕೆ ಸರ್ಕಾರ ವಿಶೇಷ ಗಮನ ಹರಿಸಿದೆ ಎಂದು ಹೇಳಿದ್ದಾರೆ.

ತಮಿಳುನಾಡಿನ ಪ್ರತಿಯೊಂದು ದೂರದ ಹಳ್ಳಿಗೂ ಬಸ್ ಸೌಲಭ್ಯವನ್ನು ತಲುಪುವುದು ಸಿಎಂ ಅವರ ಗುರಿಯಾಗಿದೆ. ಹೊಸದಾಗಿ ಖರೀದಿಸುವ ಪ್ರತಿಯೊಂದು ಬಸ್‌ನಲ್ಲಿ ಪ್ರಯಾಣಿಕರಿಗೆ ಅಗತ್ಯವಾದ ಸೌಲಭ್ಯಗಳನ್ನು ಹೊಂದಿರಬೇಕು ಮತ್ತು ಯಾವುದೇ ತೊಂದರೆಯಿಲ್ಲದೆ ಪ್ರಯಾಣಿಸಲು ಅವಕಾಶವನ್ನು ಒದಗಿಸಬೇಕು ಎಂದು ಸಿಎಂ ಸೂಚನೆ ನೀಡಿದ್ದಾಗಿ ಸಚಿವರು ತಿಳಿಸಿದ್ದಾರೆ.

ಹೊಸ ಬಸ್‌ಗಳಿಗೆ ಚಾಲನೆ: ತಮಿಳುನಾಡಿನಲ್ಲಿ ಬಿಸಿ, ಶುಷ್ಕ ವಾತಾವರಣ ಇರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಎಲ್ಲಾ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ನೀಡಲು ನಿರ್ಧಾರ ಮಾಡಲಾಗಿದೆ. ಈ ಬಗ್ಗೆ ಒಂದು ಸಮೀಕ್ಷೆ ಮಾಡಲಾಗುತ್ತಿದೆ. ಶೀಘ್ರವೇ ಈ ಬಗ್ಗೆ ಒಂದು ಘೋಷಣೆ ಮಾಡಲಾಗುತ್ತದೆ ಎಂದು ಸಚಿವರು ಹೇಳಿದ್ದಾರೆ.